
# ಅಪರಂಜಿ

ತಿಳಿನಗೆಯ ಕಾರಂಜಿ

ಸೆಪ್ಟೆಂಬರ್–2024

## ಮ್ಯಾಜಿಕಲ್ ವಿಶೇಷಾಂಕ




ಬಿಡಿ ಪ್ರತಿ: ರೂ. 10/–

# Ravi Graphics
OFFSET PRINTERS

*Bringing colours alive*

***What we specialize into :***

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

# bag factory
bagfactory.co.in

## Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

+91 89719 95599 | sales@bagfactory.co.in | bagfactory.co.in




# ಮಹಿಷನಿಗೆ ಈಗ

# ಸೊಳ್ಳೆ ಕಾಟ... ಸೆಲ್ಫೀ ಹುಚ್ಚು !

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2024
**RNI NO. KAR-KAN/2005/15457**

www.mallige.com

NABH ACCREDITED
PATIENT SAFETY & QUALITY OF CARE

Certificate No.: MC-2068




Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

## ಮ್ಯಾಜಿಕಲ್ ವಿಶೇಷಾಂಕ

ಸಂಪುಟ 41
ಸಂಚಿಕೆ – 12
ಸೆಪ್ಟೆಂಬರ್ – 2024

## ಈ ಸಂಚಿಕೆಯಲ್ಲಿ...


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಸ್ನೇಹ ಸೌರಭ | ಶಿವಕುಮಾರ್ | 4 |
| ಮೌನ ಸಾಮ್ರಾಜ್ಯ.... | ಪ್ರಭಾಮಣಿ ನಾಗರಾಜ | 7 |
| ಕರ್ನಲ್ ವೆಕ್ಫೀಲ್ಡ್ | ಡಾ. ಪ್ರಕಾಶ್ | 10 |
| ಕುಜುಜಾಂಗ್‌ಪೋಲಾ.... | ರೂಪಾ ಪೈ | 12 |
| ಮಾನಸಸರೋವರದಲ್ಲಿ.... | ಡಾ. ಶ್ಯಾಮಲಾ ರವಿಶಂಕರ್ | 14 |
| ಆಕಾಶದಲ್ಲಿ ಹಾರಾಡಿದ ಆ ಕ್ಷಣ | ಎಚ್. ಗೋಪಾಲಕೃಷ್ಣ | 16 |
| ತುಂತುರು | ದಂನಆ | 21 |
| ದಿಢೀರ್ ವಿ.ಐ.ಪಿ | ಬೇಲೂರು ರಾಮಮೂರ್ತಿ | 22 |
| ಮರೆಯಲಾರದ ಮಾಯಾ ಲೋಕ | ಜಿ.ವಿ. ನಿರ್ಮಲ | 25 |
| ಕರಾಟೆ ಇಂದ ಖರಾಟೆ | ಉಲ್ಲಾಸ್ ರಾಯಸಂ | 27 |
| ಅಣ್ಣಾವ್ರ ಕಟ್ ಔಟ್...... | ರಾಂಕಿ ಬೆಳ್ಳೂರ್ | 29 |
| ಮನುಜನಿಗೆ ಮಗು ತಂದೆ ! | ಲೀಲಾ ಮಿರ್ಲೆ | 31 |
| ಚಾಕು ಹಾಕೋದಾದ್ರೆ...... | ಅಣಕು ರಾಮನಾಥ್ | 33 |
| ಹೃದಯ ತುಂಬಿದ ಹಾರೈಕೆ | ಜಿ. ವಿ. ಅರುಣ | 35 |
| ಜಗತ್ಪ್ರಸಿದ್ಧ ಜೋಗ್ ಜಲಪಾತ.... | ಗಾಯತ್ರಿ ಮೂರ್ತಿ | 37 |
| ಜಯವರ್ಮನು ಆಳಿದ...... | ಶ್ರೀಧರ ಬಾಣಾವರ | 39 |


ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ,
ಒಳಪುಟಗಳು : ರಾಂಕಿ ಬೆಳ್ಳೂರ್, ಅಶೋಕ್ ಹೆಮ್ಮಿಗೆ

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/-
ವಾರ್ಷಿಕ ಚಂದಾ : ರೂ. 100/-
ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು-560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

"ಮೂಡ" ದಲ್ಲಿ ಅಕ್ರಮ ; ಚರ್ಚೆಗೆ ಸಿದ್ಧ

ಪತ್ರಿಕೆ

ಪಾಪ,ಇದುವರೆಗೂ ಶಾಂತವಾಗಿದ್ದ ಮೈಸೂರಿಗೆ "ಅಭಿವೃದ್ಧಿ" ಕಾಯಿಲೆ ತಟ್ಟುವಂತಿದೆ !!

* * *

ವಾಲ್ಮೀಕಿ ನಿಗಮ ; 3072 ಪುಟಗಳ ಆರೋಪ ಪಟ್ಟಿ

ದಿನಪತ್ರಿಕೆ

ನನ್ನ ಕಾವ್ಯಕ್ಕಿಂತ ದೀರ್ಘವೇ ಅಂತ ಮುನಿಗಳು ಮರುಗಿದರಂತೆ!!

* * *

ಕೇರಳ ಸುದ್ದಿ ; ಪದ್ಮಶ್ರೀ ಪುರಸ್ಕೃತ ಮೆನನ್ ಬಂಧನ

ಪತ್ರಿಕೆ

ಪದಕದ ಹೆಸರನ್ನೇ ಬದಲಿಸುತ್ತಾರೋ ?!!

* * *

ಇನ್ಫೋಸಿಸ್ ಸಂಸ್ಥೆಗೆ 32 ಕೋಟಿ ವಂಚನೆ ನೋಟೀಸ್

ಸುದ್ದಿ

"ನಾರಾಯಣ, ನಾರಾಯಣ" !!

* * *

ಪರಿಪೂರ್ಣ ಸ್ನಾನಕ್ಕೆ "ಸದ್ಗುರು" ಸಾಬೂನು

ಜಾಹೀರಾತು

ಇದರಿಂದ ಆತ್ಮಶುದ್ಧಿಯೂ ಆಗುತ್ತೇನೋ !!

* * *

ಕನ್ನಡಿಗರಿಗೆ ಮೀಸಲಾತಿ; ವಿಶೇಷ ಅಧಿವೇಶನ ನಡೆಸಿ

ಪತ್ರಿಕೆ

ಇದು ಅರಣ್ಯರೋದನ ಆಗದಿರಲಿ !!

* * *

ಅತಿ ವೇಗಚಲನೆ 90% ಸಾವುಗಳು

ಪತ್ರಿಕೆ

ಚಿತ್ರಗುಪ್ತ ನಸುನಕ್ಕನಂತೆ !!

●

# “ನಮ್ಮ ನಿಮ್ಮಲ್ಲಿ”

**ಶಿವಕುಮಾರ್**

ಈ ಸಂಚಿಕೆಗೆ ತಮ್ಮ ಅವಿಸ್ಮರಣೀಯವೆನ್ನ-ಬಹುದಾದ ಅನುಭವವೊಂದನ್ನು ದಾಖಲಿಸಿರೆಂದು ನಮ್ಮ ಬರಹಗಾರ ಬಳಗವನ್ನು ಕೋರಿದ್ದೆವು. ಈ ಕೋರಿಕೆಗೆ ಅವರುಗಳು ಸ್ಪಂದಿಸಿರುವ ರೀತಿ ನಿಜಕ್ಕೂ ಅಚ್ಚರಿಯೆನಿಸುತ್ತದೆ. ನಮ್ಮ ನೀರೀಕ್ಷೆಗೂ ಮೀರಿ ಲೇಖನಗಳು ಹರಿದು ಬಂದಿವೆ. ಸಂಚಿಕೆಯ ಪುಟಮಿತಿಯ ಕಾರಣದಿಂದ ಹಲವು ಲೇಖನಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ನಿರ್ಧಾರವನ್ನು ತೆಗೆದುಕೊಳ್ಳಬೇಕಾಯಿತು.

ಹಾಸ್ಯ ಲೇಖನಗಳನ್ನು ಬರೆಯುವುದಕ್ಕೆ ಸಂವೇದನೆ, ಸಂವಹನಾ ಚಾತುರ್ಯ ಎರಡೂ ಅಗತ್ಯ. ಇದಕ್ಕೆ ಪೂರಕವಾಗಿ ಒಂದು ಪ್ರೌಢ ಮನೋಭಾವ, ಹೃದಯ ವೈಶಾಲ್ಯತೆ ಸೇರಿದಾಗ ಅನುಭವಗಳು ಮ್ಯಾಜಿಕಲ್ ಆಗುತ್ತವೆ. ಅಂತಹ ಅನುಭವಗಳ ರಾಶಿ ನಿಮ್ಮ ಮುಂದಿದೆ. ಪ್ರಭಾಮಣಿಯವರ ಮೌನ ಸಾಮ್ರಾಜ್ಯವಾಗಲೀ, ಶ್ಯಾಮಲಾರವರ ಮಾನಸ ಸರೋವರದ ಅಪೂರ್ವ ಅನುಭೂತಿಯಾಗಲೀ, ಓದುಗರನ್ನು ಒಂದು ಉನ್ನತ ಸಂವೇದನೆಗೆ ಪ್ರಚೋದಿಸುತ್ತವೆ. ಶ್ರೀಧರ ಬಾಣಾವರ ಅವರ ಕಾಂಬೋಡಿಯಾ ಸಂಸ್ಕೃತಿಯ ಚಿತ್ರಣ ಅವರ ನಿರೂಪಣಾ ಕುಶಲತೆಯ ದ್ಯೋತಕ. ಗೋಪಾಲಕೃಷ್ಣರ ಮೆಡಿಕಲ್ ಚೆಕಪ್ ಎಲ್ಲರ ಆನುಭವಕ್ಕೂ ಬಂದದ್ದೇ. ಆ ಅನುಭವದ ಮ್ಯಾಜಿಕಾಲಿಟಿಯ ಬಗ್ಗೆ ನನ್ನ ಸ್ವಂತ ಅನುಭವದ ಪುರಾವೆ ಇದೆ. ಬೇಲೂರರ ದಿಢೀರ್ ವಿಐಪಿ, ತಮ್ಮನ್ನು ತಾವೇ ಗೇಲಿಗೆ ಒಳಪಡಿಸುವ ಆರೋಗ್ಯಕರ ದೃಷ್ಟಿಗೆ ಬಾಗಿಲನ್ನು ತೆರೆಯುತ್ತದೆ. ರೂಪಾ ಪೈ ಅವರು ಅಂತರ ರಾಷ್ಟ್ರೀಯ ಖ್ಯಾತಿಯ ಲೇಖಕಿ. ಇವರ ಭೂತಾನ್ ಯಾತ್ರೆಯ ಡೈರಿ ನಿಜಕ್ಕೂ ಒಂದು ಹೃದಯಸ್ಪರ್ಶಿ ಕಥನ. ರಾಮನಾಥರ ಆಂತರ್ಯದ ಧೀಮಂತತೆಯ ಸೆಲೆ ಅನುಭವ ಜನ್ಯವಿರಬಹುದೇ ಎನ್ನುವಷ್ಟು ಆಪ್ತವಾಗಿದೆ.

ಒಟ್ಟಿನಲ್ಲಿ ನಮ್ಮ ಎಲ್ಲ ಲೇಖಕರೂ ತಮ್ಮ ಅಂತರಂಗವನ್ನು ನಿಮ್ಮ ಮುಂದೆ ಬಿಚ್ಚಿಟ್ಟಿದ್ದಾರೆ. ವೈವಿಧ್ಯಮಯ ಸಂಗತಿಗಳು ಯಾವ ರೀತಿ ನಮ್ಮ ಮನಸ್ಸಿನ ಮೇಲೆ ಆಳವಾದ ಪರಿಣಾಮವನ್ನು ಉಂಟುಮಾಡಬಲ್ಲುವೆಂಬುದನ್ನು ಈ ಬರಹಗಳಲ್ಲಿ ಕಾಣಬಹುದು. ಭಾವನೆಗಳ ರಸದೌತಣ ನಿಮ್ಮ ಮುಂದಿದೆ. ಮನದುಂಬಿ ಸ್ವೀಕರಿಸಿ. ■

**ಮ್ಯಾಜಿಕಲ್ ಮೊಮೆಂಟ್ಸ್‌ಯಾರಿಗೆ ಹೇಗೆ**

ಲೇಖಕರಿಗೆ – ಬಹುಶ: ನನ್ನಕಥೆ ಸ್ವೀಕೃತವಾಗಿಲ್ಲ ಎಂದುಕೊಂಡ ಮರುವಾರವೇ ಪತ್ರಿಕೆಯಲ್ಲಿ ಅದು ಪ್ರಕಟವಾಗಿರೋದು.

ಗೃಹಿಣಿಗೆ–ಯಜಮಾನರು ಅಫಿಷಿಯಲ್ ಟೂರ್ ಹೋಗ್ತಿದಾರಲ್ಲ ಅಂತ ಬೇಜಾರಾಗಿರುವ ದಿನಗಳಲ್ಲಿ ಟೂರ್‌ಕ್ಯಾನ್ಸಲ್ ಆಗೋದು.

ಗೃಹಸ್ಥನಿಗೆ– ಬೆಳಗ್ಗೆ ಆಫೀಸಿಗೆ ಹೋಗುವಾಗ ಹೆಂಡ್ತಿಜೊತೆ ಸಖತ್ ಜಗಳ ಆಡಿಕೊಂಡು ಹೋಗಿದ್ದು ಸಂಜೆ ಆಫೀಸಿನಿಂದ ಹಿಂದಿರುಗಿ ಬಂದಾಗ ಇವತ್ತು ನನಗೆ ಉಪವಾಸವೇ ಗತಿ ಎಂದುಕೊಂಡ ಗಂಡನಿಗೆ ಎಂದಿಗಿಂತ ರುಚಿರುಚಿಯಾದ ಊಟ ಸಿಗೋದು.

# ಸ್ನೇಹ ಸೌರಭ

ಶಿವಕುಮಾರ್

ಅಂದು ಮುಂಜಾವಿನಲ್ಲಿ ನನಗೆ ಎಚ್ಚರವಾದಾಗ ಮಬ್ಬುಗತ್ತಲು. ಕೈಗಡಿಯಾರ ನೋಡಿದೆ. ನಾಲ್ಕುಗಂಟೆ. ಮಗ್ಗುಲಿಗೆ ತಿರುಗಿ ಹೊದ್ದು ಮಲಗುವ ಸನ್ನಾಹ ನಡೆಸಿದ್ದಾಗಲೇ, ರೂಮಿನ ಆಚೆಯಿಂದ ನನ್ನ ಗೆಳೆಯ "ಹೊರಗೆ ಬಾರೋ, ಕಮ್ ಔಟ್ ಎಂಡ್ ಎಂಜಾಯ್ ದ ಸೀನೆರಿ" ಅಂತ ಕೂಗು ಹಾಕಿದ.

ಇಂತಹ ಅವೇಳೆಯಲ್ಲಿ ಇವ ರೂಮಿನಾಚೆ ಏನು ಮಾಡುತ್ತಿದ್ದಾನೆ ಅಂತ ಒಂದು ಕ್ಷಣ ಹೆದರಿಕೆ ಆಯಿತು. "ಇಷ್ಟು ಬೇಗ ಎದ್ದು ಏನ್ಮಾಡ್ತಾ ಇದ್ದೀಯೋ, ಒಳಗೆ ಬಂದು ಬಾಗಿಲು ಹಾಕು. ಹಾವು ಹಲ್ಲಿ ಬಂದಾತು" ಮಲಗಿದ್ದಂತೆಯೇ ನಾನು ದಬಾಯಿಸಿದೆ. ಅವನು ಒಳಗೆ ಬಂದ. "ಆರು ಗಂಟೆ ಆಗ್ತಾ ಬಂತು. ಏಳು ನನ್ರಾಜಾ. ಇನ್ನು ಯಾವಾಗ ನೀನು ನಮ್ಮ ಊರು ನೋಡೋದು?" ಅಂದು, ಯಾವುದೋ ಹಾಡನ್ನು ಗುಣುಗುಣಿಸುತ್ತಾ, ನನಗೋಸ್ಕರ ತಾನೇ ಮಾಡಿದ್ದ ಟೀಯಿದ್ದ ಕಪ್ಪನ್ನು ನನ್ನ ಮುಂದೆ ಹಿಡಿದ. ನಾನು ಮತ್ತೊಮ್ಮೆ ಗಡಿಯಾರ ನೋಡಿದೆ. ಅದು ತಲೆಕೆಳಗಾಗಿತ್ತು. ಹಬೆಯಾಡುತ್ತಿದ್ದ ಟೀ ಕುಡಿಯುತ್ತಾ, ಗೆಳೆಯನೊಡನೆ ರೂಮಿನಾಚೆಯ ಬಾಲ್ಕನಿಗೆ ಬಂದೆ.

ಹೊರಗೆ ಕಣ್ಣಿಗೆ ಕಾಣುವಷ್ಟು ದೂರಕ್ಕೂ ಇಳಿಜಾರಿನಲ್ಲಿ, ಕಾಫಿಗಿಡಗಳು ಹರಡಿದ್ದವು. ಅವುಗಳ ಮಧ್ಯೆ ಅಲ್ಲಲ್ಲಿ ಬೆಳೆದಿದ್ದ ಸಿಲ್ವರ್ ಓಕ್ ಮರಗಳು ಮುಗಿಲನ್ನು ಚುಂಬಿಸುತ್ತಿದ್ದವು. ಬೆಳಗಿನ ಜಾವದ ಮಂಜು ಕಣಿವೆಯನ್ನು ಕವಿದಿತ್ತು. ಮರದ ಎಲೆಗಳ ಮೇಲೆ ಶೇಖರವಾಗಿದ್ದ ಮಂಜಿನ ಹನಿಗಳು ಕಾಫಿಗಿಡಗಳ ಮೇಲೆ ತೊಟ್ಟಿಕ್ಕುತ್ತ ಒಂದು ಸಣ್ಣ ಮಳೆಯನ್ನೇ ಸೃಷ್ಟಿಸಿದ್ದವು. ನೋಡುತ್ತಿದ್ದಂತೆ ಸೂರ್ಯನ ಮೊದಲ ಕಿರಣಗಳ ಬಿಸಿಲುಗೋಲುಗಳು ತೋಟವನ್ನು ಆವರಿಸಿದವು. ದಟ್ಟವಾಗಿ ಕವಿದಿದ್ದ ಮಂಜು ಬಿಸಿಲಿಗೆ ತೆಳುವಾಗುತ್ತಿದ್ದಂತೆ, ಬಿಸಿಲುಗೋಲುಗಳಿಗೆ ಬಣ್ಣ ತುಂಬಿ, ಎಲ್ಲೆಲ್ಲಿ ನೋಡಿದರೂ ತೋಟದಲ್ಲಿ ಕಾಮನಬಿಲ್ಲುಗಳು ಸಂಭ್ರಮಿಸಿದ್ದವು.

"ಬೆಂಗಳೂರಿಗೆ ಹಿಂತಿರುಗಿದ ಮೇಲೆ ಇದನ್ನೆಲ್ಲಾ ಹೇಳಿದರೆ, ಯಾರೂ ನಂಬುವುದಿಲ್ಲವಲ್ಲೋ" ಅಂತ ನನ್ನ ಗೆಳೆಯನೊಡನೆ ನನ್ನ ದುಃಖ ತೋಡಿಕೊಂಡೆ.

"ಈ ಬರಹಗಾರರ ಹಣೇಬರಹವೇ ಹೀಗೆ. ಕಣ್ಣ ಮುಂದೆ ಇರೋ ದೃಶ್ಯಾನ ನೋಡಿ ಆನಂದಿಸೋ ಬದಲು, ಅದನ್ನು ಇತರರಿಗೆ ವಿವರಿಸೋ ಅವಸರ. ಅದಿರಲಿ, ಇವತ್ತು ಹೇಮಾವತಿ ಹಿನ್ನೀರಿಗೆ ಹೋಗೋಣ. ನಿನಗೆ ನಮ್ಮ ಮಲೆನಾಡಿನ ಪಕ್ಷಿಗಳ ಬಗ್ಗೆ ಕಲಿಸೋದು ಬೇಕಾದಷ್ಟಿದೆ." ಎಂದು ಹೇಳಿ ಒಳಗೆ ನಡೆದ. ಬಾಲ್ಕನಿಯಲ್ಲಿದ್ದ ಟೇಪ್‌ರೆಕಾರ್ಡರ್ "ಪುಕಾರ್ ಥಾ, ಚಲಾಹು ಮೇ, ಗಲೀ ಗಲೀ ಬಹಾರ್ ಮೇ" ಎಂದು ಹಾಡುತ್ತಿತ್ತು.

ಹಿಂದಿನ ದಿನ ಬೆಳಗ್ಗೆ, ನಾನು ಬೆಂಗಳೂರಿನಿಂದ ಹೊರಟಿದ್ದೆವು. ನೆಲಮಂಗಲದ ಹತ್ತಿರ ಎಡಕ್ಕೆ ತಿರುಗಿ ಕುಣಿಗಲ್ ರಸ್ತೆ ಸೇರಿ ಪ್ರಯಾಣ ಮಾಡುತ್ತಿದ್ದಂತೆ ನನ್ನ ಗೆಳೆಯ ಮಾತಿಗೆ ಶುರು ಹಚ್ಚಿದ.

"ಈಗ ನಾವು ಅರ್ಕಾವತಿ ಕಣಿವೇನ ದಾಟ್ತಾ ಇದ್ದೇವೆ. ಇನ್ನು ಸ್ವಲ್ಪ ದೂರದಲ್ಲೇ ಕುಮುದ್ವತಿ ನದಿಯ ಪಾತ್ರ. ಹ್ಞಾ ಇಲ್ಲಿ ಬಲಗಡೆ ನೋಡು ಶಿವು, ಈ ಗುರುತು ಕಲ್ಲಿನ

ಎಡಕ್ಕೆ ಹನಿಯುವ ನೀರು ಅರ್ಕಾವತಿ ಸೇರಿದರೆ, ಬಲಕ್ಕೆ ಹನಿಯುವ ನೀರೆಲ್ಲಾ ಕುಮುದ್ವತಿಯ ಪಾಲು..." ಎಂದು ನನ್ನ ಗೆಳೆಯ ವಿವರಿಸುತ್ತಿದ್ದಂತೆ ಶಿವಗಂಗೆ ಬೆಟ್ಟ ಕಣ್ಣಿಗೆ ಬಿತ್ತು.

"ಅಲ್ಲಿ ಕಾಣ್ತಾ ಇದೆಯಲ್ಲಾ ಆ ಶಿವಗಂಗೆ ಬೆಟ್ಟ. ಅಲ್ಲಿಂದ ಮೂರು ಸಣ್ಣ ನದಿಗಳು ಹರಿದು ಬರುತ್ವೆ. ಆ ನದಿಗಳ ಹೆಸರುಗಳೇ ಕೇಳಲು ಇಂಪು. ನಳಿನಿ, ನಾಗಿನಿ ಹಾಗೂ ಕಮಲಾ ನದಿಗಳ ಸಂಗಮವನ್ನು ಇನ್ನು ಸ್ವಲ್ಪ ದೂರ ಸಾಗಿದನಂತರ ಕಾಣಬಹುದು. ಹಿಂದೊಮ್ಮೆ ಇಲ್ಲಿ ಆಳ್ವಿಕೆ ನಡೆಸಿದ್ದ ನೃಹ ಚಕ್ರವರ್ತಿ ಈ ಸಂಗಮದಲ್ಲಿ ಮಿಂದು ತನ್ನ ತೊನ್ನನ್ನು ಗುಣಪಡಿಸಿಕೊಂಡನಂತೆ." ನನ್ನ ಗೆಳೆಯ ಇದನ್ನೆಲ್ಲಾ ವಿವರಿಸುತ್ತಿದ್ದಾಗ ರಸ್ತೆಯ ಎಡಬದಿಯಲ್ಲಿ "ನಾಗಿನಿ" ಎಂಬ ಫಲಕ ಕಾಣಿಸಿತು. "ಇಷ್ಟೆಲ್ಲಾ ಕೆಲಸಕ್ಕೆ ಬಾರದ ಮಾಹಿತಿಯನ್ನ ಎಲ್ಲಿ ಮತ್ತು ಯಾಕೆ ಸಂಪಾದಿಸಿದೆ ?" ಎಂದು ಪ್ರಶ್ನಿಸಿದೆ. ಆ ಪ್ರಶ್ನೆಯಲ್ಲಿ ಕುಹಕವಿರಲಿಲ್ಲ. ಬದಲಿಗೆ ಅದರಲ್ಲಿ ಮೆಚ್ಚುಗೆ ಮಿಶ್ರಿತ ಕುತೂಹಲವಿತ್ತು.

"ನನ್ನ ಚಿಕ್ಕಂದಿನಲ್ಲಿ ನಮ್ಮಪ್ಪ ಇಲ್ಲೆಲ್ಲಾ ಪ್ರಯಾಣಮಾಡುವಾಗ ನನ್ನನ್ನೂ ಕರೆದುಕೊಂಡು ಬಂದು ಇಲ್ಲಿನ ಐತಿಹ್ಯ, ನದಿ ಬೆಟ್ಟಗಳ ವಿಚಾರ ಎಲ್ಲಾ ಹೇಳ್ತಾ ಇದ್ರು. ಅದಕ್ಕೇ ಈಗಲೂ ನಾನು ಯಾವುದಾದರೂ ಹೊಸ ಜಾಗಕ್ಕೆ ಹೋದರೆ ಅಲ್ಲಿನ ದಿಕ್ಕುಗಳನ್ನು ಗುರುತಿಸಿ, ಆ ಸ್ಥಳದ ಎತ್ತರ, ಪರಿಸರ ಇವುಗಳ ವಿವರಗಳನ್ನು ಗಮನಿಸದಿದ್ದರೆ ನಿದ್ದೆಯೇ ಬರೋದಿಲ್ಲ ....... ರಮೇಶ್, ಒಂದ್ನಿಮಿಷ, ಸ್ವಲ್ಪ ನಿಲ್ಲಿಸ್ತೀಯಾ ?"

ಕಾರು ಒಂದು ಸೇತುವೆಯ ಮೇಲೆ ನಿಂತಿತು. ಸೇತುವೆಯ ಕೆಳಗೆ ನದಿಯೊಂದು ಬಂಡೆಗಲ್ಲುಗಳ ನಡುವೆ ದಾರಿಮಾಡಿಕೊಂಡು ಹರಿಯುತ್ತಿತ್ತು.

"ಶಿವು ಇದು ವೀರ ವೈಷ್ಣವಿ ನದಿ. ಶಿಂಷಾ ನದಿಯ ಉಪನದಿ ಇದು. ಈಗ ನಾವು ಯಾವ ಡಿಸ್ಟ್ರಿಕ್ಟಿನಲ್ಲಿ ಇದ್ದೀವಿ ಹೇಳು ನೋಡೋಣ?" ಅಂತ ಸವಾಲೊಂದನ್ನು ಎಸೆದ.

"ತುಮಕೂರು ಜಿಲ್ಲೆ ಇರಬಹುದೇ" ಅಂತ ಊಹೆ ಮಾಡಿದೆ.

"ಅಲ್ಲ. ಇದು ಮಂಡ್ಯ ಜಿಲ್ಲೆ. ಇನ್ನೂ ಸ್ವಲ್ಪ ದೂರದವರೆಗೂ ಮಂಡ್ಯ ಜಿಲ್ಲೆ ಈ ರಸ್ತೆ ಮೇಲೆ ಚಾಚಿರುತ್ತೆ. ಆಮೇಲೆ ಪುನಃ ತುಮಕೂರು ಶುರು."

ಎನ್ನುತ್ತಿದ್ದಂತೆ ಹಾದಿಯ ಎಡಬದಿಯಲ್ಲಿ ಆ ಎರಡು ಜಿಲ್ಲೆಗಳನ್ನು ಬೇರ್ಪಡಿಸುವ ಕಲ್ಲು ಕಣ್ಣಿಗೆ ಬಿತ್ತು.

ಸಕಲೇಶಪುರ ಸೇರಿದಾಗ ಸಂಜೆಯಾಗಿತ್ತು. ಕೋಗರವಳ್ಳಿ ಕಾಫಿತೋಟದ ಮಧ್ಯೆ ಯಜಮಾನ ಮಂಜುಗೌಡರ ಮನೆ. ಅಂದು ನಮಗೆ ಅವರಲ್ಲಿ ಆತಿಥ್ಯ. ಈತ ನನ್ನ ಗೆಳೆಯನ ಕಸಿನ್. ಆ ಬೆಳಗ್ಗೆ ನನ್ನ ಗೆಳೆಯ ನನ್ನನ್ನ ಬಾಳ್ಳುಪೇಟೆಯ ಮೂಲಕ ಹೇಮಾವತಿ ಹಿನ್ನೀರಿನ ಪ್ರದೇಶಕ್ಕೆ ಕರೆದೊಯ್ದ.

ಅಲ್ಲಿ ನನಗೆ ಪಕ್ಷಿಗಳನ್ನು ಗುರುತಿಸುವ ವಿಧಾನದಲ್ಲಿ ಮೊದಲ ಪಾಠ. ಹಿನ್ನೀರನ್ನು ಕಮಾನಿನಂತೆ ಬಳಸಿ ಸುತ್ತುವರಿದಿದ್ದ ಹಾದಿಯಲ್ಲಿ ನಾವು ನಡೆದಿದ್ದೆವು. ನೀರಿನ ಜೊಂಡುಗಳ ಮೇಲೆ ಕುಳಿತಿದ್ದ ಬೆಳ್ಳಕ್ಕಿ, ಬಿಳೀ ಕುತ್ತಿಗೆ ನೀರು ಕಾಗೆ, ಇವುಗಳನ್ನು ದುರ್ಬೀನಿನಲ್ಲಿ ನೋಡಿದ್ದಾಯಿತು. ಅಷ್ಟುಹೊತ್ತಿಗೆ ಒಂದು ಪುಟ್ಟ ಪಕ್ಷಿ ಹಾರಿಬಂದು ಹತ್ತಿರದ ವಿದ್ಯುತ್ ತಂತಿಯ ಮೇಲೆ ಕುಳಿತಿತು. ನನ್ನ ಗೆಳೆಯ ದುರ್ಬೀನನ್ನು ನನ್ನ ಕೈಗಿತ್ತು "ಅದು ಯಾವ

ಪಕ್ಷಿ ಹೇಳು ನೋಡೋಣ ?" ಎಂದು ಕೇಳಿದ.

ನಾನು ನೋಡಿದೆ. ಅನೇಕ ವರ್ಷಗಳಿಂದ ಬಾಟಲುಗಳ ಮೇಲೆ ಅದರ ಚಿತ್ರ ನೋಡಿ ಇದೊಂದು ಪಕ್ಷಿಯ ಪರಿಚಯ ನನಗೆ ಚೆನ್ನಾಗಿತ್ತು. "ಕಿಂಗ್‌ಫಿಷರ್" ಅಂದೆ. "ಇಲ್ಲಿನವರು ಇದನ್ನ ಮಿಂಚುಳ್ಳಿ ಅಂತಾರೆ. ಇದರಲ್ಲೇ ಮೂರು ಜಾತಿ. ಇಲ್ಲಿ ಕೂತಿರೋದು ಸ್ಮಾಲ್ ಬ್ಲೂ ಕಿಂಗ್‌ಫಿಷರ್. ಅಲ್ಲಿ ನೋಡು, ಉದ್ದದ ಪುಕ್ಕಾನ ಮೇಲೆತ್ತಿ ನಡೀತಾ ಇದೆಯಲ್ಲಾ, ಅದು ಯಲ್ಲೋ ವ್ಯಾಗ್‌ಟೇಲ್....."

ಯಾವುದೋ ಪ್ಲಾಂಟೇಷನ್ ಜೀಪ್ ನಮ್ಮನ್ನ ಸವರಿಕೊಂಡೇ ಹೋಗಿದ್ದರಿಂದ ನನ್ನ ಗೆಳೆಯನ ಪಕ್ಷಿಪಾಠ ಅಲ್ಲಿಗೇ ನಿಂತಿತು.

ಅಸಾಧ್ಯ ಸಂಗೀತ ಪ್ರೇಮಿ ನನ್ನ ಗೆಳೆಯ. ಅವನಿಗಿಷ್ಟವಾದ ಹಾಡುಗಳನ್ನ ನಾನು ಕೇಳುವಂತೆ ಮಾಡುವುದೊಂದೇ ಅಲ್ಲ. ಆ ಹಾಡುಗಳ ಸಾಹಿತ್ಯ ನನಗೆ ಸಂಪೂರ್ಣವಾಗಿ ಪರಿಚಯಿಸುವವರೆಗೂ ಆತನಿಗೆ ಸಮಾಧಾನವಿಲ್ಲ. ಆ ಬೆಳಗ್ಗೆ ಅವನು ಗುಣುಗುಣಿಸುತ್ತಿದ್ದ ಹಾಡು ಪೆರ್ರಿ ಕೋಮೋ ಹಾಡಿದ "ಟೈ ಎನ್ ಎಲ್ಲೋ ರಿಬ್ಬನ್ ಅರೌಂಡ್ ದ ಓಲ್ಡ್ ಓಕ್ ಟ್ರೀ" ಹಿನ್ನೀರಿನಿಂದ ಹಿಂತಿರುಗುವ ಹಾದಿಯಲ್ಲಿ ನನ್ನ ಗೆಳೆಯ ಈ ಹಾಡಿನ ಕಥೆ ತಿಳಿಸಿದ.

ಮೂರು ವರ್ಷಗಳ ಕಾಲ ಕಾರಾಗೃಹ ವಾಸ ಮುಗಿಸಿ ಒಬ್ಬಾತ ಮನೆಗೆ ಹಿಂತಿರುಗುತ್ತಿರುವ ಸಂದರ್ಭ. ಹೆಂಡತಿ ತನ್ನನ್ನು ಬರಮಾಡಿಕೊಳ್ಳುತ್ತಾಳೋ ಇಲ್ಲವೋ ಎಂಬ ಸಂಶಯ ಅವನಿಗೆ. ಮನೆಗೆ ಹೋಗಿ ಅವಳಿಗೆ ಮುಜುಗರ ಮಾಡುವ ಬದಲು ಅವಳಿಗೆ ಒಂದು ಕಾಗದ ಬರೆಯುತ್ತಾನೆ. ನಾನು ಮನೆಗೆ ಬರಬಹುದಾದರೆ ಊರಾಚೆ ಇರುವ ಓಕ್ ಮರಕ್ಕೆ ಒಂದು ಹಳದಿ ರಿಬ್ಬನ್ ಕಟ್ಟು. ಬಸ್ ನಲ್ಲಿ ಊರಿಗೆ ಹಿಂತಿರುಗುವಾಗ ಮರಕ್ಕೆ ರಿಬ್ಬನ್ ಕಟ್ಟಿಲ್ಲದಿದ್ದರೆ ನಾನು ಇಲ್ಲಿ ಇಳಿಯದೇ, ನೇರವಾಗಿ ಮುಂದಿನ ಊರಿಗೆ ಪಯಣ ಬೆಳೆಸುವೆ ಎಂಬುದು ಕಾಗದದ ಒಕ್ಕಣೆ.

ಬಸ್ಸಿನಲ್ಲಿ ಅವನು ಊರಿಗೆ ಹಿಂತಿರುಗುತ್ತಿದ್ದಾಗ ಅವನ ಸಹಪಯಣಿಗರಿಗೂ ಈ ರಿಬ್ಬನ್ನಿನ ವಿಷಯ ತಿಳಿದು, ಅವರೆಲ್ಲರೂ ಇವನ ನಿರೀಕ್ಷೆಯಲ್ಲಿ ಭಾಗಿಗಳಾಗುತ್ತಾರೆ. ಊರು ಹತ್ತಿರವಾದಂತೆ ಎಲ್ಲ ಪಯಣಿಗರ ಆತಂಕ ಹೆಚ್ಚುತ್ತಾ ಹೋಗುತ್ತದೆ. ಇನ್ನೇನು ಕೊನೆಯ ತಿರುವು. ಎಲ್ಲರೂ ಕತ್ತು ಚಾಚಿ ಓಕ್ ಮರದ ನಿರೀಕ್ಷೆಯಲ್ಲಿದ್ದಾರೆ. ಬಸ್ಸು ತಿರುವನ್ನು ಕ್ರಮಿಸಿತು. ತಕ್ಷಣ ಓಕ್ ಮರ ಕಣ್ಣಿಗೆ ಬೀಳುತ್ತದೆ. ಮರ ಹೂ ಬಿಟ್ಟಂತೆ ಸಾವಿರಾರು ಹಳದಿ ರಿಬ್ಬನ್ ಗಳಿಂದ ಕಂಗೊಳಿಸುತ್ತಿರುತ್ತದೆ.

ನನ್ನ ಗೆಳೆಯ ಈಗ ಇಲ್ಲ. ಆದರೆ ಅವನೊಂದಿಗಿನ ಅಂದಿನ ಒಡನಾಟ ಮಾತ್ರ ಒಂದು ಅವಿಸ್ಮರಣೀಯ ಅನುಭವ. ■

ಶಾಲೆಯಲ್ಲಿ ಓದುವಾಗಿನ ದಿನಗಳಲ್ಲಿ ಪರೀಕ್ಷೆಯ ದಿನ ಪ್ರಶ್ನೆ ಪತ್ರಿಕೆ ಕೈಗೆ ಬಂದಾಗ ಕಕ್ಕಾಬಿಕ್ಕಿಯಾಗಿ ಯಾವುದಕ್ಕೂ ಉತ್ತರಗೊತ್ತಿಲ್ಲವಲ್ಲ ಏನು ಮಾಡೋದು ಅಂತ ಚಿಂತಿಸುತ್ತಿರುವಾಗ ಪಕ್ಕದ ಹುಡುಗನದೊಂದಿಷ್ಟು ಎದುರು ಡೆಸ್ಕಿನ ಹುಡುಗನದೊಂದಿಷ್ಟು ಕಾಪಿ ಹೊಡೆದು ಪಾಸಾಗೋದೂ ಬಾಲ್ಯದ ಮ್ಯಾಜಿಕ್ ಮೊಮೆಂಟ್ಸ್ ತಾನೇ.


# ಮೌನಸಾಮ್ರಾಜ್ಯದೊಳಗಿನ ಕೆಲ ಕ್ಷಣಗಳು

**ಪ್ರಭಾಮಣಿ ನಾಗರಾಜ**

ನಾನು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವಿಷಯ ಪರಿವೀಕ್ಷಕಳಾಗಿದ್ದ (subject inspector) ಸಂದರ್ಭದಲ್ಲಿ ನಮ್ಮ ಕರ್ತವ್ಯದ ಒಂದು ಭಾಗವಾದ ಸಂದರ್ಶನಕ್ಕಾಗಿ ಪ್ರಕೃತಿಯ ಮಡಿಲಲ್ಲಿ ತಲೆಯೆತ್ತಿ ನಿಂತಿದ್ದ ಆ ಸಂಸ್ಥೆಯನ್ನು ನೋಡಲು ನಮ್ಮ ತಂಡ ಸಾಗುತ್ತಿತ್ತು. ನಮ್ಮ ವಾಹನವು ದಟ್ಟವಾದ ಕಾಡಿನೊಳಗೆ ಮುನ್ನುಗ್ಗುತ್ತಿದ್ದಂತೆ ಮೊದಲ ಬಾರಿ ಹೋಗುತ್ತಿದ್ದ ನನ್ನ ಕುತೂಹಲ ಮೇರೆ ಮೀರುತ್ತಿತ್ತು. ಅದರ ಬಗ್ಗೆ ಕೇಳಿದ್ದೆನೇ ಹೊರತು ಹತ್ತಿರದಿಂದ ನೋಡಿರಲಿಲ್ಲ. ಈಗ ಸಮೀಪದಿಂದ ನೋಡುವ, ಸಂವಹನ ಮಾಡುವ ಅವಕಾಶ ದೊರೆತಿತ್ತು. ಆವರಣವನ್ನು ಪ್ರವೇಶಿಸುತ್ತಿದ್ದಂತೆಯೇ ಗಾಢ ಮೌನ ನಮಗೆ ರಾಚಿತು. ಗಾಳಿಯ ಸುಯ್‌ಗುಡುವಿಕೆ, ಪಕ್ಷಿಗಳ ಕಲರವ, ಸೋನೆಮಳೆಯ ತಟತಟವಲ್ಲದೇ ಮತ್ತೊಂದು ಸದ್ದಿಲ್ಲ! ನಮ್ಮನ್ನೇ ನಿರೀಕ್ಷಿಸಿದ್ದಂತೆ ಅಲ್ಲಿಯ ಪ್ರಮುಖರು ನಮ್ಮನ್ನು ಸ್ವಾಗತಿಸಿ ನೇರವಾಗಿ ಊಟದ ಮನೆಗೇ ಕರೆದೊಯ್ದರು. ಆಗಲೇ ವೇಳೆಯೂ ಆಗಿದ್ದರಿಂದ ನಾವೂ ಮೌನವಾಗೇ ಬಿಸಿನೀರು, ಬಿಸಿ ಅಡುಗೆಯ ಆತಿಥ್ಯವನ್ನು ಸ್ವೀಕರಿಸಿದೆವು. ನಂತರ ಒಂದೊಂದೇ ತರಗತಿಯ ಕೊಠಡಿಗೂ ಹೋಗಿ ಮಕ್ಕಳನ್ನು ಗಮನಿಸಲು ಪ್ರಾರಂಭಿಸಿದೆವು. ಅದೊಂದು ಮೂಕ ಮಕ್ಕಳ ಶಾಲೆಯಾಗಿದ್ದರಿಂದ ಅವರೊಡನೆ ಸಂಪರ್ಕಿಸುವುದಾದರೂ ಹೇಗೆಂದು ತಿಳಿದಿರಲಿಲ್ಲ. ಮಕ್ಕಳೇ ಆ ಸಮಸ್ಯೆಯನ್ನು ಪರಿಹಾರ ಮಾಡಿದರು. ತಮ್ಮ ಪುಸ್ತಕದಲ್ಲಿ 'ಹೆಸರು', 'ಊರು', 'ಕೆಲಸ' ಎಂದು ಬರೆದು ನಮಗೆ ಬರೆಯುವಂತೆ ಸೂಚಿಸಿದರು! ಈಗ ಸ್ವಲ್ಪ ಹಗುರವಾದಂತೆನಿಸಿ, ಮಕ್ಕಳಿಗೆ ಅವರ ರೀತಿಯಲ್ಲೇ ನಮ್ಮನ್ನು ಪರಿಚಯಿಸಿಕೊಂಡು, ನಮಗೆ ಬೇಕಾದ ಮಾಹಿತಿಗಳನ್ನು ಬೋರ್ಡ್ ಮೇಲೆ ಬರೆದು ಮಕ್ಕಳಿಂದಲೇ ಉತ್ತರ ಪಡೆಯಲಾರಂಭಿಸಿದೆವು. ಶಿಕ್ಷಕರಿಗೆ ಪಾಠ ಮಾಡಲು ಹೇಳಿ ಗಮನಿಸುವುದು ಸುಲಭವೆನಿಸಿತು.

ಈ ಮೌನಸಾಮ್ರಾಜ್ಯದಲ್ಲಿ ಮಕ್ಕಳಿಗೆ ಕಲಿಸುವ ಶಿಕ್ಷಕರ 'ತಾಳ್ಮೆ'ಗೆ ನಿಜಕ್ಕೂ ಧನ್ಯವಾದಗಳನ್ನು ಅರ್ಪಿಸಲೇಬೇಕು. ಹರಪ್ಪ ಮೆಹಂಜೋದಾರೊ ನಾಗರೀಕತೆಯ ಪಾಠ ಮಾಡುತ್ತಿದ್ದ ಶಿಕ್ಷಕರು ಬೋರ್ಡಿನ ಮೇಲೆ ಅಂದವಾಗಿ ಮುಖ್ಯಾಂಶಗಳನ್ನು ಬರೆದಿದ್ದರು. "ಇದನ್ನು ಹೇಗೆ ಕಲಿಸುತ್ತೀರಿ?" ಎಂದು ಕೇಳಿದಾಗ ಅವರು ನಿಧಾನವಾಗಿ ಉಚ್ಚರಿಸುತ್ತಾ, ಅಭಿನಯಪೂರ್ವಕವಾಗಿ ಪ್ರಾರಂಭಿಸಿದಾ ಕ್ಷಣವೇ ಮಕ್ಕಳೆಲ್ಲರೂ ಒಂದು ಕೈಯಲ್ಲಿ ಹಿಡಿದಂತೆ, ಮತ್ತೊಂದು ಕೈಯಲ್ಲಿ ಕೆತ್ತುವಂತೆ ಅಭಿನಯಿಸಲಾರಂಭಿಸಿದರು! ನನ್ನ ಆಶ್ಚರ್ಯವನ್ನು ಗಮನಿಸಿದ ಶಿಕ್ಷಕರು, "ಮಕ್ಕಳು ಶಿಲ್ಪಕಲೆಯು ಅವರಿಗೆ ತಿಳಿದಿತ್ತು ಎಂದು ಹೇಳುತ್ತಿದ್ದಾರೆ" ಎಂದರು. ಹೀಗೇ ಒಂದೊಂದು ಮುಖ್ಯಾಂಶವನ್ನೂ ಮಕ್ಕಳು ವಿಶಿಷ್ಟ ರೀತಿಯಲ್ಲಿ ಅಭಿನಯದ ಮೂಲಕ ವ್ಯಕ್ತಪಡಿಸಿದರು. "ಅವರಿಗೆ ಮಾತನಾಡಲು ಬರದಿದ್ದರೂ, ನಾವು ನಿಧಾನವಾಗಿ ಉಚ್ಚರಿಸಿದಾಗ ತುಟಿಯ ಚಲನೆಯಿಂದ ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ" ಎಂದು ಶಿಕ್ಷಕರು ಹೇಳುವಾಗ ಅವರಲ್ಲಿಯ ಅರ್ಪಣಾ ಮನೋಭಾವದ ಬಗ್ಗೆ ನಮಗೆ ಗೌರವವುಂಟಾಯಿತು.

ಮಕ್ಕಳ ಉತ್ಸಾಹದ ಪ್ರತಿಕ್ರಿಯೆಗಳಿಂದ ನನಗೆ ಮೈ ಜುಂ ಎನಿಸುವಂತಾಯ್ತು. ಆದರೆ ಈ ಭಾವ ಹೆಚ್ಚು ಕಾಲ ಉಳಿಯಲಿಲ್ಲ. ಹತ್ತನೇ ತರಗತಿಯನ್ನು ಪ್ರವೇಶಿಸಿದಾಗ ಬೋರ್ಡಿನ ಮೇಲೆ ನನ್ನದೇ ವಿಷಯವಾದ ಬೀಜಗಣಿತದ ಒಂದು ಸುದೀರ್ಘವಾದ




ಲೆಕ್ಕವನ್ನು ಬರೆದಿದ್ದರು. ಮಕ್ಕಳ ನೋಟ್ ಪುಸ್ತಕವನ್ನು ಗಮನಿಸಿದಾಗ ಅವರೂ ಅಂದವಾಗೇ ಬರೆದುಕೊಂಡಿದ್ದರು. “ಯಾರು ಈ ಲೆಕ್ಕವನ್ನು ಬೋರ್ಡ್ ಮೇಲೆ ಮಾಡುತ್ತೀರಿ?” ಎಂದು ಅವರ ಶಿಕ್ಷಕರ ಮೂಲಕ ಕೇಳಿಸಿದಾಗ ಯಾರೊಬ್ಬರೂ ಪ್ರತಿಕ್ರಿಯಿಸಲಿಲ್ಲ. ಕೆಲವರು ತಮ್ಮತಮ್ಮಲ್ಲೇ ಸನ್ನೆ ಮಾಡಿಕೊಳ್ಳಲಾರಂಭಿಸಿದರು. “ಇನ್ನೂ ಕಲಿತಿಲ್ಲ ಎನ್ನುತ್ತಿದ್ದಾರೆ” ಎಂದು ಶಿಕ್ಷಕರು ಹೇಳಿದರು. ಪ್ರಮೇಯದ ಬಗ್ಗೆ ಕೇಳಿದೆ. ಶಿಕ್ಷಕರು ಅವರ ಪ್ರತಿಕ್ರಿಯೆಯನ್ನು “ಪರೀಕ್ಷೆ ಇನ್ನೂ ದೂರ ಇದೆಯಲ್ಲ, ಕಲಿಯುತ್ತೇವೆ” ಎಂದು ಅರ್ಥೈಸಿದರು. ಸರಳ ಸಮಸ್ಯೆಗಳಿಗೂ ಪ್ರತಿಕ್ರಿಯೆ ಇಲ್ಲ. ನಾನೇ ಆ ದಾರಿಯಿಂದ ಹೊರಬಂದೆ. ಕಿವಿಯೂ ಕೇಳದ, ಮಾತನಾಡಲೂ ಬಾರದ ಈ ಮಕ್ಕಳು ಅಮೂರ್ತವಾಗಿರುವ ಬೀಜಗಣಿತವನ್ನು ಕಲಿಯುವುದಾದರೂ ಹೇಗೆ? ಶಿಲ್ಪಕಲೆಯ ಬಗ್ಗೆ ಪಟಪಟನೆ ಪ್ರತಿಕ್ರಿಯಿಸುತ್ತಿದ್ದ ಆ ಮಕ್ಕಳು, ಗಣಿತದಲ್ಲಿ ಅಭಿವ್ಯಕ್ತಿಸಲಾಗದ ಇವರು...

ಆದರೆ ಎಸ್.ಎಸ್.ಎಲ್.ಸಿ. ಎನಿಸಿಕೊಳ್ಳಲು ಇವರು ಗಣಿತದಲ್ಲಿ ತೇರ್ಗಡೆಯಾ–ಗಲೇಬೇಕು... ತಕ್ಷಣವೇ ಅಧೀರಳಾಗಬಾರದು ಎಂದುಕೊಂಡು ಉತ್ಸಾಹ ತುಂಬುವಂತೆ ಅವರೊಡನೆ ಸ್ವಲ್ಪ ಕಾಲ ಸಂವಹನ ನಡೆಸಿ, ಅವರಿಗೆ ಮನವರಿಕೆಯಾಗುವಂತೆ ಜೋಕ್ ಮಾಡಿ ನಗಿಸಿದ ನಂತರ, ಎಲ್ಲರೂ ‘ಉತ್ತೀರ್ಣ’ರಾಗುವಂತೆ ಕಲಿಯುತ್ತೇವೆ ಎಂದು


ಪ್ರತಿಜ್ಞೆ ಮಾಡಿಸಿದೆ! 'ಉತ್ತೀರ್ಣ' ಎನ್ನುವುದು ಈ ಪರೀಕ್ಷೆಗಷ್ಟೇ ಸೀಮಿತವಲ್ಲವಲ್ಲ! ನಂತರ ಮುಖ್ಯ ಶಿಕ್ಷಕರೊಡನೆ ಮಾತನಾಡಿದಾಗ ಇದೇ ಶಾಲೆಯಲ್ಲಿ ಓದಿದ ಹುಡುಗನೊಬ್ಬ ಇಂಜಿನಿಯರಿಂಗ್ ಮಾಡುತ್ತಿದ್ದಾನೆ ಎಂದು ತಿಳಿಸಿದರು.

ಈ ಮಕ್ಕಳು ಅವರವರ ಬುದ್ಧಿಮಟ್ಟಕ್ಕನುಗುಣವಾಗಿ ಪ್ರಯತ್ನದಿಂದ ಸಾಧಿಸಬಹುದಾದರೂ, ಹೆಚ್ಚಿನ ಸಹಕಾರದ ಅಗತ್ಯ ಬೇಕಾಗುತ್ತದೆ. ತಮ್ಮದೇ ಲೋಕದಲ್ಲಿ ವಿಹರಿಸುತ್ತಿರುವ ಈ ಮಕ್ಕಳು ಬಾಹ್ಯಸಮಾಜದತ್ತ ಪ್ರವಹಿಸಿದಾಗ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು. ಈ ಸಂದರ್ಭದಲ್ಲಿ ಹೊಂದಾಣಿಕೆಯ ತರಬೇತಿಯಾಗ ಬೇಕಾಗಿರುವುದು ಮಕ್ಕಳಿಗಷ್ಟೇ ಅಲ್ಲ. ಇವರನ್ನು ಒಳಗೊಳ್ಳಬೇಕಾದ ಜನತೆಗೆ. ಒಬ್ಬರ ನ್ಯೂನತೆಯನ್ನೇ ಎತ್ತಿ ತೋರಿಸುತ್ತಾ ಅವಹೇಳನಕಾರಿಯಾಗಿ ವರ್ತಿಸುವ ಕುತ್ಸಿತ ಮನೋಭಾವಗಳನ್ನು ಬದಲಾಯಿಸುವುದಾದರೂ ಹೇಗೆ?

ನಮಗೆ ಎಚ್ಚರ ಸ್ಥಿತಿಯಲ್ಲಿರುವಾಗ ಮಾತಿಲ್ಲದೆ ಕೆಲವೇ ಗಂಟೆಗಳನ್ನು ಕಳೆಯುವುದು ಕಷ್ಟಕರವಾಗಿರುವಾಗ, ಜೀವನವಿಡೀ ಮೌನವಾಗೇ ಇರಬೇಕಾದ ಈ ಮಕ್ಕಳ ಪರಿಸ್ಥಿತಿಯ ಬಗ್ಗೆ ಚಿಂತಿಸುವಂತಾಯ್ತು. ಸ್ವಇಚ್ಛೆಯಿಂದ ಮೌನವಾಗಿರುವುದೇ ಬೇರೆ, ಇವರದು ಅನಿವಾರ್ಯ **'ಮಾತಿಲ್ಲದ ಸ್ಥಿತಿ'**. ಮಾತಿಲ್ಲದ ಸ್ಥಿತಿ ಮೌನವಾಗಲು ಹೇಗೆ ಸಾಧ್ಯ?

ನಾವೆಲ್ಲರೂ ಹೊರಟಾಗ ಮಕ್ಕಳು ತಾವು ಮಾಡಿರುವ ಕರಕುಶಲ ವಸ್ತುಗಳನ್ನೆಲ್ಲಾ ಸಡಗರದಲ್ಲಿ ತಂದು ತೋರಿಸಿದರು. ಬಣ್ಣಬಣ್ಣದ ಕಾಗದದ ಹೂಗಳು, ಹಾರಗಳು, ಮಣ್ಣಿನಿಂದ ತಯಾರಿಸಿದ ಗೊಂಬೆಗಳು, ತಾವೇ ಬರೆದ ಚಿತ್ರಗಳು... ಅವರ ಸಂಭ್ರಮ ಮೆರೆ ಮೀರಿತ್ತು. ಖುಷಿಯಲ್ಲಿದ್ದ ಅವರನ್ನು ನೋಡುವಾಗ ನನ್ನ ಮೈಯಲ್ಲೇ ವಿದ್ಯುತ್ಸಂಚಾರವಾದಂತೆನಿಸುತ್ತಿತ್ತು. ಇಷ್ಟೆಲ್ಲಾ ಟ್ಯಾಲೆಂಟ್ ಇವರಲ್ಲಿದೆಯೇ ಎಂದು ತಲೆದೂಗುವಂತೆ ಮಾಡಿ ತಮ್ಮ ಮೂಕ ಮರ್ಮರದಲ್ಲಿ ಮಕ್ಕಳು ನಮ್ಮನ್ನು ದಿಗ್ಭ್ರಾಂತರಾಗಿಸಿದರು. ನಮಗೆಲ್ಲಾ ತಮ್ಮದೇ ಕಲೆಯಾದ ಹೂಗಳನ್ನು ಉಡುಗೊರೆಯಾಗಿ ಕೊಟ್ಟರು.

ಇದೊಂದು ನನ್ನ ಬದುಕಿನಲ್ಲಿ ಮರೆಯಲೇ ಆಗದ ವಿಶೇಷವಾದ ಮ್ಯಾಜಿಕಲ್ ಅನುಭವ ಎಂದೇ ಹೇಳಬಹುದು. ■



# ಕರ್ನಲ್ ವೆಕ್ಫೀಲ್ಡ್

ಡಾ. ಪ್ರಕಾಶ್

ನಿತ್ಯ ಜೀವನದಲ್ಲಿ ನಾವೆಲ್ಲ ಹಲವಾರು ಸಂಗತಿಗಳನ್ನು ಅನುಭವಿಸಿರುವುದು ಸಹಜ. ಆದರೆ, ಬಹುಕಾಲ ಮನಸ್ಸಿನಲ್ಲಿ ಹಸಿರಾಗಿ ಉಳಿಯುವ ಅನುಭವಗಳು ತೀರ ಅಪರೂಪ. ಅಂತಹ ಒಂದು ಅನುಭವವನ್ನು ನಿಮ್ಮೊಡನೆ ಹಂಚಿಕೊಳ್ಳುತ್ತೇನೆ.

ಸುಮಾರು ನಾಲ್ಕು ದಶಕಗಳ ಹಿಂದಿನ ಮಾತು. ಕಬಿನಿ ನದಿಯ ಸನಿಹದಲ್ಲಿ ಸ್ಥಾಪಿತವಾಗಿದ್ದ ಜಂಗಲ್ ಲಾಜ್‌ಗೆ ನಾವೆಲ್ಲ ಪ್ರವಾಸ ಹೋಗಿದ್ದೆವು. ಕಬಿನಿ ನದಿಯ ಪ್ರಶಾಂತ ವಾತಾವರಣ, ದಟ್ಟವಾದ ಅರಣ್ಯ,, ನಗರದ ಶಬ್ದಗಳಿಂದ ದೂರವಾದ ಸ್ಥಿತಿ ಇವೆಲ್ಲ ನಮ್ಮನ್ನು ಸಂತಸಗೊಳಿಸುತ್ತಿದ್ದವು. ಆ ಕಾಲದಲ್ಲಿ ಒಬ್ಬ ನಿವೃತ್ತ ಬ್ರಿಟಿಷ್ ಅಧಿಕಾರಿ ಲಾಜ್ ನ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು ;ಆತನ ಹೆಸರು ಕರ್ನಲ್ ವೇಕ್ಫೀಲ್ಡ್. ವನ್ಯ ಜೀವನದ ಆತನ ಉತ್ಸಾಹ, ಜ್ಞಾನಭಂಡಾರ ಮೆಚ್ಚುವಂತಿತ್ತು.



ಕಾಡಿನ ಕಥೆಗಳನ್ನು ಆತ ಸ್ವಾರಸ್ಯವಾಗಿ ಹೇಳುತ್ತಿದ್ದ. ಶುಭ, ಆನಂದ್–ನಮ್ಮ ಮಕ್ಕಳು ಅದನ್ನೆಲ್ಲಾ ಗಮನವಿಟ್ಟು ಕೇಳುತ್ತಿದ್ದರು. ಹಲವಾರು ಜಿಂಕೆಗಳು, ಕಾಡುಕೋಣಗಳು, ಕಂಡವು. ಹುಲಿಯೆಲ್ಲೋ ಕಾಣಲಿಲ್ಲ ಅಂತ ನಮಗೆ ನಿರಾಶೆ. ನಮ್ಮ ಜೀಪ್ ಚಾಲನೆ ಮಾಡುತ್ತಿದ್ದ ಕರ್ನಲ್ ಈಗ ಕಬಿನೀ ಹತ್ತಿರ ಹೋಗೋಣಾ ಅಂತ ಒಂದು ಇಕ್ಕಟ್ಟಾದ ಮಾರ್ಗದಲ್ಲಿ ಜೀಪ್ ಓಡಿಸಿದರು. ಇದ್ದಕ್ಕಿಂದಂತೆ, ನಮ್ಮ ಮುಂದೆ ವಿಶಾಲ ಹರಹಿನ, ರಮಣೀಯ ದೃಶ್ಯವೊಂದು ಕಂಡಿತು. ಮುಂದೆ ವಿಶಾಲ ನದಿ. ಆಚೆಯ ದಡದಲ್ಲಿ ಹಲವಾರು ಜಿಂಕೆಗಳ ಹಿಂಡು; ನಾನಾ ವಯಸ್ಸಿನ ಜಿಂಕೆಗಳ ಚಾಲನೆ ನೋಡುವುದೇ ಒಂದು ಸಂತೋಷಕರ ಸಂಗತಿ. ಕರ್ನಲ್ ನನಗೆ ಬಲಗಡೆ ನೋಡಿ ಅಂತ ಸನ್ನೆ

ಮಾಡಿದರು. ಆಗ ಕಂಡ ದೃಶ ನ ನ್ನನ್ನು ಮೂಕ–ವಿಸ್ಮಿತನನ್ನಾಗಿಸಿತು. ನೂರಾರು ಆನೆಗಳ ಸಮುದಾಯ! ದೇಶಕಾಲಗಳ ಪರಿವೆ ಇಲ್ಲದಾಯಿತು. ನಿಧಾನವಾಗಿ, ಆ ಮಾಂತ್ರಿಕ ಸದೃಶ ಲೋಕ ದಿಂದ ಹೊರಗೆ ಬಂದೆ. ಕರ್ನಲ್ ನನ್ನ ಕಡೆ ನಸುನಗುತ್ತಾ ನೋಡಿದರು. ನಮ್ಮ ಮಕ್ಕಳು ಟೈಗರ್ ನೋಡಬೇಕು ಅಂತ ಕೇಳಿದರು. ಅವರು ನಗುತ್ತಾ ಟೈಗರ್‌ಗಳಿಗೆ ಮನುಷ್ಯರನ್ನ ನೋಡಿ, ನೋಡಿ ಬೇಜಾರಾಗಿದೆ ಅಂತ ಚಟಾಕಿ ಹಾರಿಸಿದರು.

ಸಫಾರಿ ಮುಗಿದಮೇಲೆ ಸಂಜೆ ಡಿನ್ನರ್‌ಗೆ ಮುಂಚೆ, ಅಲ್ಲಿನ ನೌಕರನೊಬ್ಬ ನನ್ನ ಹತ್ತಿರ ಬಂದು, ಕರ್ನಲ್ ನಿಮ್ಮನ್ನ ನೋಡಬೇಕಂತೆ ಅಂತ ಮೆಸೇಜ್ ಕಳಿಸಿದ್ದರು ಎಂದು ತಿಳಿಸಿದ. ಅವರ ಮನೆಗೆ ಹೋದೆ ನಮ್ಮ ಧನ್ಯವಾದ ಅರ್ಪಿಸಿದೆ. ಅವರು "ನೋಡಿ, ಲಾಜ್‌ಗೇ ನೂರಾರು ಜನ ಬರುತ್ತಿದ್ದಾರೆ. ಆದರೆ ಅವರು ನೋಡುವುದು ಬರಿ ಪ್ರಾಣಿಗಳನ್ನ ! ಇಲ್ಲಿ ಇರುವ ಪ್ರಕೃತಿ ಯು ನನ್ನ ಮೇಲೂ ಗಾಢವಾದ ಪರಿಣಾಮ ಮಾಡುತ್ತಿದೆ. ಆ ಕಾರಣಕ್ಕೇ ನಾನು ಇಲ್ಲಿ ಸಂತೋಷವಾದ್ದೇನೆ. ಬೆಳಗ್ಗೆ ಕಬಿನಿ ದಡದಲ್ಲಿ ನೀವು ಅನುಭವಿಸಿದ ಅನಿರ್ವಚನೀಯ ಅನುಭವ ಎಲ್ಲರಿಗೂ ಲಭಿಸುವುದಿಲ್ಲ. ನಾನು ಆಗ ನಿಮ್ಮ ಮುಖದಲ್ಲಿ ಕಂಡ ಭಾವನೆ ಸಂತಸದ್ದು ಎಂದರೂ ಅದಕ್ಕೆ ಅಪಚಾರ ಮಾಡಿದಂತೆ!" ನಾನು ಚಕಿತನಾದೆ.. ನಾನು ಹಿಂದೆ ಎಲ್ಲೋ ಮಿಸ್ಟಿಕಲ್ ಅನುಭವ ಅಂತ ಓದಿದ್ದು ಜ್ಞಾಪಕ !

ದಶಕಗಳು ಕಳೆದರೂ ಅನುಭವ ಮನದ ಆಳದಲ್ಲಿ ಹುದುಗಿದೆ. ಕರ್ನಲ್ ಈಗಿಲ್ಲ. ಆದರೆ ಅವರ ನೆನಪು ಹಸಿರಾಗಿದೆ. ■

**"ಊಹಿಸಲಾಗದ ಅಂತ್ಯ...!"**

ಒಂದೂರಿನಲ್ಲಿ ಒಬ್ಬ ಹುಡುಗಿ ಒಬ್ಬ ಹುಡುಗನನ್ನು ಪ್ರೀತಿಸುತ್ತಿದ್ದಳು. ಆದರೆ, ಆವಿಷಯ ಹುಡುಗಿಯ ಮನೆಯಲ್ಲಿ ಗೊತ್ತಾಗಿ, ತ್ವರಿತವಾಗಿ ಅವಳಿಗೆ ಬೇರೊಬ್ಬನೊಡನೆ ಮದುವೆಯ ಏರ್ಪಾಡು ಮಾಡುತ್ತಿದ್ದರು. ಇದನ್ನರಿತ ಹುಡುಗಿ ಇನ್ನು ಮುಂದೆ ನಾನು ನಿಮ್ಮ ಜೊತೆಯಲ್ಲಿ ಇರುವುದಿಲ್ಲ ಎಂದು ಕಾಗದವನ್ನು ಬರೆದಿಟ್ಟು, ಆಪ್ರೇಮಿಯೊಂದಿಗೆ ಆ ಊರೇ ಬಿಟ್ಟುಹೋಗಿ ಬಿಡುತ್ತಾಳೆ. ಮರುದಿನ ಬೆಳಗ್ಗೆ ಎದ್ದು ಹುಡುಗಿ ಬರೆದಕಾಗದವನ್ನು ಓದಿ ಆತಂಕದಿಂದ ಊರಲೆಲ್ಲಾ ಮನೆಯವರು ಹುಡುಕಾಡಿ, ಕೊನೆಗೆ ಸಿಗದೆ ಬೇಸತ್ತು, ಇನ್ನು ಅವಳು ಬಂದರೂ ಅವಳನ್ನು ಮನೆಗೆ ಸೇರಿಸುವುದಿಲ್ಲ ಎಂಬ ಧೃಡನಿರ್ಧಾರ ಕೈಗೊಂಡರು.

....ಈಗಲೇ ಕತೆಯಲ್ಲಿ ಒಂದು ಮುಖ್ಯ ತಿರುವು....!

ಮೂರು ದಿನಗಳ ಬಳಕ, ಆ ಹುಡುಗಿ ಹುಡುಗನಿಲ್ಲದೆ, ತಾನೊಬ್ಬಳೇ ಆ ಮನೆಗೆ ಬರುತ್ತಾಳೆ ಬಾಗಿಲಲ್ಲೇ ನಿಲ್ಲಿಸಿ, ಅವಳನ್ನು ಅವಳ ಹೆತ್ತವರು, ಅವಳ ಅಣ್ಣ ಎಲ್ಲಾ ಯದ್ವಾತದ್ವಾ ಬೈಯ್ಯುತ್ತಾರೆ.

ಅಪ್ಪ : ಈಗ ಯಾಕೆ ಬಂದೆ ? ನಿನಗೆ ಏನುಬೇಕು ? ಎಂದು ಕೇಳುತ್ತಾರೆ.

ಅಮ್ಮ: ಊರು ಮುಂದೆ, ನಮಗೆಲ್ಲಾ ಅವಮಾನ ಮಾಡಿ, ಈಗ್ಯಾಕೆ ಬಂದೆ? ಎಂದು ಕೇಳುತ್ತಾರೆ.

ಅವಳುಹೇಳಿದ್ದುಇಷ್ಟೇ......."ನನ್ನ ವಿವೋ ಸೆಲ್‌ಫೋನ್ ಚಾರ್ಜರ್ ತಗೊಂಡು ಹೋಗಲು ಮರೆತು ಬಿಟ್ಟಿದ್ದೆ, ಅದನ್ನು ತೆಗೆದುಕೊಂಡು ಹೋಗಲು ಬಂದೆ "...!

– ವಿ.ವಿಜಯೇಂದ್ರರಾವ್

# ಕುಜುಜಾಂಗ್‌ಪೋಲಾ (ನಮಸ್ಕಾರ) ಭೂತಾನ್

**ರೂಪಾ ಪೈ**

ಎರಡು ತಿಂಗಳ ಹಿಂದೆ ತೀರ ಅನಿರೀಕ್ಷಿತವಾಗಿ ನನಗೊಂದು ಆಹ್ವಾನ ಬಂತು. ಭೂತಾನಿನ ರಾಜಮಾತೆ ಏರ್ಪಡಿಸಿದ್ದ ದ್ರುಕ್ ಯುಲ್ (ಭೂತಾನಿಗಳು ತಮ್ಮ ನಾಡನ್ನು ಹೀಗೆ ಕರೆಯುತ್ತಾರೆ.) ಲಿಟರೇಚರ್ ಮತ್ತು ಆರ್ಟ್ಸ್ ಫೆಸ್ಟಿವಲ್‌ಗೆ ನನ್ನನ್ನು ಒಬ್ಬ ಭಾಷಣಕಾರ್ತಿಯಾಗುವಂತೆ ವಿನಂತಿಸಿಕೊಂಡಿದ್ದ ಆಹ್ವಾನವದು. ಗಂಟುಮೂಟೆ ಕಟ್ಟಿಕೊಂಡು ಲಗುಬಗೆಯಿಂದ ನಾನು ಭೂತಾನಿನತ್ತ ಹೊರಟೆ.

ದ್ರುಕ್ ಯುಲ್‌ನಲ್ಲಿ ನಾನು ಕಳೆದ ಆ ಒಂದು ವಾರ ನಿಜಕ್ಕೂ ನನ್ನ ಜೀವನದಲ್ಲೇ ಅತ್ಯಂತ ಸಂತಸದಾಯಕ, ಮರೆಯಲಾಗದ ಅನುಭವವಾಗಿತ್ತು.

ಸದ್ದುಗದ್ದಲಗಳಿಲ್ಲದ ಈ ಶಬ್ದಮಾಲಿನ್ಯರಹಿತ ಪ್ರಶಾಂತ ನಾಡಿನಲ್ಲಿ, (ಸಾಮಾನ್ಯ ಜನ ಮೆಲುದನಿಯಲ್ಲೇ ಸಂಭಾಷಣೆ ನಡೆಸುತ್ತಾರೆ – ನಗರದ ಬೀದಿಗಳಲ್ಲಿ ಟ್ರಾಫಿಕ್ ಲೈಟ್‌ಗಳೇ ಇರದು–ಪ್ರೆಷರ್ ಕುಕ್ಕರ್ ಸದ್ದೂ ಕೇಳದು, ಅಲ್ಲಿನವರು ತಮ್ಮ ಕೆಂಪು ಅಕ್ಕಿಯನ್ನು ಬಾಣಲೆಗಳಲ್ಲಿ ಬೇಯಿಸುವುದು ವಾಡಿಕೆ) ನನ್ನ ಆಲೋಚನೆಗಳನ್ನೂ ಆಲಿಸುವ, ಅವುಗಳ ಉಪಯುಕ್ತತೆಯನ್ನು ಪರಿಶೀಲಿಸಿ, ಅನುಪಯುಕ್ತವಾದ ಬಹುಪಾಲನ್ನು ಕೈಬಿಡುವ ಹೊಸ ಅನುಭವ ನನ್ನದಾಗಿತ್ತು.


ಆ ಬೆಟ್ಟಗುಡ್ಡಗಳ ನಾಡಿನಲ್ಲಿ ಎಲ್ಲೆಲ್ಲಿ ನೋಡಿದರೂ ಹಸಿರಿನ ರಾಶಿ. ಭೂತಾನಿನ ಸಂವಿಧಾನದ ಪ್ರಕಾರ ಶತಾಂಶ ಅರವತ್ತರಷ್ಟು ಭೂಪ್ರದೇಶ ಸಸ್ಯಶಾಲಿನಿಯಾಗಿರಬೇಕಂತೆ. ಆದರೆ ವಾಸ್ತವವಾಗಿ ಕಾನೂನನ್ನೂ ಮೀರಿ ಶತಾಂಶ 72 ರಷ್ಟು ಜಾಗದಲ್ಲಿ ವನರಾಶಿ ತುಂಬಿದೆಯಂತೆ. ಪರಿಸರ ಪ್ರೀತಿ ಎಂದರೆ ಇದು. ಅಲ್ಲಲ್ಲಿ ಇರುವ ಹಸಿರು ಹೆಂಚಿನ ಮನೆಗಳ ನೋಟ ನಯನ ಮನೋಹರ. ಅಲ್ಲಿನ ಎಲ್ಲ ಪ್ರಜೆಗಳ ಉಡುಪುಗಳೂ ಸಮವಸ್ತ್ರದಂತೆ ಒಂದೇ ನಮೂನೆಯವು. ಗಂಡಸರು "ಘೋ" ಎಂಬ ನಿಲುವಂಗಿಯನ್ನು ಧರಿಸಿದ್ದರೆ ಹೆಣ್ಣುಮಕ್ಕಳು "ಕಿರಾ" ಎಂಬ ಸರಾಂಗ್ ಮತ್ತು ಟಾಪ್‌ಗಳಲ್ಲಿ ಶೋಭಿಸುತ್ತಾರೆ. ಹಾದಿ ಬೀದಿಗಳಲ್ಲಿ ಹುಡುಕಿದರೂ ಒಂದು ಚೂರು ಕಸ ಕಡ್ಡಿ ಸಿಗದು. ಆ ಕಿನ್ನರಲೋಕದಲ್ಲಿನ ವಾಸ್ತವ್ಯದ ದೆಸೆಯಿಂದ, ನನ್ನ ದಿನಿನಿತ್ಯದ ಆತಂಕ, ಕಾರಣರಹಿತ ಕಳವಳಗಳು ಬಹುವಾಗಿ ಕುಗ್ಗಿ ಶೀಘ್ರದಲ್ಲಿಯೇ ಅವು ಹೇಳಹೆಸರಿಲ್ಲವಾದವು.

ಭೂತಾನ್ ದೇಶವು ಸಾಂವಿಧಾನಿಕವಾಗಿಯೇ ರಾಜರುಗಳ ಆಳ್ವಿಕೆಯಲ್ಲಿದೆ. ವಾಂಗ್‌ಛುಕ್ ರಾಜವಂಶದವರ ಜೊತೆಗೆ ಒಂದು ಚುನಾಯಿತ ಪಾರ್ಲಿಮೆಂಟ್ ಹಾಗೂ ಪ್ರಧಾನ ಮಂತ್ರಿ ನಾಡಿನ ಆಡಳಿತವನ್ನು ಬಹು ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಈ ನಾಡಿನ ಅಧ್ಯಾತ್ಮ ಪರಂಪರೆ ಬಹಳ ಹಳೆಯದು. ಮಹಾ ಕರುಣ ಗೌತಮ ಬುದ್ಧ, ರಿನ್‌ಪೋಛೇ, ಮತ್ತು ಲಾಮ ನಾಮ್‌ಗ್ಯಾಲ್ ಇವರುಗಳು ರಾಜವಂಶದವರಿಗೆ ಅಧ್ಯಾತ್ಮ ತಳಹದಿಯನ್ನು ಮನದಟ್ಟು ಮಾಡಿಸಿ, ಜಗಳ ಕದನಗಳಿಲ್ಲದೇ ಶಾಂತಿಯುತ ಸಹಬಾಳ್ವೆಯ ಕಲೆಯನ್ನು ಜನತೆಯಲ್ಲಿ ಮೈಗೂಡಿಸಿರುವುದು, ನಿಜಕ್ಕೂ ಮೆಚ್ಚಬೇಕಾದ ಸಂಗತಿ.

ಭೂತಾನಿನ ಸ್ವಚ್ಛ ಮಾಲಿನ್ಯರಹಿತ ಗಾಳಿಯನ್ನು ಆಳವಾಗಿ ಉಸಿರಾಡುತ್ತಾ, ಇಲ್ಲಿನ ಝರಿಗಳಲ್ಲಿನ ನಿರ್ಮಲ ಜಲವನ್ನು ಮೊಗೆದು ಕುಡಿಯುತ್ತಾ, ಜನಗಳ ಅಮಾಯಕ ಬೆಚ್ಚನೆಯ ಪ್ರೀತಿ, ವಿಶ್ವಾಸಗಳ ನಡುವೆ ಇಲ್ಲಿನ ಬಟರ್‌ಟೀಯನ್ನು ಸವಿಯುವುದೇ

ಒಂದು ಮೋಜು. ಟಾಕ್‌ಸಾಂಗ್‌ನ ಟೈಗರ್ಸ್ ನೆಸ್ಟ್ ಮೊನಾಸ್ಟರಿ, ಟಾಕಿನ್ ಎಂಬ ವಿಚಿತ್ರ ರಾಷ್ಟ್ರ ಪ್ರಾಣಿ, ಕಡಿದಾದ ಬೆಟ್ಟಗಳ ಮೇಲಿನ ಅಭೇದ್ಯ ಕೋಟೆ ಇವೆಲ್ಲ ಸೊಬಗನ್ನು ಸವಿಯುತ್ತಿದ್ದಂತೆ, ನನಗೇ ಅರಿವಿಲ್ಲದಂತೆ ನನ್ನ ಮುಖದಲ್ಲಿ ಮೆಲುನಗೆ ಮೂಡಿತು. ಅಲ್ಲಿನ ಜನರೆಲ್ಲರೂ ಇದೇ ರೀತಿಯ ಮೆಲುನಗೆ ಸೂಸುತ್ತಿರುವುದರ ಮರ್ಮ ಕೊನೆಗೂ ಅರ್ಥವಾಯಿತು.

ನೋಡುವ, ಆಲಿಸುವ, ಸಂವೇದಿಸುವ ಕಲೆಯನ್ನು ಅರಿಯಲು ನೆರವು ನೀಡಿದ ಭೂತಾನ್‌ಗೆ ಕಾಡ್ರಿನ್ ಛೇ ಲಾ (ಧನ್ಯವಾದಗಳು). ನನ್ನೊಳಗಿನ ನನ್ನ ಯಾತ್ರೆಗೆ ದಾರಿದೀಪವಾದ ನಿನಗೆ ಅನಂತಾನಂತ ವಂದನೆಗಳು. ಖಂಡಿತ ಮತ್ತೆ ಕಾಣುವೆ. ಅಲ್ಲಿನವರೆಗೆ ತಾಷಿ ಡೆಲೇಕ್. (ಗುಡ್ ಲಕ್) ■






# ಮಾನಸಸರೋವರದಲ್ಲಿ ಮ್ಯಾಜಿಕಲ್ ಮೊಮೆಂಟ್ಸ್

**ಡಾ. ಶ್ಯಾಮಲಾ ರವಿಶಂಕರ್**

ಮಾನಸಸರೋವರ – ಕೈಲಾಸ ಅಂದೊಡನೆಯೇ ಯಾರಿಗಾದರೂ ರೋಮಾಂಚನ ಆಗತ್ತೆ, ಅಲ್ಲವೇ? ನಮ್ಮೆಲ್ಲರಿಗೂ ಈ ಯಾತ್ರೆ ಕೈಗೊಳ್ಳೋಕ್ಕೆ ಇಷ್ಟ, ಉತ್ಸಾಹಗಳು ಇದ್ದೇ ಇರತ್ತೆ. ಆದರೆ ಜೊತೆಜೊತೆಗೆ ಮೂಡಿಬರುವ ಆತಂಕಗಳೋ? ಎಂಥ ಆರೋಗ್ಯವಂತರಿಗೂ ಆ ಎತ್ತರ ಪ್ರದೇಶದಲ್ಲಿ ಕಡಿಮೆ ಆಮ್ಲಜನಕದ ಪರಿಸ್ಥಿತಿಗೆ ಏನಾಗತ್ತೋ ಅನ್ನೋ ಭಯ, ಜೊತೆಗೆ ವರ್ಷದಲ್ಲಿ ಮೂರೇ ತಿಂಗಳ ಅವಧಿಯಲ್ಲಿ ನಡೆಯಬೇಕಾದ ಯಾತ್ರೆ, ಎಷ್ಟೋ ರೇ... ರೇ... ಗಳು ಸಹಜವೇ. ಅಂತೂ ಈಶ್ವರನ ದಯೆ, ನನ್ನ ಪಾಲಿಗೆ ಯಾತ್ರೆ ಕೈಗೂಡಿತು. ಹಿತೈಷಿಗಳು ಬಹಳ ಕಾಳಜಿ ವ್ಯಕ್ತಪಡಿಸಿದರು. ಅದು ನಾನೊಬ್ಬಳೇ, ಅರ್ಥಾತ್ ನಮ್ಮವರು ಕಾರಣಾಂತರಗಳಿಂದ ಬರಲಾಗದೆ ಇದ್ದುದರಿಂದ! 'ಒಬ್ಬಳೇ ಹೋಗುತ್ತೀಯ? ತುಂಬಾ ಧೈರ್ಯನಪ್ಪ ನಿನಗೆ" ಅಂತ ಅಂದಾಗ "ನಾನೇನೂ ಚಾರ್ಟರ್ಡ್ ಫ್ಲೈಟ್‌ನಲ್ಲಿ ಹೋಗ್ತಾ ಇಲ್ಲವಲ್ಲಾ , ಗ್ರೂಪ್ನಲ್ಲಿ ಹೋಗತೀನಿ" ಎಂದೆ.


ಮತ್ತೊಂದು ಪ್ರಶ್ನೆ "ಸ್ನೇಹಿತರ ಜೊತೇಲೇ?" ಅಂತ!

"ಅಲ್ಲಿಂದ ಬರುವಷ್ಟು ಹೊತ್ತಿಗೆ ಎಲ್ಲರೂ ಸ್ನೇಹಿತರಾಗಿಬಿಟ್ಟಿರ್ತೀವಿ" ಅಂದೆ. ಅದೇ ನನಗೆ ಮಾತ್ರ ಒಂದು ಚೂರೂ ಭಯ ಇರಲಿಲ್ಲ.

ಬೆಂಗಳೂರಿಂದ ಖಟ್ಮಂಡುಗೆ, ಅಲ್ಲಿಂದ ನೇಪಾಳ್ ಗುಂಜ್‌ಗೆ ಪ್ಲೇನುಗಳು, ಅಲ್ಲಿಂದ ಸಿಮಿಕೋಟ್, ಅಲ್ಲಿಂದ ಹಿಲ್ಸ್‌ಗೆ ಆರು ಜನ ಕುಳಿತು ಹೋಗುವಂತಹ ಹೆಲಿಕಾಪ್ಟರ್‌ಗಳು; ಅಲ್ಲಿಂದ 600–700 ಅಡಿ ಉದ್ದದ ತೂಗುಸೇತುವೆ ಕಾಲುನಡಿಗೆಯಲ್ಲಿ ದಾಟಿದ ಮೇಲೆ ತಕಲಾಕೋಟ್ ಎಂಬ ಊರು ಸಮುದ್ರಮಟ್ಟದಿಂದ 16 ಸಾವಿರ ಅಡಿ ಎತ್ತರದಲ್ಲಿ ಟಿಬೇಟ್‌ನಲ್ಲಿದೆ. ಅಲ್ಲಿ ಸೇರೋ ಹೊತ್ತಿಗೆ ಸಾಕಷ್ಟು ಜನಕ್ಕೆ ಸುಸ್ತು. ಅಲ್ಲಿ ಒಂದು ದಿನ ಹೈಪೋಆಕ್ಸಿಜನ್ ಲೆವೆಲ್‌ಗೆ ಹೊಂದಿಕೊಳ್ಳೋದಕ್ಕೆ ರೆಸ್ಟು. ಅಲ್ಲಿಂದ ಒಂದೂವರೆ ಘಂಟೆ ಬಸ್ಸಿನಲ್ಲಿ ಹೋದರೆ ಮಾನಸ ಸರೋವರ!

ಅಲ್ಲಿಯವರೆಗೂ ನನಗೆ ಏನೂ ಅಸ್ವಸ್ಥತೆ ಆಗಲಿಲ್ಲ. ಆದರೆ ಅಲ್ಲಿ ಸರೋವರಕ್ಕೆ ಇಳಿಯಲು ಹೋದರೆ ನನಗೇ ಗೊತ್ತಿಲ್ಲದೆ ತುಂಬ ಸುಸ್ತಾದೆ. ಹೇಗೋ ಸುಧಾರಿಕೊಳ್ಳೋಣ ಅನ್ನೋ ಮಾತೇ ಇಲ್ಲದಂತಾಯಿತು. ಅಷ್ಟು ಹೊತ್ತಿಗೆ ಬಹಳಷ್ಟು ಜನ ಇಳಿದು ಮುಟ್ಟಲಾಗದಂಥಾ ಕೊರೆಯುವ ತಣ್ಣನೆ ನೀರನ್ನ ತುಂಬಿಕೊಳ್ಳುತ್ತಿದ್ದರು, ಕೆಲವರು ಪೂಜಾವಿಧಿಗಳನ್ನು ಅನುಕರಿಸುತ್ತಿದ್ದರು.. ಕಡೆಗೂ ಹೇಗೋ ತಟ್ಟಾಡಿಕೊಂಡು ಬಸ್ಸಿನಿಂದ ಇಳಿದೆ. ನಾನು ನೀರು ತುಂಬಿಕೊಳ್ಳೋ ಹೊತ್ತಿಗೆ ನನ್ನ ಸಹಪ್ರಯಾಣಿಕರು ನನ್ನ ಸಹಾಯಕ್ಕೆ ಓಡಿ ಬಂದರು. ಹಾಗಿತ್ತು ನನ್ನ ಪರಿಸ್ಥಿತಿ.

ಎದುರಿಗಿದ್ದ ಕೈಲಾಸ ಪರ್ವತವನ್ನು ಎವೆಯಿಕ್ಕದೆ ನೋಡುತ್ತಾ ಕುಳಿತಿದ್ದೆ. ಆಗ ಶುರುವಾಯಿತು ನನ್ನ ಮಾಜಿಕಲ್ ಮೊಮೆಂಟ್ಸ್! ಆ ಅಖಂಡ ಪರ್ವತದ ಒಂದು ತುದಿಯಲ್ಲಿ ಯಾರೋ ಒಂದು ಲೋಹದ ತುದಿಯಿಂದ ಏನೋ ಗೀಚುತಿದ್ದಂತೆ ಕಾಣಬಂತು. ನೋಡುನೋಡುತ್ತಿದ್ದಂತೆ ಅದು ಗಣೇಶನ ಮುಖದ ಮಹದಾಕಾರದ ರೇಖಾಚಿತ್ರ ಆಯಿತು! ನಾನು ಮೂಕವಿಸ್ಮಿತೆ! ನನ್ನ ಸುಸ್ತು ಎಲ್ಲೋ ಓಡಿಹೋಯಿತು. ಮನಸ್ಸು ಸುತಾರಾಂ ಖಾಲಿ! ನಾನು, ನನ್ನ ಮುಂದಿನ ಗಣೇಶ ಅಷ್ಟೇ. ಮನಸ್ಸು



ಬ್ಲ್ಯಾಂಕಾಗಿತ್ತು! ಎಷ್ಟು ಹೊತ್ತು ಹಾಗೆ ಕಳೆಯಿತೋ ಗೊತ್ತಿಲ್ಲ. ಕೈಲಾಸ ಪರ್ವತವೇ ಶಿವ, ಈಗ ಗಣೇಶನ ದರ್ಶನ ಆಯಿತು ಅಂದುಕೊಂಡೆ. ಆಗ ನಾಲ್ಕು ವೃತ್ತಗಳು ಪಕ್ಕದಲ್ಲೊಂದು ಜೋಡಿಸಿದಂತೆ ಕಂಡಿತು. ಇದೇನೋ ಅಂದುಕೊಳ್ಳುತ್ತಿದ್ದಂತೆ ಯಾರೋ "ಔರ್ ಕ್ಯಾ? ಕಾರ್ತಿಕೇಯ ಹೈ" ಅಂದರು ನಾನು ಮನಸ್ಸಿನಲ್ಲಿ ಅಂದೊಕೊಂಡದ್ದು ಕೇಳಿಸಿದಂತೆ! ತಿರುಗಿ ಕೂಡ ನೋಡದೆ ನಾನು, "ಕಾರ್ತಿಕೇಯ ಕೋ ಚಾರ್ ಮುಹ್ ರಹೇಗಾ ಕ್ಯಾ?" ಅಂದೆ.

ಆ ಧ್ವನಿ, "ಉಸ್ ತರಹ್ ಜಾಕೇ ದೇಖೋ, ಔರ್ ದೋ ಭೀ ದಿಖೇಗಾ" ಎಂದು ಹೇಳಿತು. ಆಕಡೆ ಹೋಗಿ ನಿಂತು ಆರು ಮುಖಗಳ ಕಾರ್ತಿಕೇಯನ ದರ್ಶನ ಮಾಡಿ ಕೈ ಮುಗಿದು ಬಂದೆ. ಇಷ್ಟಕ್ಕೂ ಆ ವ್ಯಕ್ತಿ ಯಾರು ಅಂತ ಸುತ್ತಲೂ ಕಣ್ಣಾಡಿಸಿದೆ. ಅಲ್ಲಿ ಯಾರೊಬ್ಬರೂ ಕಾಣಿಸಲಿಲ್ಲ. ನಮ್ಮ ಗುಂಪೆಲ್ಲ ಐವತ್ತು ಅಡಿ ದೂರದಲ್ಲಿ ನನಗಾಗಿ ಕಾಯುತ್ತಿದ್ದರು. ಅವರ ಮಾತು ಕೇಳಿಸುವದು ಅಸಾಧ್ಯ! ನನಗೆ ಆದೇಶ ಕೊಟ್ಟವರು ಯಾರು?

ಆ ಧ್ವನಿ ನನ್ನ ಕಿವಿಯಲ್ಲಿ ಇಂದಿಗೂ ಮೊಳಗುತ್ತಿದೆ. ಈಗ ನನಗೆ "ಅಯ್ಯೋ, ಹೀಗೆ ದೇವಿಯ ದರ್ಶನ ಕೂಡ ಆಗಿದಿದ್ದರೆ..." ಅಂತ ಅನ್ನಿಸಿದ್ದು ಸಹಜ ತಾನೇ?

ಯಾರನ್ನ ಕೇಳಿದರೂ, ಅವರಿಗೆ ಗಣೇಶ ಕಾಣಿಸಿರಲಿಲ್ಲ, ಆದರೆ ಇಂಥದ್ದೇ ಮತ್ತೇನೇನೋ ಅನುಭವಗಳು!

■

# ಆಕಾಶದಲ್ಲಿ ಹಾರಾಡಿದ ಆ ಕ್ಷಣ

ಎಚ್. ಗೋಪಾಲಕೃಷ್ಣ

"ಬ್ಲಡ್ ಶುಗರ್ ಎಷ್ಟಿದೆ ನೋಡಿಕೊಂಡಿದೀರಾ? ಎಷ್ಟು ದಿವಸ ಆಯ್ತು ಚೆಕ್ ಮಾಡಿಸಿ? ಏನು ಮೂರು ವರ್ಷದಿಂದ ಚೆಕ್ ಮಾಡಿಸೇ ಇಲ್ವಾ...?"

ಡಾಕ್ಟರು ಕೈಲಿದ್ದ ಪೆನ್ ಅನ್ನು ಟೇಬಲ್ ಮೇಲೆ ಕುಕ್ಕಿದರು. ಆಶ್ಚರ್ಯದಿಂದ ಮುಖ ನೋಡಿದರು.

ಕತೆ ಮುಂದಕ್ಕೆ ಹೋಗುವ ಮೊದಲು ಒಂದು ಹಿನ್ನೆಲೆ ಒದಗಿಸಿಬಿಡ್ತೀನಿ. ಕೆಲಸದಿಂದ ರಿಟೈರ್ ಆಗೋದಿಕ್ಕೆ ಇನ್ನೂ ಆರು ತಿಂಗಳು ಇತ್ತು. ರಿಟೈರ್ ಆದಮೇಲೆ ಮೆಡಿಕಲ್ಗೆ ಅಂತ ಖರ್ಚು ಮಾಡುವ ದುಡ್ಡು ಪೂರ್ತಿ ಬರುಲ್ಲ. ಸರ್ವೀಸ್ನಲ್ಲಿ ಇರಬೇಕಾದರೇನೆ ಗಂಡಹೆಂಡತಿ ಇಬ್ಬರೂ ನಖಶಿಖಾಂತ ಟೆಸ್ಟು ಪಸ್ಟು ಮಾಡಿಸಿಕೊಂಡುಬಿಡಿ. ಪೂರ್ತಿ ಖರ್ಚು ಮೇನೆಜುಮೆಂಟು ನೋಡಿಕೊಳ್ಳುತ್ತೆ. ಆಮೇಲೆ ಆದರೆ ಅದರ ರಿಇಂಬರ್ಸ್ಮೆಂಟ್ ಕ್ಲೇಮ್ ಮಾಡೋದು ಕಷ್ಟ. ಅಲ್ಲದೆ ಅದನ್ನ ಫಾಲೋ ಅಪ್ ಮಾಡಲು ಆಗೋದು ಇಲ್ಲ... ಅಂತ ಹೇಳಿ ನನಗಿಂತ ಹಿರಿಯ ಹುದ್ದೆಯಲ್ಲಿದ್ದ, ನನಗಿಂತಲೂ ಒಂದು ಎಂಟ್ಹತ್ತು ವಯಸ್ಸು ಕಡಿಮೆಯ ಸಹೋದ್ಯೋಗಿ ಸೂಚಿಸಿದ್ದ.

ಬಿಟ್ಟಿ ಸಿಕ್ಕರೆ ಒಂದು ಕೇಜಿ ಮೆಣಸಿನಕಾಯಿ ಬೇಕಾದರೂ ತಿಂದೇನು ಎನ್ನುವ ಮೈಂಡ್ಸೆಟ್‌ನ ಸ್ಕೂಲ್ ಆಫ್ ಥಿಂಕಿಂಗ್ ನನ್ನದು. ಆದರೂ ನಾಲ್ಕೈದು ವರ್ಷ ಮೆಡಿಕಲ್ ಚೆಕಪ್ ಬೇಡ ಅನಿಸಿ ತೆಪ್ಪಗಿದ್ದೆ. ಕಾರಣ ಚೆಕಪ್‌ಗೆ ಅಂತ ಹೋಗೋದು, ಅಲ್ಲಿ ವೈದ್ಯರು ಅದೇನೋ ನೂರೆಂಟು ತರಹದ ಪರೀಕ್ಷೆ ಮಾಡೋದೂ, ಅದಕ್ಕೆ ರಕ್ತ ಸ್ಯಾಂಪಲ್ ತಗೊಳ್ಳೋದು, ಹೃದಯದ ಚಿತ್ರ ತೆಗೆಸೋದು, ಹೊಟ್ಟೆ, ಲಿವರು, ಕಿಡ್ನಿ ಇವೆಲ್ಲಾ ಟೆಸ್ಟ್ ಮಾಡಿಸಿ, "ಅಯ್ಯೋ! ಏನ್ರೀ ಇಷ್ಟೊಂದು ಪ್ರಾಬ್ಲಂ ಇದೆಯಲ್ರೀ! ಹೃದಯ ಆರು ಕಡೆ ಬ್ಲಾಕು! ಅದಕ್ಕೆ ಓಪನ ಹಾರ್ಟ್ ಸರ್ಜರಿ ಆಗಬೇಕು, ಕಿಡ್ನಿ ಏರುಪೇರು, ಕ್ರಿಯಾಟಿನ್ ಏಳಕ್ಕೆ ಹೋಗಿದೆ, ಡಯಾಲಿಸಿಸ್ ಜತೆಗೆ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಆಗಬೇಕು, ಇನ್ನ ಲಿವರೋ, ದೇವರೇ ಗತಿ..." ಅಂತ ದೇಹದಲ್ಲಿ ಇರುವ ಎಲ್ಲಾ ಅಂಗಗಳ ಬಗ್ಗೆ ರಿಪೇರೀದೇ ಹೇಳ್ತಾ ಹೋದರೆ ಅನ್ನುವ ದೊಡ್ಡ ಭಯ. ಈ ಕಾರಣಕ್ಕೆ ವೈದ್ಯರ ಹತ್ತಿರ, ಅದರಲ್ಲೂ ತಜ್ಞವೈದ್ಯರ ಬಳಿ, ಹೋಗೋದು, ಚಿಕಿತ್ಸೆ ಪಡೆಯೋದೂ... ಇವೆಲ್ಲದರಿಂದ ರಾಜಕೀಯದವರ ಭಾಷೆಯಲ್ಲಿ ಹೇಳುವ ಹಾಗೆ ಡಿಸ್ಟೆನ್ಸ್ ಅಂದರೆ ಅಂತರ ಕಾಪಾಡಿಕೊಂಡಿದ್ದೆ. ಹೇಗಿದ್ದರೂ ಡಾಕ್ಟರ ಹತ್ತಿರ ಹೋಗುವ ಸಮಸ್ಯೆ ಇನ್ನೂ ಬಂದಿಲ್ಲವಲ್ಲ ಅಂತ ಓವರ್‌ಕಾನ್ಫಿಡೆನ್ಸಲ್ಲಿ ಹೆಚ್ಚು ಅಶಿಸ್ತು ಜೀವನ ನಡೀತಾ ಇತ್ತು. ನಡೀತಾ ಇತ್ತು ಏನು, ನಡೆಸಿಕೊಂಡುಬಂದೆ ಅಂತ ಹೇಳಿದರೆ ಸರಿ. ಈ ಹಿನ್ನೆಲೆಯಲ್ಲಿ ಡಾಕ್ಟರ ಹತ್ತಿರ ಹೋಗಿದ್ದು, "ಸರ್, ನಖಶಿಖಾಂತ ಟೆಸ್ಟುಗಳಿಗೆ ಬಂದಿದ್ದೀವಿ, ಮಾಡಿಬಿಡಿ" ಅಂತ ಕೋರಿಕೆ ಇಟ್ಟೆ.

ಗೊತ್ತಿದ್ದ ಡಾಕ್ಟರು. ಪ್ರತಿದಿನ ಅವರ ಕ್ಲಿನಿಕ್ ಮುಂದೇನೆ ನಾನು ಹೋಗ್ತಾ ಇದ್ದದ್ದು. ಅದರ ಮುಂದೆ ಹೋಗಬೇಕಾದರೆ ಕೈಯಲ್ಲಿ ಉದ್ದನೆ ಪೊಟ್ಟಣದಲ್ಲಿ ಬೇಯಿಸಿದ ಕಡಲೆಕಾಯಿ, ಗರಂಗರಂ ಕಡಲೆಕಾಯಿ, ಕಾಂಗ್ರೆಸ್ಸು ಕಡಲೆಕಾಯಿ... ಹೀಗೆ ಒಂದೊಂದು ದಿನ ಒಂದೊಂದು ಪೊಟ್ಟಣ ಹಿಡಕೊಂಡು ಬಾಯಾಡಿಸ್ತಾ ಹೋಗ್ತಾ ಇದ್ನಾ... ವಾಪಸ್ ಅದೇ ರಸ್ತೇಲಿ ಅದೇ ಕ್ಲಿನಿಕ್ ಮುಂದೆ ಬರಬೇಕಾದರೆ ಆಲೂಗೆಡ್ಡೆ ಬೋಂಡಾ, ಉದ್ದಿನ

ವಡೆ, ಈರುಳ್ಳಿ ಪಕೋಡ.... ಹೀಗೆ ಬೇರೆಬೇರೆ ವೇರೆಟಿಗಳನ್ನ ಬಾಯಾಡಿಸ್ತಾ ಬರ್ತಾ ಇದ್ದೇನಾ...

ಇದನ್ನೆಲ್ಲ ಡಾಕ್ಟರು ಅವರ ಕ್ಲಿನಿಕ್‌ನಲ್ಲಿ ಕೂತು ಅವರಿಗೆ ಮಾತ್ರ ಹೊರಗಡೆ ನೋಡುವ ಹಾಗಿದ್ದ ಗಾಜಿನ ಕಿಟಕಿಯ ಮೂಲಕ ನನ್ನನ್ನು ನೋಡ್ತಾ ಇದ್ದರಾ...? ಇವನು ಒಂದು ದಿನ ನನ್ನ ಕೈಲಿ ಸಿಗಲಿ ಅಂತ ಕೈ ಹೊಸೀತಿದ್ದರಾ... ಅದರ ಜತೆಗೆ ಹೀಗೆ ಬಿಡುಬೀಸಾಗಿ ಅರಸನ ಅಂಕೆ  ದೆವ್ವದ ಕಾಟ ಇಲ್ಲದೇ ಕೊಲೆಸ್ಟ್ರಾಲ್ ಯೋಚನೆ ಸಹ ಇಲ್ಲದೇ ಹೋಗ್ತಾ ಇರೋ ನರಮನುಷ್ಯನನ್ನು ನೋಡಿ ಹೊಟ್ಟೆ ಉರ್ಕೋತಿದ್ರಾ... ದೇವರು ಎಷ್ಟು ಸುಖವಾಗಿ ಇವನನ್ನು ಇಟ್ಟಿದ್ದಾನೆ, ನನಗೆ ಒಂದೇ ಒಂದು ದಿನ ಹೀಗೆ ಬೋಂಡಾ ಬಜ್ಜಿ ತಿನ್ನುವ, ಈರುಳ್ಳಿ ಪಕೋಡ ನೋಡುವ, ಕಡಲೆಕಾಯಿ ಮುಕ್ಕುವ ಸೌಭಾಗ್ಯ ದೇವರು ಕರುಣಿಸಲಿಲ್ಲವೇ ಅಂತ ಬೇಜಾರು ಮಾಡ್ಕೋತಿದ್ರಾ...

ಇದೇ ಸಮಯದಲ್ಲಿ ನಮ್ಮ, ಅಂದರೆ ನಾನು, ನನ್ನಾಕೆ ಎಂಟ್ರಿ ಡಾಕ್ಟರ್ ಕ್ಲಿನಿಕ್‌ನಲ್ಲಿ ಆಗಬೇಕೇ... (ಡಾಕ್ಟರ ಬಗ್ಗೆ ಇದೆಲ್ಲಾ ಆಮೇಲೆ ನನ್ನ ಗೆಳೆಯ, ಅವನೂ ಇದೇ ಡಾಕ್ಟರ ಪೇಶಂಟು; ನನಗೆ ಹೇಳಿದ್ದು.)

ನನ್ನ ಮಾತು ಕೇಳಿ ಡಾಕ್ಟರು ಅವರ ಮುಖ ಅರಳಿಸಿದ ಹಾಗೆ ಅನಿಸಿತು. ಅವರ ಮೂಗು ಡಬಲ್ ಉಬ್ಬಿತು. ದಿನಾ ನನ್ನ ಕ್ಲಿನಿಕ್ ಎದುರಿಗೇ, ನನ್ನ ಮುಂದೇನೇ ಬೋಂಡಾ ತಿಂದು ತಿಂದು ನನ್ನ ಹೊಟ್ಟೆ ಉರಿಸುತ್ತಾ ಇದ್ದೆ ಅಲ್ಲವಾ, ಬಾ ಇವತ್ತು ನಿನಗೆ ಮಾರಿಹಬ್ಬ ಮಾಡ್ತೀನಿ ಅಂತ ಅವರು ಹೇಳಿದ ಹಾಗೆ ಅನಿಸಬೇಕಾ?

ಇನ್ನು ಮುಂದಕ್ಕೆ...

"ಏನು? ಮೂರು ವರ್ಷದಿಂದ ಚೆಕ್ ಮಾಡಿಸಿಯೇ ಇಲ್ವಾ....?" ಅಂತ ಕಣ್ಣು ಅರಳಿಸಿ ನೋಡಿದರು. ಬಿಪಿ ಚೆಕ್ ಮಾಡಿಸಿದೀರೋ ಇಲ್ಲವೋ...?

"ಇಲ್ಲ ಸಾರ್, ಅದೂ ಮಾಡಿಸಿಲ್ಲ" ಅಂದೆ.

"ಶುಗರ್ ನೋಡಿಕೊಂಡಿಲ್ಲ, ಬಿಪಿ ನೋಡಿಕೊಂಡಿಲ್ಲ, ಮಿಕ್ಕಿದ್ದು ಏನಾದರೂ ಚೆಕ್ ಮಾಡಿಸಿದೀರಾ.." ಅಂತ ಸ್ವಲ್ಪ ದನಿ ಏರಿಸಿ ಕೇಳಿದರು.

"ಮಾಡಿಸಿದೀನಿ ಸಾರ್, ಐ ಟೆಸ್ಟು ಮಾಡಿಸಿದೀನಿ, ಪ್ಲಸ್ ನಾಲಕ್ಕಿದೆ, ಇನ್ನೂ ಪೊರೆ ಬಂದಿಲ್ಲ ಅಂತ ಹೇಳಿದರು ಕಣ್ಣಿನ ಡಾಕ್ಟರು..." ಅಂದೆ. ತಲೆ ಚಚ್ಚಿಕೊಂಡು ಲಾಬೊರೆಟರಿ ಒಳಗೆ ಕರೆದುಕೊಂಡು ಹೋದರು.

"ಬ್ಲಡ್, ಯೂರಿನ್ ತಗೊಳ್ಳಿ ಇವರದ್ದು" ಅಂತ ನರ್ಸ್‌ಗೆ ಹೇಳಿ, ಅದನ್ನು ಟ್ಯೂಬ್‌ನಲ್ಲಿ ತೆಗೆಸಿದರು. ಗಂಡಹೆಂಡತಿ ಇಬ್ಬರೂ, ಅಂದರೆ ನಾನು, ನನ್ನಾಕೆ ಅದನ್ನ ಕೊಟ್ಟೆವ...

"ಬನ್ನಿ" ಅಂತ ಇನ್ನೊಂದು ರೂಮಿಗೆ ಕರ್ಕೊಂಡು ಹೋದರಾ... "ನೀವು ಹೊರಗಿರಿ ಅಮ್ಮ" ಅಂತ ಹೆಂಡತೀನ ಆಚೆ ಕಳಿಸಿ ನನಗೆ ಇಸಿಜಿ ತೆಗೆದರಾ... ಅದರ ಗ್ರಾಫ್ ಕೈಲಿ ಹಿಡಿದು ನೋಡಿದ್ರಾ... ಆಗಲೇ ಎರಡು ಸಲ ಅಟ್ಯಾಕ್ ಆಗಿದೆ ಅಂತ ಈಗ ಹೇಳ್ತಾರೆ ಅಂತ ಕಾದೇನಾ...

ಏನೂ ಹೇಳದೇ ಟ್ರೆಡ್ ಮಿಲ್ ಹತ್ತಿರ ಕರಕೊಂಡು ಹೋದ್ರಾ... ಟ್ರೆಡ್‌ಮಿಲ್ ಮೇಲೆ ಹತ್ತು ಹದಿನೈದು ನಿಮಿಷ ಬೆವರು ಸುರಿದು, ಎದೆ ಡಬ್ಬಡ್ಬಬಾ ಅನ್ನುವ ತನಕ




ಓಡಿಸಿದ್ರಾ...

ಅವರೆದುರು ಕೂಡಿಸಿಕೊಂಡರು.

"ಹೊಗೆ ಸೇವನೆ ಉಂಟಾ?"

"ಇದೆ ಸಾರ್."

"ಎಷ್ಟು ವರ್ಷದಿಂದ?"

"ಮೂವತ್ತು ವರ್ಷದ ಮೇಲೆ ಸಾರ್."

"ದಿವಸಕ್ಕೆ ಎಷ್ಟು?"

"ಎರಡು ಸಾರ್."

"ಅಂದರೆ ಒನ್ ಟು ಅಂತಾನೋ, ಟೂ ಪಾಕೆಟ್ಸೋ?"

"ಪಾಕೆಟ್ಸು ಸಾರ್..."

"ಎಷ್ಟಿರುತ್ತೆ ಪಾಕೆಟ್ನಲ್ಲಿ?"

ಎಷ್ಟಿರುತ್ತೆ ಪಾಕೆಟ್ನಲ್ಲಿ ಅಂತ ಹೇಳಿದೆ.

"ಇದು ಇದೆಯೋ ಅದರ ಜತೆಗೆ? ಇದೂ ಇರಬೇಕಲ್ಲ" ಅಂತ ಕೈಲಿ ಬಾಟಲ್

ಚಿಹ್ನೆ ತೋರಿಸಿದರು.

"ಇಲ್ಲಾ ಸಾರ್, ಅದರ ಅಭ್ಯಾಸ ಇಲ್ಲ" ಅಂದೆ

"ಕುರಿ ಕೋಳಿ... ಹಂದಿ, ಬೀಫ್...?"

ಇಲ್ಲಾ ಸಾರ್ ಅಂತ ಮತ್ತೆ ತಲೆ ಆಡಿಸಿದೆ

"ಆಶ್ಚರ್ಯ" ಅಂದರು.

ಟ್ರೆಡ್ಮಿಲ್, ಇಸಿಜಿ ಅದರ ರಿಪೋರ್ಟ್ ನೋಡಿದ್ರಾ... ನನ್ನಾಕೆಗೆ ಸಹ ಇದೆಲ್ಲಾ ಟೆಸ್ಟು ಮಾಡಿದ್ರಾ... "ನಾಳೆ ಬೆಳಿಗ್ಗೆ ಬನ್ನಿ, ಬ್ಲಡ್ ರಿಪೋರ್ಟ್ ಬಂದಿರುತ್ತೆ" ಅಂದರು.

ಸಾರ್ ಇದು ಇಸಿಜಿ, ಟ್ರೆಡ್ಮಿಲ್ ರಿಪೋರ್ಟ್; ಅದೇನು ತೋರಿಸುತ್ತೆ...?" ಅಂದೆ.

"ಅದೂ ಸಹ ನಾಳೆ ಬನ್ನಿ, ಎಲ್ಲಾ ನೋಡೋಣ" ಅಂದರು.

ಸರಿ, ಕ್ಲಿನಿಕ್‌ನಿಂದ ಆಚೆ ಬಂದೆನಾ... 'ನಾಳೆ ರಿಪೋರ್ಟ್ ಬರುತ್ತೆ. ಅದೇನು ಹೇಳ್ತಾರೋ! ಹಾರ್ಟು ಅದೆಷ್ಟು ಕಡೆ ಬ್ಲಾಕ್ ಆಗಿದೆಯೋ! ಇನ್ನ ಶುಗರ್ ಅದೆಷ್ಟು ಇರುತ್ತೋ! ಕಿಡ್ನಿ ಅದೇನಾಗಿದೆಯೋ, ಲಿವರ್ ಅದೇನಾಗಿದೆಯೋ...

ಜೀವನವನ್ನ ಇಷ್ಟೊಂದು ಲೈಟ್ ಆಗಿ ತಗೋಬಾರದಿತ್ತು. ಸ್ವಲ್ಪ ಸೀರಿಯಸ್ನೆಸ್ ಇರಬೇಕಿತ್ತು. ಅಕಸ್ಮಾತ್ ಎಲ್ಲಾ ಸರಿ ಇದೆ ಅಂತ ಅಂದುಬಿಟ್ಟರೆ, ನಾಳೆಯಿಂದಾನೇ ಪೂರ್ತಿ ಡಿಸಿಪ್ಲಿನ್ನಲ್ಲಿ ಇರಬೇಕು. ದೇವರೇ, ಏನೂ ಸಮಸ್ಯೆ ಇಲ್ಲ ಅಂತ ಡಾಕ್ಟರು ಹೇಳಲಿ' ಅಂತ ಮೊದಲನೇ ಸಲಕ್ಕೆ ದೇವರನ್ನ ಕೇಳಿಕೋಬೇಕು ಅನಿಸಿತು.

'ರಿಪೋರ್ಟ್ ನೋಡಿ ನಾಳೇನೇ ಅಡ್ಮಿಟ್ ಆಗು ಅಂದರೆ ಏನು ಮಾಡೋದು...? ಹಾರ್ಟ್ ಆಪರೇಶನ್ ಆಗಬೇಕಾದರೇನೇ ಜೀವ ಹೋಗಿಬಿಡತ್ತಾ... ಸ್ಮೋಕಿಂಗ್‌ನಿಂದ ಆರ್ಟರಿ ಬ್ಲಾಕ್ ಆಗಿ ಕಾಲುಗೀಲೂ ತೆಗೀಬೇಕು ಅಂದುಬಿಟ್ಟರೆ...'

ಈ ಯೋಚನೆಯಲ್ಲಿ ಇಡೀ ರಾತ್ರಿ ಅರ್ಧ ನಿದ್ದೆ, ಅರೆಬರೆ ಕನಸಿನಲ್ಲಿ ಬೆಳಕು ಹರೀತಾ... ಕನಸಿನ ತುಂಬಾ ಡಾಕ್ಟರು ಹೃದಯ ಸರ್ಜರಿ ಮಾಡಿದ್ದು, ಕಾಲು ಅಂಪ್ಯೂಟ್ ಮಾಡಿದ ದೃಶ್ಯಗಳೇ ಒಂದಾದ ಮೇಲೆ ಮತ್ತೊಂದು ಬೀಳಬೇಕೇ...

'ಡಾಕ್ಟರ ಹತ್ರ ಹನ್ನೊಂದಕ್ಕೆ ಹೋಗಬೇಕು. ಆಮೇಲೆ ಆಸ್ಪತ್ರೆಗೆ ಅಡ್ಮಿಟ್...' ಯೋಚನೆ ಹೀಗೆ ಹರೀತಾ ಹರೀತಾ ಟೈಮ್ ಆಯ್ತಾ...

ರಿಪೋರ್ಟ್ ತರೋಕ್ಕೆ ನಾನ್ಯಾಕೆ? ನೀವೇ ತಂದುಬಿಡಿ..." ಅಂತ ಹೆಂಡತಿ ಅವಳ ಪಾಡಿಗೆ ಅವಳ ಕೆಲಸದಲ್ಲಿ ಮುಳುಗಿದಳು. ಒಬ್ಬನೇ ಹೋಗೋದೇ ವಾಸಿ; ಡಾಕ್ಟರು ಅದೆಷ್ಟು ಬೈತಾರೋ ಒಬ್ಬನೇ ಬೈಸಿಕೊಳ್ಳೋದು ಸರಿ ಅಂತ ಅಂದುಕೊಂಡು ಡಾಕ್ಟರ ಶಾಪಿಗೆ ಕಾಲು ಎಳೆದುಕೊಂಡು ಹೋದೆ.

ಹೊರಗಡೆ ಸಾಲಿನಲ್ಲಿ ಕೂತಿದ್ದ ಜನರ ಅಂಚಿಗೆ ಸೇರಿದೆ. ಹಾಗೇ ನಿದ್ದೆಗೆ ಜಾರಿದೆ. ಯಾರೋ ಭುಜ ತಟ್ಟಿದರು ಅಂತ ಎಚ್ಚರ ಆಯ್ತು. "ಸಾರ್, ಡಾಕ್ಟರು ಕೂಗ್ತಾ ಇದಾರೆ, ಒಳಗೆ ಹೋಗಿ" ಅಂದರು ನನ್ನನ್ನು ಎಬ್ಬಿಸಿದವರು.

ಬಾಗಿಲು ನೂಕಿ ಒಳಗೆ ಹೋದೆ. ಅವರ ಎದುರಿನ ಕುರ್ಚಿಯಲ್ಲಿ ಕೂತೆ. ಒಂದು ರೀತಿ ಭಯ ಆವರಿಸಿತ್ತು.

ಡಾಕ್ಟರು ನನ್ನ ಫೈಲ್ ತೆಲೆಗೆದರು. ಎಲ್ಲಾ ಒಂದು ಸಲ ಪೂರ್ತಿ ಓದಿದರು.

"ಹೂಂ. ಗೋಪಾಲ್, ಬಿಪಿ ನಿಮ್ಮ ಏಜಿಗೆ ಸರಿ, ಶುಗರ್ ಕೊಂಚ ಜಾಸ್ತಿ, ಬಾರ್ಡರ್ನಲ್ಲಿದೆ."

ಈಗ ಹಾರ್ಟ್, ಲಿವರ್ ಕತೆ ಹೇಳ್ತಾರೆ! ಎದೆಯ ಡವಡವ ಹೆಚ್ಚಾಯ್ತು.

"ಲಿವರ್ ಫಂಕ್ಷನ್ ಸರಿ ಇದೆ ಇವರೇ. ಕೊಲೆಸ್ಟ್ರಾಲ್ ಕೊಂಚ ಹೆಚ್ಚು. ಕ್ರಿಯಾಟಿನ್ ವಿತಿನ್ ಲಿಮಿಟ್ಸ್. ಹಾರ್ಟ್..."

"ಹೂಂ ಸಾರ್... ಹಾರ್ಟ್...?" ಅಂದೆ

"ಹಾರ್ಟ್... ಹಾರ್ಟ್ ಸಹ ಓಕೇರಿ.... ಸದ್ಯಕ್ಕೆ ಇಟ್ಸ್ ವರ್ಕಿಂಗ್ ಗುಡ್..." ಅಂದರು ಆಕಾಶದಲ್ಲಿ ಹಾರೋ ಹಾಗೆ ಆಯ್ತು. ಸುಮ್ಸುಮ್ನೆ ಏನೇನೋ ಯೋಚನೆ ಮಾಡಿ ತಲೆ ಕೆಡಿಸಿಕೊಂಡ ಹುಚ್ಚ ನಾನು ಅನಿಸಿಬಿಟ್ಟಿತು. ಹಕ್ಕಿಯ ಹಾಗೆ ರೆಕ್ಕೆ ಆಡಿಸುತ್ತಾ ಆಕಾಶದಲ್ಲಿ ಹಾರಾಡಿದ ಅಪೂರ್ವ ಯೋಗವನ್ನು, ಪುಣ್ಯವನ್ನು, ಭಾಗ್ಯವನ್ನು ಅನುಭವಿಸುತ್ತಾ ಇದೀನಿ ಅಂತ ಅನಿಸಿಬಿಟ್ಟಿತು. ಆ ಕ್ಷಣ ನನ್ನ ಹಲವಾರು ಮ್ಯಾಜಿಕಲ್ ಕ್ಷಣಗಳಲ್ಲಿ ಒಂದಾಗಿ ಅಚ್ಚಳಿಯದೆ ಹೃದಯದಲ್ಲಿ ನಿಂತದ್ದು ಈಗ ಸವಿಸವಿನೆನಪು. ಇದಾಗಿದ್ದು ಹದಿನೈದು ವರ್ಷ ಹಿಂದೆ.

ನಂತರ ನಾನು ಶಿಸ್ತಿನ ಜೀವನಕ್ಕೆ ಕಾಲಿಟ್ಟೆನೇ... ಅದನ್ನು ಮುಂದೆ ಯಾವಾಗಲಾದರೂ ನಿಮ್ಮ ಮುಂದೆ ಹರವುತ್ತೇನೆ.

■

**ಅಪ್ಪನ ದುಡ್ಡು ಎಣಿಸೋಕಾಗಲ್ಲ.....**

ಗುಂಡನ ವರ್ಶನ್..

ಅಂದು ಶಾಲೆಯಲ್ಲಿ ಒಗಟುಗಳ ಬಗ್ಗೆ ಮಾತಾಡ್ತಾ ಮೇಡಂ, ಕೆಲವು ಒಗಟುಗಳನ್ನು ಕೇಳಿ..

ಅಪ್ಪನ ದುಡ್ಡು ಎಣಿಸೋಕಾಗಲ್ಲ, ಅಮ್ಮನ ಸೀರೆ ಮಡಚೋಕಾಗಲ್ಲ. ಈ ಒಗಟಿನ ಉತ್ತರ ಹೇಳಿ ಅಂದ್ರು..

ಬಹುತೇಕ ಎಲ್ಲ ಮಕ್ಕಳಿಗೂ ಗೊತ್ತಿದ್ದರಿಂದ ನಕ್ಷತ್ರ, ಆಕಾಶ ಅಂದ್ರು.

ಆದ್ರೆ ಗುಂಡ ಹೇಳಿದ, ಈಗ ಈ ಒಗಟು ಸ್ವಲ್ಪ ಚೇಂಜ್ ಆಗಿದೆ ಮೇಡಂ ಅಪ್ಪನ ದುಡ್ಡೂ ಎಣಿಸೋಕಾಗಲ್ಲ, ಅಮ್ಮನ ದುಡ್ಡೂ ಎಣಿಸೋಕಾಗಲ್ಲ ಅಂತ.. ಯಾರು ಹೇಳ್ತೀರಾ ಉತ್ತರ ಅಂದ.

ಎಲ್ಲರೂ ಸೈಲೆಂಟಾದ್ರು..

ಮೇಡಂ ಅಂದ್ರು.. ಹೋಗ್ಲಿ ಗುಂಡ, ನೀನೇ ಆನ್ಸರ್ಹೇಳಪ್ಪಾ ..

ಅಯ್ಯೋ ಮೇಡಂ, ಇದು ತುಂಬ ಸುಲಭ.. ಅಪ್ಪನ ದುಡ್ಡು ಎಣಿಸೋಕಾಗಲ್ಲ ಅಂದ್ರೆ ಜಗತ್ತಿನ, ನಮ್ಮ ದೇಶದ ಅತಿ ಶ್ರೀಮಂತ ಮುಖೇಶ್ ಅಂಬಾನಿ ದುಡ್ಡು ಅಂತ ಅಮ್ಮನ ದುಡ್ಡೂ ಎಣಿಸೋಕಾಗಲ್ಲ ಅಂದ್ರೂ ನೀತಾ ಮೇಡಂ ದುಡ್ಡು ಅಂತ.. ಅಂದಾಗ ಮೇಡಂ ಜೊತೆಗೆ

ಮಕ್ಕಳೆಲ್ಲ ಹೊಟ್ಟೆ ಹುಣಾಗುವಂತೆ ನಕ್ಕರು.

**– ಸುಮನಾ.**

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಅ

- ✓ ಆಸ್ತಿ ಮಾಡಿ. ಆದರೆ ನಿಮ್ಮ ಆರೋಗ್ಯ ಕೆಟ್ಟಾಗ ನಿಮ್ಮ ಮಕ್ಕಳು ಡಾಕ್ಟರ್ ಬದಲು ಲಾಯರ್‌ಗೆ ಫೋನ್ ಮಾಡುವಷ್ಟು ಆಸ್ತಿ ಮಾಡಬೇಡಿ.
- ✓ ತಾಯಂದರಿಗೆ ಭಾನುವಾರ ಎಂಬ ಬಿಡುವಿರುವುದಿಲ್ಲ.
- ✓ ದಿ ಪರ್‌ಪಸ್ ಆಫ್ ಬುಸಿನೆಸ್ ಈಸ್ ಟು ಕ್ರಿಯೇಟ್ ಎ ಕಸ್ಟಮರ್.
- ✓ ಇರುವಷ್ಟು ಸಾಕೆಂದವರು ಬಡವರಾಗಿದ್ದರೂ ಬದುಕುತ್ತಾರೆ. ಇನ್ನಷ್ಟು ಬೇಕು ಎನ್ನುವವರು ಶ್ರೀಮಂತರಾಗಿದ್ದರೂ ಕೊರಗುತ್ತಾರೆ.
- ✓ ಎ ಚೈನ್ ಈಸ್ ಅಸ್ ಸ್ಟ್ರಾಂಗ್ ಅಸ್ ಇಟ್ಸ್ ವೀಕೆಸ್ಟ್ ಲಿಂಕ್.
- ✓ ಜನಗಳು ಪುಸ್ತಕದಂತೆ. ಕೆಲವರು ರಕ್ಷಾಪುಟದಿಂದ ಮೋಸಗೊಳಿಸುತ್ತಾರೆ. ಇತರರು ಅದರೊಳಗಿನ ಹೂರಣದಿಂದ ಚಕಿತಗೊಳಿಸುತ್ತಾರೆ.
- ✓ ಬಿ ದೇರ್ ಫಾರ್ ಅದರ್ಸ್ ಬಟ್ ನೆವೆರ್ ಲೀವ್ ಯುವರ್‌ಸೆಲ್ಫ್ ಬಿಹೈಂಡ್.
- ✓ ಬದುಕೆಷ್ಟು ಅಣಕ. ಸುಖ ಅರಿಯಲು ದು:ಖ ಇರಬೇಕು. ನಿಶ್ಶಬ್ದ ಅರಿಯಲು ಶಬ್ದ ಇರಬೇಕು. ಹಾಜರಿ ಅರಿಯಲು ಗೈರುಹಾಜರಿ ಇರಬೇಕು.
- ✓ ಹ್ಯೂಮರ್ ಈಸ್ ರಿಸ್ಕಿ ಸಿನ್ಸ್ ಇಟ್ ಈಸ್ ಸೊ ಕ್ಲೋಸ್ ಟು ಟ್ವಿಟ್.
- ✓ ಬದುಕು ಹಾರ್ಮೋನಿಯಂನಂತೆ. ಬಿಳಿ ಕೀಗಳು ಸುಖ, ಕರಿ ಕೀಗಳು ದುಃಖ. ಸಂಗೀತ ಹೊರಡಿಸಬೇಕಾದರೆ ಎರಡೂ ಅವಶ್ಯ ಎಂಬುದನ್ನು ಮರೆಯದಿರಿ.
- ✓ ನೀವು ಸರಿ ಇದ್ದರೆ ಅದನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. ತಪ್ಪು ಮಾಡಿದ್ದರೆ ಅದನ್ನು ಯಾರೂ ಮರೆಯುವುದಿಲ್ಲ.
- ✓ ಎ ಮಿಸ್ಟೇಕ್ ದಟ್ ಮೇಕಸ್ ಯು ಹಂಬಲ್ ಈಸ್ ಬೆಟರ್ ದ್ಯಾನ್ ಅನ್ ಅಚೀವ್‌ಮೆಂಟ್ ದಟ್ ಮೇಕ್ಸ್ ಯು ಆ್ಯರೊಗೆಂಟ್.
- ✓ ಜೀವನ ಒಂದು ಪಯಣ. ಆದರೆ ದಾರಿ ತೋರಲು ನಕ್ಷೆಗಳಿರವು. ತಲುಪದಾಣ ಮುಟ್ಟಲು ನಾವೇ ಮಾರ್ಗ ಹುಡುಕಿಕೊಳ್ಳಬೇಕು.
- ✓ ನಿಮ್ಮ ಬದುಕಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಿಕೊಳ್ಳಬೇಕೆ? ಹಾಗಿದ್ದರೆ ನಿಮ್ಮ ಸಾಮಾಜಿಕ ಜಾಲತಾಣಕ್ಕೆ ನಿಮ್ಮ ಬಂಧುಗಳನ್ನು ಸೇರಿಸಿಕೊಳ್ಳಿ.
- ✓ ಸಕ್ಸೆಸ್ ಈಸ್ ನೆವರ್ ಓನ್ಡ್. ಇಟ್ ಈಸ್ ರೆಂಟೆಡ್ ಅಂಡ್ ದಿ ರೆಂಟ್ ಈಸ್ ಡ್ಯೂ ಎವೆರ್ರಿ ಡೆ.
- ✓ ಜಿಂದಗಿ ಬಡಿ ಹೋನಾ ಚಾಯಿಯೆ. ಲಂಬಿ ನಹಿ.

■

# ದಿಢೀರ್ ವಿ.ಐ.ಪಿ

**✍ಬೇಲೂರು ರಾಮಮೂರ್ತಿ**

ಒಂದೊಂದು ಸಾರಿ ನಮ್ಮ ಯೋಗ್ಯತೆ ನಮ್ಮ ನಿರೀಕ್ಷೆಗೂ ಮೀರಿ ಎತ್ತರೆತ್ತರಕ್ಕೆ ಏರಿದಾಗ ಮೂಕರಾಗುವುದು ಸಹಜ. ಒಮ್ಮೆ ನಮ್ಮ ಜಯನಗರದ ಮೈದಾನಕ್ಕೆ ಒಬ್ಬರು ಅಧ್ಯಾತ್ಮ ಚಿಂತಕರು ಬರುವ ಕಾರ್ಯಕ್ರಮ ಇತ್ತು. ಸರಿ, ಹೋಗಿ ಅವರ ಮಾತುಗಳನ್ನು ಕೇಳಿಕೊಂಡು ಬರೋಣ ಅಂತ ನಾನು ನನ್ನ ಪತ್ನಿಯನ್ನೂ ಕರೆದುಕೊಂಡು ಹೊರಟೆ. ಹೇಗೂ ಅಧ್ಯಾತ್ಮ ಚಿಂತಕರ ಸಭೆಗೆ ಹೋಗುತ್ತಿದ್ದೀನಿ ಎಂದು ಒಂದು ಪಂಚೆ ಷರಟು ತೊಟ್ಟು ಮೇಲೊಂದು ಶಲ್ಯ ಹೊದ್ದು ಹೊರಟೆ. ಸಭೆ ಇದ್ದುದು ಸಂಜೆ ಐದು ಗಂಟೆಗೆ. ನಾನು ಮೂರೂವರೆಗೇ ಮನೆ ಬಿಟ್ಟು ಮೈದಾನ ತಲುಪಿದಾಗ ನಾಲ್ಕು ಗಂಟೆ. ಅಂದರೆ ಒಂದು ಗಂಟೆ ಮುಂಚಿತವಾಗಿ. ನಾನು ಅಲ್ಲಿಗೆ ಹೋದೊಡನೇ ಷಾಕ್ ಹೊಡೆಸಿಕೊಂಡವನಂತಾದೆ. ಏಕೆಂದರೆ ನನಗೆ ನನ್ನ ಸ್ಕೂಟರು ನಿಲ್ಲಿಸಲೂ ಜಾಗಕ್ಕೆ ಪರದಾಡಬೇಕಾಯಿತು. ಇನ್ನು ಮೈದಾನದಲ್ಲಿ ಷಾಮಿಯಾನ ಹಾಕಿ ಸಿಂಗರಿಸಿದ್ದರು. ಅಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಜನರು ಆಗಲೇ ಸೇರಿದ್ದರು. ಒಂದಿಂಚೂ ಜಾಗ ಸಿಗೋ ಲಕ್ಷಣ ಕಾಣಲಿಲ್ಲ. ನಮಗೆ ನೆಲದ ಮೇಲೆ ಕೂರಲು ಆಗೋದಿಲ್ಲ. ಕುರ್ಚಿಗಳಂತೂ ಅಪರೂಪವಾಗಿತ್ತು. ಇಷ್ಟು ದೂರ ಕೂತರೆ ಅವರ ಮಾತುಗಳನ್ನೇನೋ ಕೇಳಬಹುದು, ಆದರೆ ಅಧ್ಯಾತ್ಮ ಚಿಂತಕರನ್ನು ಹತ್ತಿರದಿಂದ ನೋಡಿದಂತೆ ಆಗುವುದಿಲ್ಲ ಅನಿಸಿತು. ಜೊತೆಗೆ ಅವರು ಐದು ಗಂಟೆಗೆ ಬಂದರೆ ಕಾರ್ಯಕ್ರಮ ಸುಮಾರು ಆರೂವರೆಯ ತನಕ ಆಗಬಹುದು ಅನಿಸಿತು. ಅಷ್ಟೂ ಹೊತ್ತು ಸರಿಯಾಗಿ ಕೂತುಕೊಳ್ಳಲು ಜಾಗ ಇಲ್ಲದಿದ್ದರೆ ಕಷ್ಟ ಅನಿಸಿತು.

ಏನು ಮಾಡಬೇಕು ಅಂತ ಯೋಚಿಸುತ್ತಿದ್ದಾಗ ನನ್ನ ತಲೆಗೆ ಹೊಳೆದದ್ದು ಅಧ್ಯಾತ್ಮ ಚಿಂತಕರು ಮೈದಾನಕ್ಕೆ ಬರಲು ಒಂದು ದಾರಿಯನ್ನು ಗೊತ್ತು ಮಾಡಿದ್ದರು. ಅವರ ವಾಹನ ಒಂದು ಕಡೆ ನಿಲ್ಲುತ್ತೆ. ಅಲ್ಲಿಂದ ಅವರು ನಡೆದುಕೊಂಡು ಸಭೆಗೆ ಬರುತ್ತಾರೆ ಎನ್ನುವುದನ್ನು ಗೊತ್ತುಮಾಡಿದ್ದರು. ನಾನೂ ನನ್ನ ಪತ್ನಿಯೂ ಆ ದಾರಿಯಲ್ಲೇ ನಿಂತು ಅವರು ಬಂದಾಗ ಅವರ ದರ್ಶನ ಮಾಡಿ ನಮಸ್ಕಾರ ಮಾಡಿ ಹೊರಟುಹೋಗೋಣ ಅಂದು ಅಲ್ಲಿಯೇ ನಿಂತಿದ್ದೆವು. ನನಗಂತೂ ಅಲ್ಲಿ ಯಾರ ಪರಿಚಯವೂ ಇರಲಿಲ್ಲ. ಹೀಗಾಗಿ ಸುಮ್ಮನೇ ನಿಂತಿದ್ದೆ. ಸ್ವಲ್ಪ ಹೊತ್ತಿಗೇ ನಡೀತು ನೋಡೀ ಒಂದು ಜಾದೂ.

ನನ್ನನ್ನು ನೊಡಿಕೊಂಡು ನನ್ನನ್ನೇ ನೊಡುತ್ತಾ ಬಂದ ಹಿರಿಯರೊಬ್ಬರು "ಇದೇನು ಇಲ್ಲಿಯೇ ನಿಂತುಬಿಟ್ಟಿದ್ದೀರ? ಬನ್ನಿ" ಅಂದು ನನ್ನನ್ನು ಮೈದಾನದ ಒಳಗೆ ಕರೆದುಕೊಂಡು ಹೋಗಿ ವಿ.ಐ.ಪಿ.ಗಳಿಗೆ ನಿಗದಿಯಾಗಿದ್ದ ಸೋಫಾದಲ್ಲಿ ಕೂರಿಸಿಬಿಟ್ಟರು. ನನಗೆ ಒಂದು ಕ್ಷಣ ನಾನು ಯಾರು, ನನಗೇಕೆ ಇಂಥಾ ದೊಡ್ಡ ಗೌರವ, ಎನ್ನೋದು ತಿಳಿಯಲೇ ಇಲ್ಲ. ನನಗೆ ಆ ಮಟ್ಟದ ಗೌರವ ಕೊಟ್ಟು ಮಹನೀಯರು ಯಾರು ಎಂದು ಎಷ್ಟು ನೆನಪಿಸಿಕೊಂಡರೂ ತಿಳಿಯಲೇ ಇಲ್ಲ. ನಾನೂ ನನ್ನ ಪತ್ನಿಯೂ ಅಲ್ಲಿ ಆರಾಮವಾಗಿ ಕೂತಿದ್ದಾಗ ಒಬ್ಬರು ಬಂದು ಇಲ್ಲಿ ಹಿರಿಯ ಕಾರ್ಯಕರ್ತರು ಬರುತ್ತಾರೆ ನೀವು ಹಿಂದುಗಡೆ ಹೋಗಿ ಕೂತುಕೊಳ್ಳಿ ಅಂದರು. ಆಯ್ತು ಎಂದು ನಾನೂ, ನನ್ನ ಪತ್ನಿಯೂ ಎದ್ದೆವು. ನನ್ನ ಪತ್ನಿಗೆ ಸ್ಥಳ ಸಿಕ್ಕಿತು. ನನಗೆ ಸಿಗಲಿಲ್ಲ. ನಾನು ನಿಂತೇ ಇದ್ದೆ. ಆಗ ಒಬ್ಬರು ಮಹಿಳೆ ಬಂದು "ದಯವಿಟ್ಟು ಕ್ಷಮಿಸಿ" ಎಂದು ಒಂದು ಕುರ್ಚಿ ತಂದು ಹಾಕಿ

"ದಯವಿಟ್ಟು ಕೂತುಕೊಳ್ಳಿ" ಎಂದರು. ಅಷ್ಟೇ ಅಲ್ಲ, ಒಂದು ಅರ್ಧ ಲೀಟರು ನೀರಿನ ಬಾಟಲನ್ನೂ ಕೊಟ್ಟರು. ಸ್ವಲ್ಪ ಹೊತ್ತಿಗೆ ಹಿರಿಯ ಕಾರ್ಯಕರ್ತರು ಬಂದರು. ಅವರನ್ನು ಸ್ವಾಗತಿಸಿ ಸೋಫಾ ಕಡೆ ಕೈ ತೋರಿಸಿದಾಗ ಅವರು "ಎಲ್ಲಾದರೂ ಉಂಟೇ! ನಾನು ಅಲ್ಲಿ ನೆಲದ ಮೇಲೆ ಕೂತ್ಕೋತೀನಿ" ಅಂದು ಹೊರಟೇ ಹೋದರು. ಆ ಮಹಿಳೆ ನಮ್ಮನ್ನು ಕರೆದು ಮತ್ತೆ ಸೋಫಾದಲ್ಲಿ ಕೂರಿಸಿ "ಇನ್ನು ಯಾರೂ ನಿಮ್ಮನ್ನು ಎಬ್ಬಿಸೋಲ್ಲ" ಅಂದರು. ನನಗೆ ಹೃದಯ ತುಂಬಿ ಬಂದು ಆ ತಾಯಿಗೆ ಮನಃಪೂರ್ವಕವಾಗಿ ನಮಿಸಿದೆ.

ಆ ಕಡೆ ಈ ಕಡೆ ನೋಡುತ್ತಿರುವಾಗ ನನ್ನ ಸ್ನೇಹಿತ ಫೋಟೋ ತೆಗೆಯುತ್ತಿರುವುದು ಕಾಣಿಸಿತು. ನಾನು ಎದ್ದು ಅವನ ಬಳಿ ಹೋಗಿ, "ಏನಪ್ಪಾ, ನನ್ನದೊಂದೆರಡು ಫೋಟೋ ತೆಗೆಯುತ್ತೀಯಾ?" ಅಂತ ಕೇಳಿದರೆ, "ಅಯ್ಯೋ, ಅದಕ್ಕೇನು! ಬನ್ನಿ ಸ್ವಾಮಿ" ಎಂದು ನನ್ನನ್ನೂ, ನನ್ನ ಹೆಂಡತಿಯನ್ನೂ ಸಭೆಯ ಸ್ಟೇಜ್ ಬಳಿ ನಿಲ್ಲಿಸಿ (ಹಿಂಬದಿಯಲ್ಲಿ ಅಧ್ಯಾತ್ಮ ಚಿಂತಕರ ದೊಡ್ಡ ಫೋಟೋ ಇತ್ತು) ಅಚ್ಚುಕಟ್ಟಾದ ಫೋಟೋ ತೆಗೆದ. ನಂತರ ನಾನು ಅವನಿಗೆ "ಏನಪ್ಪಾ, ಈಗ ಬರ್ತಾರಲ್ಲ ಅಧ್ಯಾತ್ಮ ಚಿಂತಕರು, ಅವರ ಜೊತೆ ನನ್ನದೊಂದು ಫೋಟೋ ತೆಗೆದುಕೊಡ್ತೀಯಾ?" ಅಂತ ಕೇಳಿದೆ. ಅದಕ್ಕೆ ಅವನು "ಬಾ ಇಲ್ಲಿ" ಅಂತ ನನ್ನನ್ನು ಕರೆದುಕೊಂಡು ಹೋಗಿ, "ನೋಡು, ಅಧ್ಯಾತ್ಮ ಚಿಂತಕರು ಹೀಗೆ ಬರ್ತಾರೆ. ನೀನೂ, ನಿನ್ನ ಪತ್ನಿಯೂ ಆ ಕಡೆ ನಿಂತುಕೊಳ್ಳಿ. ಅವರು ಬರುವಾಗ ಫೋಟೋ ತೆಗೆದುಕೊಡ್ತೀನಿ" ಎಂದ. ನಾವು ಅವನು ಹೇಳಿದ ಕಡೆ ಹೋಗಿ ನಿಂತೆವು. ಐದು ಗಂಟೆಗೆ ಸರಿಯಾಗಿ ಅಧ್ಯಾತ್ಮ ಚಿಂತಕರು ಬಂದರು. ಅವರನ್ನು ಹತ್ತಿರದಿಂದ ನೋಡಿ ಕಣ್ತುಂಬಿಕೊಳ್ಳುತ್ತಿರುವ ಸಂದರ್ಭವನ್ನು ನನ್ನ ಸ್ನೇಹಿತ ಬಹಳ ಚನ್ನಾಗಿ ಫೋಟೋ ತೆಗೆದುಕೊಟ್ಟ.



ನಂತರ ಮತ್ತೆ ಬಂದು ನಮ್ಮ ಸೋಫಾದಲ್ಲಿ ಕೂತೆವು. ಅಧ್ಯಾತ್ಮ ಚಿಂತಕರ ಪ್ರವಚನ ಬಹಳ ಚೆನ್ನಾಗಿತ್ತು. ಆ ಮೈದಾನದಲ್ಲಿ ಸೇರಿದ್ದ ಸುಮಾರು ಎರಡು ಸಾವಿರಕ್ಕೂ ಹೆಚ್ಚಿನ ಜನ ಒಂದು ಚೂರೂ ಶಬ್ದವಿಲ್ಲದೇ ಅಧ್ಯಾತ್ಮ ಚಿಂತಕರ ಮಾತು ಕೇಳುತ್ತಿದ್ದುದು ಅಚ್ಚರಿ ಎನಿಸಿತು. ಎಲ್ಲಾ ಮುಗಿದು ಅಧ್ಯಾತ್ಮ ಚಿಂತಕರು ಹೊರಟಾಗ ನಾನೂ ನನ್ನ

ಪತ್ನಿಯೂ ಅವರು ಹೊರಡುವ ದಾರಿಯಲ್ಲಿ ಕೈ ಮುಗಿದು ನಿಂತಿದ್ದೆವು. ಅವರು ಬಂದೊಡನೇ ನಾನು "ಗುರುಗಳೇ, ನಾನು ಬೇಲೂರು ರಾಮಮೂರ್ತಿ. ನಮಸ್ಕಾರ" ಎಂದೆ. ಅವರು ನನ್ನ ಕಡೆ ನೋಡಿ ಮುಗುಳ್ನಕ್ಕು ಹೊರಟರು.

ಧನ್ಯೋಸ್ಮಿ ಎನಿಸಿತು. ಬಹಳ ಧನ್ಯತಾ ಭಾವದಿಂದ ಅಲ್ಲಿಂದ ಹೊರಟೆವು. ನಿಜ ಹೇಳ್ತೀನಿ, ಇದು ಅತಿಶಯೋಕ್ತಿಯಲ್ಲ. ಬಹಳಷ್ಟು ಜನ ನನ್ನನ್ನು ಕಂಡು ಬಹಳ ವಿಶ್ವಾಸದಿಂದ ನಮಸ್ಕಾರ ಮಾಡಿದರು. ನನಗೆ ನೆನಪಿನ ಶಕ್ತಿ ಮೊದಲಿಂದಲೂ ಕಡಿಮೆ. ಅವರುಗಳು ಯಾರೂಂತ ನನಗೆ ತಿಳಿಯಲೇ ಇಲ್ಲ. ಆದರೂ ಅದನ್ನು ತೋರಿಸಿಕೊಳ್ಳಬಾರದು ಎಂದು ನಾನೂ ವಿನಮ್ರನಾಗಿ ಅವರಿಗೆ ಕೈ ಮುಗಿದು, ಚೆನ್ನಾಗಿದೀರಾ, ಬಹಳ ದಿವಸ ಆಗಿತ್ತಲ್ಲ ನಿಮ್ಮನ್ನು ನೋಡಿ, ಎಲ್ಲಾ ಕ್ಷೇಮವೇ ಎಂದು ವಿಚಾರಿಸಿದೆ. ನನ್ನ ಪತ್ನಿಗೆ ಆಶ್ಚರ್ಯ. "ಅವರು ಯಾರು ಅಂತ ಗೊತ್ತಿಲ್ಲ ಅಂದಿರಿ ಮತ್ತೆ ಗೊತ್ತಿರೋರಿಗಿಂತ ಹೆಚ್ಚಾಗಿ ಮಾತಾಡಿಸಿದಿರಲ್ಲ?" ಅಂತ ಕೇಳಿದಳು. "ಒಬ್ಬರು ಇನ್ನೊಬ್ಬರನ್ನು ಗೌರವಿಸುವ ಪರಿ ಇದೇ" ಅಂದೆ. ಹಾಗಿಲ್ಲದಿದ್ದರೆ ಅವರು ನಮಸ್ಕಾರ ಮಾಡಿದೊಡನೇ "ಯಾರು ನೀವು, ನಿಮ್ಮನ್ನು ಎಲ್ಲೂ ನೋಡಿದ ಹಾಗಿಲ್ಲವಲ್ಲ" ಅಂದುಬಿಟ್ಟಿದ್ದರೆ ಏನು ಲಕ್ಷಣ ಇರೋದು!

ಇಷ್ಟೆಲ್ಲಾ ಆಯಿತಾ! ಇನ್ನೂ ಒಂದು ಮ್ಯಾಜಿಕಲ್ ಸಂದರ್ಭ ಇದೆ ಓದಿ. ನಾವು ಜನಜಂಗುಳಿಯ ನಡುವೆ ನುಸುಳಿಕೊಂಡು ನಮ್ಮ ವಾಹನ ಇರೋ ಕಡೆ ಹೋಗೋ ದಾರಿಯತ್ತ ಚಲಿಸುತ್ತಿದ್ದೆವು. ಅಲ್ಲಿ ಒಂದು ದೊಡ್ಡ ಸರತಿಯ ಸಾಲು ಇತ್ತು. ಅಲ್ಲಿ ಪ್ರಸಾದ ಕೊಡುತ್ತಿದ್ದರು ಬಿಸಿ ಬಿಸಿ ಉಪ್ಪಿಟ್ಟು ಕೇಸರಿಭಾತು. ಎರಡು ದೊನ್ನೆಗಳಲ್ಲಿ ಹಾಕಿ ಎಲ್ಲರಿಗೂ ಕೊಡುತ್ತಿದ್ದರು. ನಾನು ಸಂಜೆ ಮೂರು ಗಂಟೆಗೆ ಕಾಫಿ ಕುಡಿದಿದ್ದು. ಏನಾದರೂ ಬೇಕು ಅನಿಸುವ ಸಮಯಕ್ಕೆ ಉಪ್ಪಿಟ್ಟು ಕೇಸರಿಭಾತು ಕಾಣಿಸಿತು. ಅದರ ಘಮವೂ ಹೊರಡುತ್ತಿತ್ತು. ಆಗ ಮಳೆ ಬರುವ ಸೂಚನೆಯೂ ಇತ್ತು. ಈಗ ಸರತಿಯ ಸಾಲಿನಲ್ಲಿ ನಿಲ್ಲೋದು ಹೇಗೆ ಎನ್ನುವ ಅನುಮಾನ ಬಂತು. ನನ್ನ ಹೆಂಡತಿ "ಬೇಡ, ಮಳೆ ಬರುವ ಹಾಗಿದೆ. ಮನೆಗೆ ಹೊರಟುಹೋಗೋಣ. ಮಳೆ ಬಂದ್ರೆ ನಿಮಗೆ ಸ್ಕೂಟರು ಓಡಿಸೋದು ಕಷ್ಟ" ಅಂದಳು. ಈಗ ಇವಳ ಮಾತು ಕೇಳೊದು ಸರಿಯಾದದ್ದು ಅಂತ ನಾನು ಹಾಗೇ ಹೊರಟಿದ್ದಾಗ, ಅಲ್ಲಿ ಪ್ರಸಾದ ಹಂಚುತ್ತಿದ್ದವರು ನನ್ನ ಕಡೆ ನೋಡಿ, "ಗುರುಗಳೇ, ಏನು ಹಾಗೇ ಹೊರಟುಬಿಟ್ರಲ್ಲ! ಪ್ರಸಾದ ತಗೊಳಿ" ಅಂದು ನನಗೊಂದು ದೊನ್ನೆ, ನನ್ನ ಹೆಂಡತಿಗೊಂದು ದೊನ್ನೆ ಪ್ರಸಾದ ಕೊಟ್ಟರು. ಮತ್ತೊಮ್ಮೆ ಅಚ್ಚರಿಯ ಗುಂಡಿಗೆ ಬಿದ್ದೆ. ನನ್ನ ಹೃದಯ ತುಂಬಿ ಬಂತು. ನನ್ನ ಬಗ್ಗೆ ನನಗೇ ಹೆಮ್ಮೆ ಅನಿಸುವಂತಹ ಸಂಗತಿಗಳು ನಡೆದವು. ಒಂದು ದೊನ್ನೆ ಪ್ರಸಾದವನ್ನು ಅಲ್ಲಿಯೇ ತಿಂದು ಮತ್ತೊಂದನ್ನು ಮನೆಯಲ್ಲಿದ್ದ ಮಗ ಸೊಸೆ ಮೊಮ್ಮಗನಿಗೆ ತಂದೆವು.

ಆದರೆ ನಾವು ನಿರೀಕ್ಷೆ ಮಾಡಿದಂತೆ ಅರ್ಧ ದಾರಿ ಬರುವ ಹೊತ್ತಿಗೇ ಮಳೆ ಶುರುವಾಯಿತು. ಆದದ್ದಾಗಲಿ ಎಂದು ಹೊರಟೇಬಿಟ್ಟೆವು. ನನಗಂತೂ ಮನಸ್ಸು ತುಂಬಿದ್ದರಿಂದ ಮಳೆಯಲ್ಲಿ ನೆನೆಯುವುದೂ ಸುಖ ತಂದಿತ್ತು. ಮನೆಗೆ ಬರುವ ಹೊತ್ತಿಗೆ ಎರಡು ರೀತಿಯಲ್ಲಿ ನಾನು ತೊಯ್ದಿದ್ದೆ. ಒಂದು ನನಗೆ ಸಭೆಯಲ್ಲಿ ಸಿಕ್ಕ ಗೌರವದಿಂದ ಮನಸ್ಸೆಲ್ಲಾ ಕೃತಜ್ಞತೆಯಿಂದ ತೋಯ್ದಿತ್ತು. ಮತ್ತೆ ಮಳೆಗೆ ಇಡೀ ದೇಹ ತೊಯ್ದಿದ್ದು. ಈ ಮ್ಯಾಜಿಕಲ್ ಅನುಭವ ನನ್ನ ಮನದಲ್ಲಿ ಬಹಳ ದಿವಸಗಳು ತುಂಬಿತ್ತು. ಈಗಲೂ ಅದು ನನ್ನ ಮನದ ಮೂಲೆಯಲ್ಲಿ ಇದ್ದೇ ಇದೆ. ಸಮಯ ಸಂದರ್ಭಕ್ಕೆ ತಕ್ಕ ಹಾಗೆ ಹೊರಗೆ ಬರುತ್ತೆ. ■

# ಮರೆಯಲಾರದ ಮಾಯಾ ಲೋಕ

ಜಿ.ವಿ. ನಿರ್ಮಲ

ಈಗ್ಗೆ ಸುಮಾರು ಮೂವತ್ತೈದು ವರ್ಷಗಳ ಹಿಂದಿನ ಅನುಭವ. ಈಗಿರುವಂತೆ ಹಲವಾರು ಪ್ರವಾಸಿ ಸಂಸ್ಥೆಗಳು ತಲೆ ಎತ್ತಿರಲಿಲ್ಲ. ನಮ್ಮ ಮನೆಯವರಿಗೆಲ್ಲಾ ಪ್ರವಾಸದ ಹುಚ್ಚು ಮಾತ್ರ ಆಗಲೂ ಇತ್ತು. ಒಂದು ಬಾರಿ ದೀಪಾವಳಿಯ ರಜೆಗೆ ಶನಿವಾರ, ಭಾನುವಾರಗಳನ್ನೂ ಸೇರಿಸಿಕೊಂಡು ಕೇರಳದ ಕಡೆ ಪ್ರವಾಸ ಹೋಗುವುದೆಂದು ನಿಶ್ಚಯಿಸಿದೆವು. ನಮ್ಮ ಸ್ನೇಹಿತೆಯೊಬ್ಬರು ಕೇರಳದ ರಸ್ತೆಗಳು ಸಿಲ್ಕ್ ಇದ್ದಂತೆ ನುಣುಪಾಗಿ ಬಹಳ ಸೊಗಸಾಗಿರುವುದೆಂದು ಬಣ್ಣಿಸಿದ್ದರು. ಅದು ನಮಗೆ ಕೇರಳದ ಗುರುವಾಯೂರು, ಮಲ್ಲಂಪುಜ಼ಾ ಡ್ಯಾಮ್ ಮುಂತಾದ ಊರುಗಳಿಗೆ ಹೋಗಲು ಮತ್ತಷ್ಟು ಪ್ರೇರಣೆಯಾಯ್ತು. ಸರಿ ದೀಪಾವಳಿ ಪಾಡ್ಯದಂದು ಮನೆಯಲ್ಲಿ ಪೂಜೆ ಮುಗಿಸಿ, ಪಾಯಸ ಭುಂಜಿಸಿ ಹೊರಟೆವು. ನಮ್ಮಲ್ಲಿದ್ದ ಕಾರು ಇಂದಿನ ಲೆಕ್ಕಾಚಾರದಲ್ಲಿ ಚಿಕ್ಕದೇ. ಆದರೆ ಹಳೆಯ ಆ ಕಾರಿನಲ್ಲಿ ಮುಂದಿನ ಸೀಟ್ ಈಗಿನಂತೆ ಎರಡಲ್ಲದೆ ಮೂರು ಸೀಟಿನದಾಗಿತ್ತು. ಮೂವರು ಮುಂದಾದರೆ, ಹಿಂದೆಯೂ ಮೂವರಂತೆ ಕುಳಿತಿದ್ದೇ ಹೊರಟೇ ಬಿಟ್ಟೆವು.

ನಮ್ಮ ಮನೆಯವರೇ ಒಬ್ಬರು ತಪ್ಪಿದರೆ ಮತ್ತೊಬ್ಬರು ಕಾರನ್ನು ಚಲಾಯಿಸುತ್ತಿದ್ದರು. ಮಾತಿಗಂತೂ ತಡೆಯೇ ಇರಲಿಲ್ಲ. ಜಿಪಿಎಸ್‌ನ ಗಂಧಗಾಳಿ ತಿಳಿಯದ ದಿನಗಳು. ನಮಗೆ ದಾರಿ ತೋರಲು ರಾಜ್ಯವಾರು ಮ್ಯಾಪ್ಗಳಿದ್ದ ಪುಸ್ತಕವನ್ನೇ ಇರಿಸಿಕೊಂಡಿದ್ದೆವು. ಯಾರನ್ನಾದರೂ ದಾರಿಯಲ್ಲಿ ರಸ್ತೆ ಕೇಳಿದರೆ 'ಸೀದಾ ಪೋ, ರೈಟ್‌ಕು ಕಟ್ ಎಡಿಚ್ಚು' (ತಪ್ಪಿದ್ದರೆ ಕ್ಷಮಿಸಿ) ಎಂದು ಅವರು ಹೇಳುವಾಗ ನಮಗೆಲ್ಲಾ ನಗು ಉಕ್ಕಿ ಬರುತ್ತಿತ್ತು. ಜೊತೆಯಲ್ಲಿದ್ದ ನಮ್ಮ ತಾಯಿಗೆ ಹಾಗೂ ನನಗೆ ಸ್ವಲ್ಪ ತಮಿಳು ಓದಲು ಬರುತ್ತಿತ್ತು. ನನ್ನ ಪತಿ ಮತ್ತು ಅತ್ತೆಯವರಿಗೆ ತಮಿಳು ಮಾತಾಡಲು ಬರುತ್ತಿತ್ತು. ಕೇರಳ ಪ್ರವೇಶಿಸಿದಾಗ ಮಲೆಯಾಳಂ ಓದಲಾರದೆ, ಮಾತೂ ಬಾರದೆ ಎಷ್ಟು ಕಷ್ಟ ಪಟ್ಟೆವೆಂದು ಹೇಳಲಾರೆ. ತಮಿಳು ಓದುವ ನಮಗೆ ಮಲೆಯಾಳಂ ಲಿಪಿ ಕೊನೆ ಮೊದಲಿಲ್ಲದ ತೇಂಗೊಳಲು, ಮುಚ್ಚೋರೆಗಳಂತೆಯೇ ಕಂಡಾಗ ಬೆಪ್ಪಾದೆವು. ಅಂತೂ ಇದೇ ರೀತಿಯ ಸಾಹಸದಲ್ಲಿ ಮಲ್ಲಂಪುಜ಼ಾ, ಗುರುವಾಯೂರುಗಳನ್ನು ಸಂದರ್ಶಿಸಿ ತಣಿದೆವು. ನನ್ನ ಪತಿ ಮತ್ತು ದೊಡ್ಡ ಮಗ ಕಾರ್ ಕೇರಳದ ಸಿಲ್ಕ್ ರಸ್ತೆಗಳಲ್ಲಿ ಕಾರು ಓಡಿಸಿ ಖುಷಿಯಾದರು.

ನಾಲ್ಕನೆಯ ದಿನ ವಾಪಸ್ಸು ಬರುವಾಗ ತಿರುವಣ್ಣಾಮಲೈ ದೇವಾಲಯಕ್ಕೆ ಬರುವ ಹೊತ್ತಿಗೆ ಬೆಳಗ್ಗೆಯ ಪೂಜೆಗಳೆಲ್ಲಾ ಮುಗಿದು ಬಾಗಿಲು ಮುಚ್ಚಿದ್ದರು. ಮಧ್ಯಾಹ್ನ ದರ್ಶನ ಮಾಡಿಕೊಂಡೇ ಹೊರಡಲು ಕಾಯುತ್ತಾ ಕುಳಿತೆವು. ದೇವರ ದರ್ಶನವಾಯ್ತು. ಬೆಂಗಳೂರಿನ ಕಡೆಗೆ ಹೊರಟು ಸೇಲ್ಂ ಹತ್ತಿರಕ್ಕೆ ಬರುತ್ತಿದ್ದಂತೆ ಮಳೆ ಪ್ರಾರಂಭವಾಯ್ತು. ಮುಂದೆ ಸಾಗುತ್ತಾ ಮಳೆ ಜೋರಾಗಿ ರಸ್ತೆಯೇ ಕಾಣದಂತೆ ತೆರೆ ಮುಸುಕಿದಂತಾಯ್ತು. ಸರಿ ಹತ್ತಿರದಲ್ಲೇ ಇದ್ದ ಎರ್ಕಾಡಿನಲ್ಲಿಯೇ ತಂಗಿದರಾಯ್ತೆಂದು ನಿಶ್ಚಯಿಸಿದೆವು. ಅದೊಂದು ಸೇಲ್ಂ 'ಜ್ಯೂಯಲ್ ಆಫ್ ದ ಸೌತ್', 'ಪೂರ್ ಮಾನ್ಸ್ ಊಟಿ' ಎನ್ನುವ ಹೆಸರುಗಳಿಂದ ಪರಿಚಿತವಾಗಿರುವ ಗಿರಿಧಾಮ. ಸಮುದ್ರ ಮಟ್ಟದಿಂದ 1515 ಮೀಟರ್ ಎತ್ತರದಲ್ಲಿದೆ ಎನ್ನುವ ಒಂದೇ ಒಂದು ವಿಚಾರ ಮಾತ್ರ ಅಂದು ನಮಗೆ ತಿಳಿದಿರಲಿಲ್ಲ. ದೂರ ಮಾತ್ರ ಮ್ಯಾಪ್‌ನಲ್ಲಿ ಗುರುತಿಸಿಕೊಂಡದ್ದೇ ಅದರತ್ತ ಹೊರಟುಬಿಟ್ಟೆವು. ಮುಂದೆ ಸಾಗುತ್ತಿದ್ದಂತೆ ಆರು ಜನರಿಂದ ತುಂಬಿದ್ದ ಕಾರು ಏರು ರಸ್ತೆಯಲ್ಲಿ ಚಲಿಸಲಾರದೆ ಚಲಿಸಿತು. ನಮ್ಮ

ಕಾರಿನ ಇಂಜಿನ್ ಹಳೆಯದೇ ಆದರೂ ನಮ್ಮ ಕೈಬಿಡಲಿಲ್ಲ. ಹೇಗೋ ನಮ್ಮನ್ನು ಹೊತ್ತು ಸಾಗಿತು. ಏರ್ಕಾಡು ತಲುಪಿದಾಗ ರಾತ್ರಿ ಒಂಭತ್ತು ಗಂಟೆಯಾಗಿತ್ತು. ಒಂದು ಹೋಂಸ್ಟೇಯಲ್ಲಿ ಜಾಗವೂ ದೊರೆಯಿತು. ಹೊಟ್ಟೆಯ ಹಸಿವೂ ದೂರಾಗಿದ್ದಲ್ಲದೆ ಎಲ್ಲರೂ ಒಂದೇ ಸೂರಿನಡಿ ತಂಗಲು ಸಾಧ್ಯವಾದದ್ದೇ ಸಮಾಧಾನಕರ ವಿಷಯ.

ಮರುದಿನ ಏರ್ಕಾಡಿನ 'ಲೇಡೀಸ್ ಸೀಟ್' ಎನ್ನುವ ಒಂದೇ ಒಂದು 'ವ್ಯೂ ಪಾಯಿಂಟ್' ಮಾತ್ರ ನೋಡಿಕೊಂಡು ಬೆಳಕಿರುವಂತೆಯೇ ಬೆಂಗಳೂರು ತಲುಪಿಬಿಡೋಣವೆಂದು ಲಗುಬಗನೆ ಬೇಗೆದ್ದು ಹೊರಟೆವು. ಹೆಚ್ಚು ಪ್ರವಾಸಿಗರೂ ಇಲ್ಲದ 'ವ್ಯೂ ಪಾಯಿಂಟ್' ತಲುಪಿದೆವು. ಕಾರಿನಿಂದ ಇಳಿದು ಸುಂದರ ದೃಶ್ಯಗಳನ್ನು ವೀಕ್ಷಿಸಲು ಹೋದಾಗ ನಮಗೆ ಸಖತ್ ನಿರಾಶೆ ಕಾದಿತ್ತು. ಮಂಜು ಮುಸುಕಿದ್ದ ವಾತಾವರಣದಲ್ಲಿ ಎಡಬಲವಿದ್ದವರೇ ಕಾಣದಂತಿದ್ದರು. ಇನ್ನು ದೂರದ ಕೆಳಗಿನ ದೃಶ್ಯಗಳು ಕಂಡೀತೇ? ಐದಾರು ನಿಮಿಷಗಳು ನಿರಾಶೆಯಲ್ಲೂ ನಕ್ಕು ಪೆಚ್ಚುಮುಖ ಮಾಡಿಕೊಂಡೆವು. ಕಾಣುವುದಿಷ್ಟೇ ಎಂದುಕೊಂಡವರು ಹೊರಡೋಣವೆಂದು ಒಬ್ಬರನ್ನೊಬ್ಬರು ಅವಸರಿಸುತ್ತಿದ್ದಂತೆ ಪಕ್ಕನೆ ತೆರೆ ಎಳೆದಂತೆ ಮಂಜು ಸಂಪೂರ್ಣವಾಗಿ ಕರಗಿ ಹೋಯಿತು. ವೀಕ್ಷಣಾ ಸ್ಥಾನದ ಕೆಳಗೆ ಹತ್ತಿರವೇ ಇದ್ದ ಗಿಡಮರಗಳು, ಒತ್ತಾಗಿ ಹರಡಿಕೊಂಡಿದ್ದ ವನ್ಯಪ್ರದೇಶ, ದೂರದಲ್ಲಿ ಹಸಿರು ತುಂಬಿದ ಕಾಡುಮೇಡುಗಳು, ಸುಂದರ ಗಿರಿಶ್ರೇಣಿಗಳು, ಅತಿ ದೂರದಲ್ಲಿದ್ದರೂ ಸ್ಪಷ್ಟವಾಗಿ ಕಾಣುತ್ತಿದ್ದ ಮನೆಗಳು ಒಂದಕ್ಕಿಂತ ಮತ್ತೊಂದು ಮನೋಹರವಾಗಿ ಗೋಚರಿಸಿದವು. ಎಲ್ಲರೂ ಕೂಗಾಡುತ್ತಾ 'ಅಲ್ಲಿ ನೋಡು ಎಷ್ಟು ಚೆಂದ; ಇಲ್ಲಿ ಕಾಣುತ್ತಿದೆ ಸರಿಯಾಗಿ ಕಣ್ಬಿಟ್ಟು ದೃಷ್ಟಿಸಿ ನೋಡು' ಎಂದು ನಮನಮಗೆ ಕಂಡ ದೃಶ್ಯಗಳನ್ನು ಮತ್ತೊಬ್ಬರಿಗೆ ತೋರಿಸುತ್ತಾ ನಲಿದೆವು. ಕೆಲವು ಫೋಟೋಗಳನ್ನೂ ಕ್ಲಿಕ್ಕಿಸಿದೆವು.

ಅತಿವಿಸ್ಮಯಕರವಾದ ಮತ್ತೊಂದು ವಿಷಯವೆಂದರೆ ಆ ಅಪೂರ್ವವಾದ ಮಾಯಾಲೋಕ ನಮ್ಮೆದುರಿಗೆ ತೆರೆದುಕೊಂಡದ್ದು ಕೇವಲ ಕೆಲವೇ ನಿಮಿಷಗಳಷ್ಟೇ! ಪಕ್ಕನೆ ಮತ್ತೆಲ್ಲಿಂದಲೋ ಬಂದಡರಿದ ಮಂಜು ಎಲ್ಲವನ್ನೂ ತನ್ನ ತೆಕ್ಕೆಯೊಳಗೆ ಸೆಳೆದುಕೊಂಡಿತು. ನಾಟಕದ ದೃಶ್ಯ ಮುಗಿದ ನಂತರ ವೇದಿಕೆಯ ತೆರೆ ಎಳೆದಂತಾಯ್ತು. ಮಾಯಾಲೋಕ ಅದೃಶ್ಯವಾಯ್ತು. ಇದೆಂತಹ ಆಶ್ಚರ್ಯ ಎಂದು ನಿಬ್ಬೆರಗಾಗುವ ಸರದಿ ನಮ್ಮದಾಯ್ತು. ನಮಗಾಗಿಯೇ ಕೆಲವು ನಿಮಿಷಗಳ ಸುಂದರ ದೃಶ್ಯಗಳ ಝಲಕ್ ಅನಾವರಣಗೊಳಿಸಿದ್ದು ಮತ್ಯಾರೂ ಅಲ್ಲ ಲೋಕಪಾಲಕನಾದ ಸೂರ್ಯದೇವ. ಪ್ರೇಮದಿಂದ ನಮ್ಮನ್ನು ಕಂಡು, ನಮಗೆ ಸುಂದರ ದೃಶ್ಯಗಳನ್ನು ಕರುಣಿಸಿದ್ದ ಸ್ವಾಮಿಗೆ

'ಸ್ವಾಮಿ ದೇವನೆ ಲೋಕಪಾಲನೆ ತೇ ನಮೋಸ್ತು ನಮೋಸ್ತುತೇ

ಪ್ರೇಮದಿಂದಲಿ ನೋಡು ನಮ್ಮನು ತೇ ನಮೋಸ್ತು ನಮೋಸ್ತುತೇ' ಎನ್ನುವ ಹಾಡಿನೊಂದಿಗೆ ವಂದಿಸುತ್ತಾ ಬೆಂಗಳೂರಿನ ಹಾದಿ ಹಿಡಿದೆವು.

■

ಮರೆವಿನ ಮಹಾನುಭಾವರು ಮನೆಯಲ್ಲಿ ಎಲ್ಲೋ ಇಟ್ಟ ವಸ್ತುವನ್ನು ಇನ್ನೆಲ್ಲೋ ಹುಡುಕುತ್ತಾ ಕಡೆಗೆ ಅದು ಇದ್ದಲ್ಲೇ ಇದ್ದು ಅವರ ಕಣ್ಣಿಗೆ ಬಿದ್ದು ಅಚ್ಚರಿ ಮೂಡಿಸುವುದೂ ಒಂದು ರೀತಿ ಮ್ಯಾಜಿಕಲ್ ಮೊಮೆಂಟ್ಸ್ ಅಲ್ಲವೇ..

# ಕರಾಟೆ ಇಂದ ಖರಾಟೆ

ಉಲ್ಲಾಸ್ ರಾಯಸಂ

ಬಾಲ್ಯವೇ ಸುಖ ಎನ್ನುವವರು ಅನೇಕರಿದ್ದಾರೆ ವೃದ್ಧರಲ್ಲಿ. ಬಾಲ್ಯದಲ್ಲಿಯೇ ಬಾಲ್ಯ ಸುಖವಲ್ಲ, ಪ್ರಾಯಶಃ ಬಾಲ್ಯ ಹಿಂದಾದ ಮೇಲೆ ಅದು ಸುಖವೆನಿಸುತ್ತದೆ. ಸುಖವಿರುವುದು ಬಾಲ್ಯದಲಲ್ಲ, ಅದರ ನೆನೆಪಿನಲ್ಲಿ.–ಬೀchi.

ಒಲಂಪಿಕ್ಸ್ ಟಿ ವಿ ಯಲ್ಲಿ ನೋಡುತ್ತಾ ನನ್ನ ಕ್ರೀಡಾ ದಿನಗಳು ನೆನಪಾದವು ನಾನು ಓದುತ್ತಿದ್ದ ಶಾಲೆ  ಮನೆಯಿಂದ 500 ಮೀಟರ್ ದೂರ, ಮನೆಗೆ ಊಟಕ್ಕೆ ಬರುತ್ತಿದೆ. ಶಾಲೆಯಲ್ಲಿ ಪಾಠದ ಜೊತೆ, 1 ಪಿರಿಯಡ್ ಸ್ಪೋರ್ಟ್ಸ್ ಮತ್ತು ವಾರಕ್ಕೆ ಒಂದು ದಿನ  ಮಾರಲ್ ಸೈನ್ಸ್‌ಕ್ಲಾಸ್.

ಆ ಶಾಲೆಯಲ್ಲಿ ಸ್ಪೋರ್ಟ್ಸ್ ಅಂದರೆ ಮಾರ್ಚ್ ಪಾಸ್ಟ್ ಮತ್ತು ರನ್ನಿಂಗ್ ಈಗಿನ ಶಾಲೆಯಲ್ಲಿ ಸ್ವಿಮ್ಮಿಂಗ್, ಕರಾಟೆ, ಕ್ರಿಕೆಟ್, ಬಾಸ್ಕೆಟ್ ಬಾಲ್, ಡಾನ್ಸ್ ಇರುತ್ತೆ. ಆದರೆ ಮಾರಲ್ ಸೈನ್ಸ್ ಪಾಠನೇ ಇಲ್ಲ ಎಲ್ಲಾ ಪೋಷಕರು ಮಕ್ಕಳನ್ನು ಅನೇಕ ಚಟುವಟಿಕೆಗಳಿಗೆ ಸೇರಿಸುತ್ತಿದ್ದರು, ನನ್ನನ್ನು ಕರಾಟೆಗೆ ಕಳುಹಿಸಲಾಯಿತು ಆಗ ನಾನು 6ನೇ ತರಗತಿಯಲ್ಲಿದ್ದೆ, 11 ವರ್ಷ ಕರಾಟೆ ಎಂಬ ಪದವು ಎರಡು ಚೀನೀ ಅಕ್ಷರಗಳು ಸಂಯೋಜನೆಯಾಗಿದೆ: ಕರ, ಅಂದರೆ ಖಾಲಿ ಮತ್ತುಟೆ, ಅಂದರೆ ಕೈ; ಹೀಗಾಗಿ, ಕರಾಟೆ ಎಂದರೆ "ಖಾಲಿ ಕೈ."

ಕರಾಟೆ ಒಂದು ಖಾಲಿ ಕೈ ಆತ್ಮರಕ್ಷಣೆ "ನೀವು ಕರಾಟೆಯಲ್ಲಿ ಮೊದಲು ದಾಳಿ ಮಾಡುವುದಿಲ್ಲ." ಕರಾಟೆಯಲ್ಲಿ ಕಟಾ ಮತ್ತು ಕುಮಿಟೆ (ಸ್ಪಾರಿಂಗ್) ಇವೆ. ಸ್ಪಾರಿಂಗ್‌ನಲ್ಲಿ ಎದುರಾಳಿಯ ವಿರುದ್ಧ ರಿಂಗ್ನಲ್ಲಿ ಹೋರಾಡುತ್ತೇವೆ ಕಾಟಾ ಎನ್ನುವುದು ಚಲನೆಗಳ ವಿವರವಾದ ಮಾದರಿಯಾಗಿದೆ.

ಕರಾಟೆ ತರಬೇತಿಯ ಮೊದಲ ಕೆಲವು ತಿಂಗಳುಗಳಲ್ಲಿ, ಕುಮಿಟೆಯಲ್ಲಿ. ನನ್ನ ಎದುರಾಳಿಯು  ಮುಖ ಮತ್ತು ಹೊಟ್ಟೆಯ ಮೇಲೆ ಒದ್ದು, ಗುದ್ದುತ್ತಿದ್ದನು. ಕರಾಟೆಗೆ ಹೋಗೋದಕ್ಕೆ ಹೆದರುತ್ತಿದ್ದೆ. ಕರಾಟೆಗೆ ಹೋದರೆ  ಎದುರಾಳಿ ಹೊಡೆಯುತ್ತಿದ್ದ, ಹೋಗದಿದ್ದರೆ ಮನೆಯಲ್ಲಿ ಅಪ್ಪ ಬೈದು ಹೊಡೆಯುತ್ತಿದ್ದರು ಕರಾಟೆಗೆ ಚಕ್ಕರ್ ಹಾಕಲು ನಿರ್ಧರಿಸಿದೆ, ಅಮ್ಮಾ ನನಗೆ ಹೊಟ್ಟೆ ನೋವು ಇದೆ– ತಾಯಿಯನ್ನು ನಂಬಿಸಬಹುದು, ಅಪ್ಪನಿಗಿಂತ ಅಮ್ಮ ವಾಸಿ, ನನ್ನ ಮಾತು ಕೇಳುವಳು. ವಕೀಲರಿಗೆ ಸುಳ್ಳು ಹೇಳಿ ಪಾರಾಗಲು ಸಾಧ್ಯವಿಲ್ಲ ಹಾಗೆಯೆ ವೈದ್ಯರಿಗೆ ರೋಗದ ಸುಳ್ಳು ಹೇಳಲು ಆಗುವಿದಿಲ್ಲ. ಅಮ್ಮ, ಸರಿ ಇಂದು ಕರಾಟೆಗೆ  ಹೋಗಬೇಡ ಎಂದು ಹೇಳಿದಳು, ಸಧ್ಯ ಪಾರಾಗಿದ್ದೇ. ವಾರದಲ್ಲಿ 3 ದಿನ ಕರಾಟೆ ನಡೆಯುತ್ತಿತ್ತು. ಮುಂದಿನ ಕ್ಲಾಸ್‌ಇದ್ದಾಗ, ನಾನು ಅಮ್ಮಾ 'ತಲೆ ನೋವು' ಅಂದೇ. ನನ್ನ ನೋವು ಕರಾಟೆಎಂದು  ಹೆತ್ತವರಿಬ್ಬರೂ ಗೊತ್ತಾಯಿತು. ಈ ಬಾರಿ ತಂದೆ ನನ್ನೊಂದಿಗೆ ಕರಾಟೆ ಮಾಡಿದರು. ತಂದೆಯ ಹೊಡೆತಕ್ಕೆ ನಾನು ತಡೆಯಲು ಹೋಗಲಿಲ್ಲ.

ಕರಾಟೆಯಲ್ಲಿ ನನಗೆ ತಡೆಯಲು ಅವಕಾಶ ಆದರೂ ಇತ್ತು, ಕುಮಿಟೆಯಲ್ಲಿ ಗರಿಷ್ಠ 2 ರಿಂದ 3 ನಿಮಿಷ ಆದ ಮೇಲೆ ನಿಲ್ಲುತ್ತದೆ, ಕೆಲವೊಮ್ಮೆ ಅಂಪೈರ್ ನಿಲ್ಲಿಸುತ್ತಾರೆ. ಅಪ್ಪ ಹೊಡೆಯೋದು ನಿಲ್ಲ ಬೇಕಾದರೆ ಕೋಲು ಮುರಿಯ ಬೇಕು ಅಥವಾ ನನ್ನ ತಂದೆಗೆ ಸುಸ್ತಾಗ ಬೇಕು. ಮನೆಯಲ್ಲಿ ಅಂಪೈರ್ ನನ್ನತಾಯಿ, 10 ನಿಮಿಷಗಳ ನಂತರವೂ

ನನ್ನತಾಯಿ ನನ್ನ ತಂದೆಯನ್ನು ನಿಲ್ಲಿಸಲು ಹೇಳುತ್ತಿರಲ್ಲಿಲ್ಲ. ಕೆಲವೊಮ್ಮೆ ಅಂಪೈರ್‌ಗೆ ಮಧ್ಯ ಪ್ರವೇಶಿಸಲು ಅವಕಾಶವಿರುತ್ತಿರಲಿಲ್ಲ.

ಕರಾಟೆನೇ ಉತ್ತಮ ಎಂದು ನಿರ್ಧರಿಸಿದೆ. ಇದಾದ ನಂತರ ಕರಾಟೆಕ್ಲಾಸ್ಗೆ ಹೋಗೋದು ತಪ್ಪಿಸಿಕೊಳ್ಳಲೇ ಇಲ್ಲ. ಆಗ ನನ್ನಗುರಿ ನನ್ನಕಡೆಗೆ ಬರುತ್ತಿದ್ದಎಲ್ಲಾ ಹೊಡೆತಗಳು ತಡೆಯುವುದು. ಪೂಂಚ್ಗಳನ್ನು ತಡೆಯುವುದರಲ್ಲಿ ಉತ್ಕೃಷ್ಟನಾಗುತ್ತಿದೆ.

ಎದುರಾಳಿಗಳಲ್ಲಿ ಯಾರಿಗೂ ಹೊಡದು ಪಾಯಿಂಟ್‌ಗಳಿಸಲು ಸಾಧ್ಯವಾಗುತ್ತಿರಲಿಲ್ಲ. ಪ್ರತಿ ಪಂದ್ಯ ಡ್ರಾದಲ್ಲಿ ಕೊನೆಗೊಳ್ಳುತ್ತಿತ್ತು. ನಾನು ಅಟ್ಯಾಕ್‌ನ ಬ್ಲಾಕ್ ಮಾಡಲು ನಿಪುಣನಾಗಿದ್ದೆ. ನನ್ನ ಮೇಷ್ಟ್ರು ರವಿ ನಾಯಕ್ ದಾಳಿ ಮಾಡಲು ಎದುರಾಳಿಯ ನ್ಯೂನತೆಗಳು ನೋಡಿ, ನಂತರ ದಾಳಿ ಮಾಡಲು ಹೇಳಿದರು. ಇದು ಮ್ಯಾಜಿಕಲ್ ಕ್ಷಣವಾಗಿತ್ತು.

ಕರಾಟೆಯಿಂದ ದೈಹಿಕವಾಗಿ ಬಲಶಾಲಿಯಾದೆ, ಏಕಾಗ್ರತೆ ಉತ್ತಮವಾಯಿತು, ಅಧ್ಯಯನದಲ್ಲಿಯೂ ಲಾಭವಾಯಿತು. ಕುಮಿಟೆ (ಸ್ಪೇರಿಂಗ್) ನಲ್ಲಿ ಪರಿಣಿತನಾಗಿದ್ದೆ, 17 ವರ್ಷದವನಿದ್ದಾಗ ಬ್ಲಾಕ್ ಬೆಲ್ಟ್ ಪಡೆದೆ. ಅದೇ ವರ್ಷದಲ್ಲಿ ರಾಜ್ಯ ಕರಾಟೆ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾದೆ. ಅಲ್ಲಿಯು ಸ್ಪಾರ್ ಮಾಡಬೇಕಾಗಿತ್ತು ವಿಜೇತರು ತಮ್ಮ ಎದುರಾಳಿಯನ್ನು ಸೋಲಿಸಿ ಮುಂದೆ ಸಾಗುತ್ತಾರೆ, ಆರನೇ ಸುತ್ತಿನಲ್ಲಿ ನಾನು ಮಾಜಿ ಚಾಂಪಿಯನ್‌ನನ್ನು ಸೋಲಿಸಿ ಏಳನೇ ಸುತ್ತಿಗೆ ತೆರಳಿದೆ. ನನ್ನತಂದೆ ಪಂದ್ಯ ನೋಡಲು ಬಂದಿದ್ದರು ಪ್ರತಿ ಸುತ್ತಿನ ನಂತರ ಕರಾಟೆಇತರ ಸ್ಪರ್ಧಿಗಳು, ನನ್ನ ತಂದೆ ಮತ್ತು ಮಾಸ್ಟರ್ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುತ್ತಿದ್ದರು.

ಏಳನೇ ಸುತ್ತಿನಲ್ಲಿ ಬಲಗೈ ಮಧ್ಯದ ಬೆರಳಿಗೆ ಜೋರಾಗಿ ಪೆಟ್ಟು ಬಿತ್ತು, ವೈದ್ಯರಾದ ನನ್ನತಂದೆ ಪರೀಕ್ಷಿಸಿ ಇದು ಹೇರ್ ಲೈನ್ ಫ್ಯಾಕ್ಟ್ರ್ ಅಂದರು ಆಟದಿಂದ ನಿರ್ಗಮಿಸಲು ನಿರ್ಧರಿಸಿದೆ. ಕ್ಲಬ್ನಕರಾಟೆ ಇತರ ಸ್ಪರ್ಧಿಗಳು "ನಮ್ಮ ದೃಷ್ಟಿಯಲ್ಲಿ ನೀನು ಈಗಾಗಲೇ ನಮ್ಮ ಚಾಂಪಿಯನ್" ಎಂದು ಹೇಳಿ ತಬ್ಬಿಕೊಂಡರು ನನ್ನ ಗುರುಗಳು ಮತ್ತು ನನ್ನ ತಂದೆ ನನಗೆ ಹೇಳಿದರು, ಎದುರಿಸು ಎಂದೂ ಓಡಿ ಹೋಗಬೇಡಾ ಭಾಗವಹಿಸು. ಬಲಗೈಯನ್ನು ಹಿಂದೆ ಇಟ್ಟುಕೊಂಡು ಹೋರಾಡುವಂತೆ ಅಪ್ಪ ಸಲಹೆ ನೀಡಿದರು. ನನ್ನ ಎದುರಾಳಿಯು ಹೆಚ್ಚು ಎತ್ತರ ಮತ್ತು ದೈಹಿಕಕವಾಗಿ ಬಲಶಾಲಿಯಾಗಿ ಕಂಡ. ನನ್ನ ಶಕ್ತಿ ನನಗೆ ತಿಳಿದಿತ್ತು, ಹಾಗು ನಾನು ತೆಳ್ಳಗಿದ್ದೆ ಮತ್ತು ನನ್ನ ಕಾಲುಗಳು ಹಗುರವಾಗಿತ್ತು.

ಬಲಗೈ ಗಾಯಗೊಂಡಿದ್ದರಿಂದ, ಬಲಗೈಯನ್ನು ಹಿಂದೆ ಇಟ್ಟುಕೊಂಡು, ಎದುರಾಳಿಯನ್ನು ಅವನು ಅರಿತುಕೊಳ್ಳುವ ಮೊದಲೇ ಜಿಗಿದು ಅವನ ಮುಖದ ಮೇಲೆ ಎಡಗೈಯಿಂದ ಗುದುತ್ತಿದ್ದೆ. ಕರಾಟೆ ಇತಿಹಾಸದಲ್ಲಿ ಮೊದಲ ಬಾರಿಗೆ ಒಬ್ಬ ಸ್ಪರ್ಧಿ ಒಂದೇ ಕೈಯಲ್ಲಿ ಹೋರಾಡಿ ಮಾಜಿ ಚಾಂಪಿಯನ್ನನ್ನು ಸೋಲಿಸಿ ಚಾಂಪಿಯನ್ ಆಗಿದ್ದೆ. ಪಂದ್ಯದ ನಂತರ ಎದುರಾಳಿ ಬಂದು ನನ್ನನ್ನು ತಬ್ಬಿಕೊಂಡು ನಿನ್ನಲ್ಲಿ ನಿಜವಾದ ಸ್ಪೋರ್ಟ್ಸ್ಮನ್‌ಶಿಪ್ ಇದೆ ಎಂದು ಹೇಳಿದಾಗ ಆ ಅನುಭವ ನನ್ನ ಮ್ಯಾಜಿಕಲ್ ಕ್ಷಣ.

ಈಗ ಹಾಸಿಗೆಯಲ್ಲಿ ಬರೀ ಖರಾಟೆ, ಕರಾಟೆ ಒಂದು ಸಿಹಿ ನೆನಪು.

■

# ಅಣ್ಣಾವ್ರ ಕಟ್ ಔಟ್ ನೋಡ್ತಾ ಕಳೆದು ಹೋದ್ವಿ !

ರಾಂಕಿ ಬೆಳ್ಳೂರ್

1985. ಮೂರನೇ ಕ್ಲಾಸ್ ಪರೀಕ್ಷೆ ಬರೆದಾಗಿತ್ತು. ಬೇಸಿಗೆ ರಜಾ ಶುರು ಆಗಿತ್ತು. ನಮ್ಮ ಚಿಕ್ಕಮ್ಮ [ತಾಯಿ ತಂಗಿ] ಇದ್ದದ್ದು ಪೂನಾದಲ್ಲಿ. ಅವರ ಕುಟುಂಬದವರು– ಅಂದರೆ ನಮ್ಮ ಚಿಕ್ಕಪ್ಪ, ಚಿಕ್ಕಮ್ಮ, ಮಗಳು, ಮಗ ಎಲ್ಲರೂ ಬೆಂಗಳೂರಿಗೆ ಬಂದಿದ್ರು ರಜಕ್ಕೆ. ದೊಡ್ಡ ಕುಟುಂಬ... ನಮ್ಮ ಚಿಕ್ಕಪ್ಪನ ಅಣ್ಣ, ಮೂವರು ತಮ್ಮಂದ್ರು, ಅವರ ಹೆಂಡತಿ, ಮಕ್ಕಳು...ಒಟ್ಟು ಇಪ್ಪತ್ತು. ಅವರೆಲ್ಲರೂ ಮೈಸೂರಿಗೆ ಟೂರ್ ಹಾಕಿದ್ರು. ಜೊತೆಗೆ ನಾನೂ ಹೋಗೋದು ಅಂತ ತೀರ್ಮಾನ ಮಾಡಿದ್ಲು ನನ್ನ ಚಿಕ್ಕಮ್ಮ. ನನ್ನ ಬಗ್ಗೆ ಕಾಳಜಿ, ಪ್ರೀತಿ ನನ್ನ ತಾಯಿಗಿಂತ ನನ್ನ ಚಿಕ್ಕಮ್ಮಂದೇ ಎರಡ್ ಕೈ ಜಾಸ್ತಿ...ಈಗ್ಲೂ ಸಹ.

ಮೈಸೂರಿಗೆ ಹೋಗಿ ಇಳಿದ್ವು. ದಾಸಪ್ರಕಾಶದಲ್ಲಿ ಊಟ. ರಮಣೀಯ ಸ್ಥಳಗಳ ನೋಟ. ಒಂದು ಮೆಟಡೋರ್ ಬುಕ್ ಮಾಡಿ ಅದರಲ್ಲಿ ನಮ್ಮ ಮೈಸೂರು ಪ್ರದಕ್ಷಿಣೆ. ಮೆಟಡೋರ್ ಹಿಂಭಾಗ ಒಂದು ಚೌಕವಾದ ಜಗದಲ್ಲಿ ನಾವು ಮಕ್ಕಳೆಲ್ಲ ಕೂತಿದ್ವಿ. ಅಂಬಾ ವಿಲಾಸ. ಲಲಿತ್ ಮಹಲ್. ಅರಮನೆ ಮೇಲೆ ಅರಮನೆ ನೋಡಿದ್ದೇ ನೋಡಿದ್ದು.

ಮಧ್ಯಾಹ್ನ ಊಟಕ್ಕೆ ಮುನ್ನ ಜಗನ್ ಮೋಹನ್ ಪ್ಯಾಲೇಸ್ ನೋಡಿ ಸಂಜೆ ಕೆ.ಆರ್.ಎಸ್ ಅಂತ ಪ್ಲಾನ್ ಹಾಕಿದ್ದು ಕಿವಿಗೆ ಬಿತ್ತು. ಬಿಸಿಲು ಝಳಕ್ಕೆ ಕಣ್ಣು ಎಳೀತಿತ್ತು. ನಾನು ಜಗನ್ ಮೋಹನಕ್ಕೆ ಬರಲ್ಲ...ಮೆಟಡೋರಲ್ಲೆ ಉಳೀತೀನಿ ಅಂದೆ. ನಮ್ಮ ಚಿಕ್ಕಮ್ಮನ ಮಗ "ನಾನೂ ಇವನ ಜೊತೇನೆ ಇರ್ತಿನಿ"ಅಂದ. ಸರಿ..ಹಿಂಬಾಗದಲ್ಲೇ ಮಲಗಿ ಬಿಟ್ವಿ. ಸ್ವಲ್ಪ ಹೊತ್ತಿನ ಮೇಲೆ ಕಣ್ ಬಿಟ್ ನೋಡಿದ್ರೆ, ಮೆಟಡೋರ್ ಯಾವುದೋ ಮೆಕಾನಿಕ್ ಶಾಪ್ ಹತ್ತಿರ ನಿಂತಿದೆ. ಡ್ರೈವರ್ ಕಾಣಿಸ್ತಿಲ್ಲ. ಎಡಕ್ಕೆ  ಕಿಟಕಿಯಿಂದ ಬಗ್ಗಿ ಮೇಲ್ ನೋಡ್ತೀನಿ...! ನಮ್ ಅಣ್ಣಾವ್ರ ಕಟ್ ಔಟ್ ! 'ಅದೇ ಕಣ್ಣು' ಚಿತ್ರದ್ದು. ಅಪ್ಪ – ಮಗನ ನೂರಡಿ ಕಟ್ ಔಟ್, ಸ್ಟಾರ್ !...

"ಲೋ, ಏನ್ ಮಾಡ್ತಿದೀವಿ ನಾವ್ ಮೆಟಡೋರ್ ಒಳಗೆ... ಬಾ ಕಥೆ ಹೇಳ್ತಿನಿ" ಅಂತ ಹೊರಕ್ಕೆ ಇಳಿದಿದ್ದೆ...ನನ್ನ ತಮ್ಮನಿಗೆ

ಡಾ. ರಾಜ್ ಸ್ಟಾರ್, ಪೋಸ್ಟರ್, ಕಟ್ ಔಟ್ ಎಲ್ಲ ತೋರಿಸಿ..."ರಾಜಣ್ಣ ಡಬಲ್ ಆಕ್ಟಿಂಗ್..ಇವನೇ ಅಪ್ಪ...ಹೆಂಡತಿಗೆ ಕಪಾಳಕ್ಕೆ ಹೊಡೆದಾಗ ಅವಳು ಸತ್ತು ಹೋಗ್ತಾಳೆ, ಮಗ ಇರಲ್ಲ... ಮಗ ಬರೋಕ್ಕೆ ಮುಂಚೇನೆ ಅವಳನ್ನು ಹೂತಾಗ್ ಬಿಡ್ತಾರೆ... ಮಗ ಕಾರ್ ರೇಸಿಂಗ್ ಚಾಂಪಿಯನ್..." ಹೀಗೆ ಕಥೆ ಮುಂದುವರೆಸಿಕೊಂಡು ಇಂಟರ್ವಲ್ ತನಕ ಬಂದೆ... "ಮಗನಿಗೆ ಕಣ್ಣು ಹೋಯಿತು.. ಕಮಲಾ ಢಮಾರ್, ಆಮೇಲೆ ರಾಮಯ್ಯ ಢಮಾರ್, ಪೊಲೀಸ್ ಢಮಾರ್.." ಅಂತ ಹೇಳ್ತಾ ಹಿಂದೆ ತಿರುಗಿ ಡ್ರೈವರ್ ಬಂದು ಕೂತಿದಾನ ಅಂತ ಮೆಟಡೋರ್ ಕಡೆ ತಿರುಗ್ತೀನಿ, ಗಾಡಿ ಢಮಾರ್! ಗಾಡಿ ಹೊರಟು ಹೋಗಿದೆ !!

ಹೋದ್ರೆ ಹೋಯ್ತು... ಸಿನಿಮಾ ಕಥೆ ಮುಗಿಸಿಬಿಟ್ಟು ನೋಡೋಣ ಬಿಡು ಅಂತ ಮುಂದುವರೆಸಿದೆ... "ಮಗ ರಾಜಕುಮಾರ್ ಕಾಂಟಾಕ್ಟ್ ಲೆನ್ಸ್ ಹಾಕ್ಕೊಂಡು ಅಪ್ಪ ರಾಜಕುಮಾರ್ ಮುಂದೆ ಬಂದು ನಿಂತಾಗ..." ನನ್ನ ತಮ್ಮ ಅಳೋಕ್ಕೆ ಶುರು ಮಾಡಿಬಿಟ್ಟ... "ಲೋ ಈಗಲೇ ಕಥೇಲಿ ಥ್ರಿಲ್ ಇರೋದು" ಅಳಬೇಡವೋ ಅಂತ ಹೇಳಿದ್ರೂ ಉ

ಹೂಂ ...ಅಳು ಹೆಚ್ಚಿದೆ.. "ಸರಿ ಹೋಗ್ಲಿ ಆಮೇಲ್ ಹೇಳ್ತಿನಿ ಬಾ" ಅಂತ ಓಡಕ್ಕೆ ಶುರು ಮಾಡಿದ್ವಿ.

ಸುಮ್ನೆ ಓಡ್ತಾ ಇರೋದು ನೋಡಿ ಒಬ್ಬ ಆಂಟಿ "ಯಾಕ್ರೋ...ಅವ್ನು ಅಳ್ತಿದಾನೆ, ಇಬ್ಬರು ಓಡ್ತಿದೀರಲ್ರೋ...ಎಲ್ಲಿಗೆ? ಅಪ್ಪ ಅಮ್ಮ ಎಲ್ಲಿ?" ಅಂತ ಕೇಳಿದ್ರು... ಆಗ ನಾನು "ಆಂಟಿ, ತಪ್ಪಿಸಿಕೊಂಡ್ ಬಿಟ್ಟಿದೀವಿ...ಅಲ್ಲಿ ಅಣ್ಣಾವ್ರ ಕಟ್ ಔಟ್ ನೋಡ್ತಿದ್ವಿ ರಂಜಿತ್ ಟಾಕೀಸ್ ಹತ್ರ ..ಗಾಡಿ ಹೊರಟು ಹೋಗಿದೆ" ಅಂದಾಗ ಅವರು ಕೇಳಿದ್ರು "ಮೈಸೂರಿನವರೇನೋ ನೀವು?". "ಇಲ್ಲ, ಬೆಂಗಳೂರು" ಅಂದೆ.

"ಎಲ್ಲಿ ಇಳ್ಕೊಂಡಿದೀರೋ?"




"ಅರುಣ್ ಲಾಡ್ಜ್ !"

"ಗೊತ್ತು ಬನ್ನಿ..." ಅಂತ ಕರೆಕೊಂಡು ಹೋದ್ರು ನಮ್ಮಿಬ್ಬರನ್ನು.

ಲಾಡ್ಜ್ ತಲುಪಿದ್ದಾಯಿತು. ಸ್ಪೈರಲ್ ಮೆಟ್ಲು ಹತ್ತುಕೊಂಡು ಮ್ಯಾನೇಜರ್ ರೂಮ್ ಒಳಗೆ ಬಂದು ಕೂತ್ವಿ.

ಆ ಆಂಟಿ ಮ್ಯಾನೇಜರ್ ಹತ್ರ ಏನೋ ಮಾತಾಡುದ್ರು.... ನನ್ನ ತಮ್ಮ ಅಳೋದು ನೋಡಿ ಮ್ಯಾನೇಜರ್ ಬಾಗಿಲ ಬಳಿ ಇರೋ ಹುಡುಗನಿಗೆ "ಎರಡು ಟೊರಿನೊ" ಅಂತ ಹೇಳಿದ್ರು. ಎರಡು ನಿಮಿಷ ಆದಮೇಲೆ ಟೇಬಲ್ ಮೇಲೆ ಒಂದು ಥಮ್ಸಪ್ ಒಂದು ಟೊರಿನೊ ತಂದಿಟ್ಟ. ಆ ಮ್ಯಾನೇಜರ್ ನನ್ನ ಕಡೆ ಟೊರಿನೊ ತಳ್ಳಿದ್ರು...ನನ್ನ ತಮ್ಮನಿಗೆ ಥಮ್ಸಪ್..

ಅರ್ಧ ಕುಡಿಯೋ ಹೊತ್ತಿಗೆ ಫಿಲ್ಮಿ ಸ್ಟೈಲ್ ಅಲ್ಲಿ ಸ್ಪೈರಲ್ ಮೆಟ್ಟಿಲು ಹತ್ಕೊಂಡು ಮೊದಲು ನಮ್ಮ ಚಿಕ್ಕಪ್ಪ...ಆಮೇಲೆ ಅವರ ತಮ್ಮಂದ್ರು... ಒಬ್ಬೊಬ್ಬರೇ ಬಂದು "ಎಲ್ ಹೊರಟು ಹೋಗಿದ್ರೋ?" ಅಂತ ಏರು ಧ್ವನಿಯಲ್ಲಿ ಗದರಕ್ಕೆ ಶುರು ಮಾಡಿದರು. ನಮ್ಮ ಚಿಕ್ಕಮ್ಮ ಬಂದು ಅಳುತಿದ್ದ ಅವಳ ಮಗನ್ನ, ಥಮ್ಸಪ್ ಕುಡೀತಿದ್ದ ನನ್ನನ್ನ ಸಮಾಧಾನ ಮಾಡಿದ್ಲು. ಟೊರಿನೊ–ಥಮ್ಸಪ್ ಕುಡೀತಿದ್ದ ನಮ್ಮನ್ನ ಬಾಟಲಿ ನಿಂದ ಬೇರ್ಪಡಿಸಿ, ಮ್ಯಾನೇಜರ್ ಗೆ ಥ್ಯಾಂಕ್ಸ್ ಹೇಳಿ ದೊಡ್ಡೋರೆಲ್ಲ, ರೂಮ್ ಕಡೆ ಕರ್ಕೊಂಡು ಹೊರಟ್ರು...ನನಗೆ ಅಯ್ಯೋ ಥಮ್ಸಪ್ ಅರ್ಧ ಉಳಿದಿತ್ತಲ್ಲ ಅನ್ನೋ ಕೊರಗು...

ಸಂಜೆ ಕೆ.ಆರ್.ಎಸ್. ವೀಕ್ಷಣೆ. ಆದರೆ ನನಗೂ ನನ್ನ ತಮ್ಮನಿಗೂ ಬರೀ ಕಾಲುಗಳೇ ಕಾಣಿಸ್ತಿತ್ತು. ಏಕೆಂದರೆ ಮಧ್ಯಾಹ್ನದ ಫಿಯಾಸ್ಕೊ ಆದ ಮೇಲೆ ನಮ್ಮಿಬ್ಬರಿಗೂ ಹಿಂದೆ–ಮುಂದೆ, ಎಡ–ಬಲ ಎರಡೆರಡು ಬೌನ್ಸರ್ಸ್... ಪ್ರಾಯಶಃ ಸಿನಿತಾರೆಯರಿಗಿಂತ ಮುನ್ನ ಬೌನ್ಸರ್ಸ್ ಹೊಂದಿದ್ದು ಸಿನಿ ಅಭಿಮಾನಿಗಳಾದ ನಾವೇ ಏನೋ !!

■

# ಮನುಜನಿಗೆ ಮಗು ತಂದೆ !

ಲೀಲಾ ಮಿರ್ಲೆ

ನನಗೆ ಮೂರು ಜನ ಮಕ್ಕಳು. ಅವರೆಲ್ಲರೂ ಈಗ ಹಿರಿಯ ನಾಗರೀಕರು. ಅಂದ ಮೇಲೆ ನಾನು ಸೂಪರ್ ಸೀನಿಯರ್ ಸಿಟಿಜನ್. ಸದ್ಯಕ್ಕೆ ಯಾವ ಮನೆ ಜವಾಬ್ದಾರಿಯೂ ನನಗಿಲ್ಲ. ಮಾಡಲು ಏನೂ ಕೆಲಸವಿಲ್ಲದಿರುವುದರಿಂದ ಕಾಲ ಕಳೆಯುವುದೇ ಒಂದು ಮುಖ್ಯ ಗುರಿಯಾಗಿಬಿಡುತ್ತೆ. ಈ ಉದ್ದೇಶದಿಂದ ನಾನು ಹತ್ತಿರದ ಶಾಲೆಯೊಂದರಲ್ಲಿ ವಾಲಂಟರಿ ಟೀಚರ್ ಕೆಲಸಕ್ಕೆ ವಿನಂತಿಸಿಕೊಂಡೆ. ಇದೊಂದು ವಿಶಿಷ್ಟ ಶಾಲೆ. ಎಲ್ಲ ಶಾಲೆಗಳಂತಲ್ಲ. ಈ ಶಾಲೆಯಲ್ಲಿ ಸಾಮಾನ್ಯ ಮಕ್ಕಳಂತೆ ಓದು ಬರಹ ಕಲಿಯಲು ತೊಂದರೆ ಇರುವ ಬುದ್ಧಿಮಾಂದ್ಯ ಮಕ್ಕಳಿಗೆ, ಇದಕ್ಕಾಗಿಯೇ ವಿಶೇಷ ತರಬೇತಿ ಪಡೆದ ಟೀಚರುಗಳು ಪಾಠ ಕಲಿಸುತ್ತಾರೆ. ನನಗೆ ಇದರಲ್ಲಿ ಪರಿಶ್ರಮ ಇಲ್ಲದಿರುವುದರಿಂದ ನನ್ನನ್ನು ಕಲಿಸಿರುವ ಪಾಠಗಳನ್ನು ಪುನಃ ರಿವೈಸ್ ಮಾಡಿಸುವ ಕೆಲಸಕ್ಕೆ ನೇಮಿಸಿಕೊಂಡರು.

ನಾನು ಕೆಲಸ ಪ್ರಾರಂಭಿಸಿದೆ. ಇಂಗ್ಲಿಷ್ ಪಾಠವನ್ನು ಪುನಃ ರಿವೈಸ್ ಮಾಡಿಸಲು ಸಹಾಯವಾಗುವಂತೆ, ಇಂಗ್ಲೀಷ್ ಟೆಕ್ಸ್ಟ್ ಮತ್ತು ಕ್ಲಾಸ್ ನೋಟ್ಸ್ ಅನ್ನು ನನಗೆ ಕ್ಲಾಸ್ ಟೀಚರ್ ಒದಗಿಸಿದರು. ನಾನು ಮಕ್ಕಳಿಗೆ ನಿಧಾನವಾಗಿ ಪ್ರಶ್ನೆಗಳನ್ನು ಕೇಳಿ, ಉತ್ತರ ಬರದ ಮಕ್ಕಳಿಗೆ ಎರಡು ಮೂರು ಸಲ ಉತ್ತರವನ್ನು ರಿಪೀಟ್ ಮಾಡಿಸಿ ನಂತರ ಬರೆಯಲು ಹೇಳಿದೆ.

ನನ್ನ ಕ್ಲಾಸಿನ ಹುಡುಗರಲ್ಲಿ ರವಿ ತೀರ ಸೋಮಾರಿ. ಸದಾ ಎಲ್ಲೋ ಗಮನ. ಪಾಪ ಮಾತಿನಲ್ಲಿ ತೊದಲು ಬೇರೆ. ಎಷ್ಟು ಹೇಳಿದರೂ ಗಮನವೇ ಇರದು. ನನಗೂ ತಾಳ್ಮೆ ಕಡಿಮೆಯಾಗುತ್ತಾ ಬಂತು. ರವಿಗೆ ಬದಲು ಬೇರಾವುದಾದರೂ ಹುಡುಗನನ್ನು ಕಳಿಸಿ ಎಂದು ಕ್ಲಾಸ್ ಟೀಚರನ್ನು ಕೇಳೋಣವೇ ಎಂಬ ಆಲೋಚನೆ ಮನದಲ್ಲಿ ಹಾದುಹೋಯಿತು. ಇವತ್ತೊಂದು ದಿನ ಪ್ರಯತ್ನಿಸೋಣ ಎಂದು ನಿಶ್ಚಯಿಸಿ. ಮೊದಲನೆಯ ಪಾಠದ ಒಂದು ಪ್ರಶ್ನೆಯನ್ನು ಓದಿ, ಅದರ ಉತ್ತರವನ್ನು ನಾನೇ ಎರಡು ಮೂರು ಸಲ ಹೇಳಿ, ನಂತರ ಮಕ್ಕಳ ಕೈಲಿ ಹೇಳಿಸಿದೆ. ನಂತರ ಅದೇ ಪ್ರಶ್ನೆಯನ್ನು ಬೋರ್ಡ್ ಮೇಲೆ ಬರೆದು, ಉತ್ತರ ಬರೆಯಲು ಮಕ್ಕಳಿಗೆ ಹೇಳಿದೆ.

"ವೆನ್ ಡಿಡ್ ಕೊಂಡಿ ಬಾಬ ಬಿಕಮ್ ಬ್ಲೈಂಡ್?" ಎಂಬುದೇ ಪ್ರಶ್ನೆ. ನಾಲ್ಕು ಹುಡುಗರಲ್ಲಿ ಮೂವರು, "ಕೊಂಡಿಬಾಬ ಬಿಕೇಮ್ ಬ್ಲೈಂಡ್ ವೆನ್ ಹಿ ವಾಸ್ ಸಿಕ್ಸ್ ಇಯರ್ಸ್ ಓಲ್ಡ್" ಎಂದು ಸರಿಯಾದ ಉತ್ತರವನ್ನು ಬರೆದರು. ರವಿಯ ಪುಸ್ತಕ ನೋಡಿದರೆ ಅವನು, "ಕೊಂಡಿಬಾಬ ಬಿಕೇಮ್ ವಿಷುಯಲಿ ಇಂಪೇರ್ಡ್ ವೆನ್ ಹಿ ವಾಸ್ ಸಿಕ್ಸ್ ಇಯರ್ಸ್ ಓಲ್ಡ್" ಎಂದು ತಪ್ಪು ತಪ್ಪು ಸ್ಪೆಲ್ಲಿಂಗ್ ಬಳಸಿ ಬರೆದಿದ್ದ.

"ವಿಷುಯಲಿ ಇಂಪೇರ್ಡ್ ಅಂತ ದೊಡ್ಡ ಪದ ಬಳಸಿ ಸ್ಪೆಲ್ಲಿಂಗ್ ಎಲ್ಲಾ ತಪ್ಪು ಬರೆಯುವ ಬದಲು ಬ್ಲೈಂಡ್ ಅಂತ ಸರಳವಾದ ಪದ ಬಳಸಬಾರದೇ ರವಿ?" ಅಂತ ನಾನು ರವಿಯನ್ನು ಪ್ರಶ್ನಿಸಿದೆ.

"ಮ್ಯಾಡಮ್, ಕಣ್ಣುಕಾಣದವರನ್ನು ಬ್ಲೈಂಡ್ ಎಂದರೆ ಅದು ತುಂಬಾ ಒರಟಾಗಿ ಕೇಳಿಸುತ್ತೆ. ಅದರ ಬದಲು ವಿಷುಯಲು ಇಂಪೇರ್ಡ್ ಅಂತ ಅಂದರೆ ಸ್ವಲ್ಪ ನಯವಾಗಿರುತ್ತೆ

ಅಲ್ಲವೇ " ಅಂತ ತೊದಲುತ್ತಲೇ ಹೇಳಿದ.

ನನಗೆ ಮಾತೇ ಹೊರಡದಂತಾಯಿತು. ಈ ಪುಟ್ಟ ಬಾಲಕನಲ್ಲಿ ಎಂತಹ ಸಂವೇದನೆ! ನಿಜಕ್ಕೂ ಕೊಂಡಿಬಾಬ ವಿಷುಯಲಿ ಇಂಪೇರ್ಡ್ ಆಗಿದ್ದಂತೆ  ನಾನು ಸಂವೇದನೆಯಲ್ಲಿ ಇಂಪೇರ್ಡ್ ಆಗಿದ್ದೀನೇನೋ ಅಂತ ಅನ್ನಿಸಿತು. ಮಗುವಿನಿಂದ ಕಲಿತ ಪಾಠವನ್ನು ಮೆಲಕುಹಾಕುತ್ತಾ ಮನೆಗೆ ಹೊರಟೆ.

■




ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



ಹಾಗೇ ಇರಲಿ ಕಣಯ್ಯಾ ! ನಮ್ಮ ಆಫೀಸರು - ಏನು ಕೇಳಿದರೂ ನಿನಗೇನು ಕೋಡು ಎಂದೇ ಮಾತನಾಡಿಸುತ್ತಾರೆ.

# ಚಾಕು ಹಾಕೋದಾದ್ರೆ ಬಲಭಾಗಕ್ಕೆ ಹಾಕು!

ಅಣಕು ರಾಮನಾಥ್

ಮಾಂಸ ಪರ್ವತವನ್ನು ನೋಡಿದ್ದೀರೇನು ನೀವು?

ಇಲ್ಲವಾದರೆ ಒಮ್ಮೆಯಾದರೂ ಗೊರಿಲ್ಲಾ ರಾಮನ ಫೋಟೋವನ್ನಾದರೂ ನೋಡಬೇಕು ನೀವು. ಅವನು ಡಿವಿಜಿ ರಸ್ತೆಯಲ್ಲಿ ನಡೆಯುತ್ತಿದ್ದರೆ ಎದುರಿನಿಂದ ಬರುವ ಕಾರುಗಳು ತಮ್ಮ ರಿಯರ್ ವ್ಯೂ ಮಿರರ್‌ಗಳನ್ನು ಮಡಚಿಕೊಳ್ಳದಿದ್ದರೆ ಅವನ ಭುಜಕ್ಕೆ ತಾಕಿ ನುಚ್ಚುನೂರಾಗುತ್ತಿದ್ದವು. ಆ ವಿಸ್ತಾರದ ರಾಮನ ಕಂಠವು ರಾಮನ ಕಂಠದಂತಿರದೆ ಗಾಯಗೊಂಡ ರಾವಣನ ಕಂಠದಂತಿತ್ತು.

ಇಂತಹ ರಾಮನ ಬಳಿ ನಾನು ಅನಿವಾರ್ಯವಾಗಿ ಸಾಲ ಮಾಡಬೇಕಾಯಿತು. ವಾರಕ್ಕೆ ಹತ್ತೇ ಪರ್ಸೆಂಟ್ ಬಡ್ಡಿ.

ಸಾಲವಾಯಿತು. ನಂತರ ಆದಾಯ ಸಾಲದಾಯಿತು. ವಾರದ ಬಡ್ಡಿಗೆ ಮತ್ತಷ್ಟು ಸಾಲ ಮಾಡುವ ಪರಿಸ್ಥಿತಿ ಮೂಡಿತು. ವಿಷಯ ನನ್ನ ಹಿತೈಷಿಯೂ, ಮುಂದಿನ ದಿನಗಳಲ್ಲಿ ಮಾರ್ಗದರ್ಶಕರೂ ಆದ ಭೀಮಣ್ಣನ ಕಿವಿ ತಲುಪಿತು.

"ವಾರಕ್ಕೆ ಹತ್ತು ಪರ್ಸೆಂಟಾ? ಕೊಡಲ್ಲ ಅನ್ನಿ. ಏನಾಗುತ್ತೋ ನೋಡೋಣ" ಎಂದರು ಕೊತ್ವಾಲ ರಾಮಚಂದ್ರನನ್ನೇ ಎದುರು ಹಾಕಿಕೊಂಡಿದ್ದ ಭೀಮಣ್ಣ.

"ಇಲ್ಲ ಸಾರ್. ಅವನು ಮೊದಲೇ ರೌಡಿ. ಹೊಡೀತಾನೆ ಸಾರ್" ಪ್ರತಿ ಪದವೂ ಸ್ವರಪ್ರಸ್ತಾರದಿಂದ ಕೂಡಿತ್ತು, ದೇಹವು ವೈಬ್ರೇಷನ್ ಮೋಡ್ ತಲುಪಿತ್ತು.

"ಹಾಗೇನಾದ್ರೂ ಆದರೆ ಮೆಡಿಕಲ್ ಖರ್ಚು ನನ್ನದಿರಲಿ. ಹೋಗಿ ಹೇಳಿ ಬನ್ನಿ" ಎಂದರು.

ನನಗೂ ಪ್ರತಿ ವಾರ ಹೊಸ ಸಾಲ ಮಾಡುವುದು ಅಸಾಧ್ಯವಾಯಿತು. ಅದೊಂದು ವಾರ ಎಲ್ಲಿಯೂ ಸಾಲ ಹುಟ್ಟದೆ "ಪ್ರಯೋಗ ಮಾಡಿಯೇಬಿಡುವೆ. ಬೇಕಾದ್ದಾಗಲಿ" ಎಂದು ತೀರ್ಮಾನಿಸಿದೆ. ಮನಸ್ಸು ಹೂಂ ಎಂದಿತು. ಶರೀರವು ಸುನಾಮಿಗೆ ಸಿಲುಕಿದ ತರಗೆಲೆ! ದೇಹದಿಂದ ಹಲವಾರು ಬೆವರಿನ ಝರಿಗಳು ಹೊರಟು, ಕಲಾವಿದನೇನಾದರೂ ನನ್ನನ್ನು ಕಂಡಿದ್ದಿದ್ದರೆ ನನ್ನ ಚಿತ್ರವನ್ನು ಬಿಡಿಸಿ 'ಮೊಬೈಲ್ ಸಾಲ್ಟ್ ವಾಟರ್ ಫೌಂಟೆನ್' ಎಂಬ ಶೀರ್ಷಿಕೆ ನೀಡುತ್ತಿದ್ದನೋ ಏನೋ!

ಅಂತೂ ಹೋದೆ. "ದುಡ್ಡಿಲ್ಲ. ಹದಿನೈದು ದಿನ ಹಣ ಕೊಡಲು ಆಗುವುದಿಲ್ಲ. ನಂತರ ಅಸಲನ್ನು ಮಾತ್ರ ಕೊಡುತ್ತೇನೆ". ಇಷ್ಟನ್ನು ಮಾತ್ರ ಹೇಳಬೇಕಿತ್ತು. ಆದರೆ... ಇದೇನು! ನನ್ನ ಬಾಯಲ್ಲಿ ನಾಲಿಗೆಯೇ ಇಲ್ಲವೆ? ಬಾಯಿಯ ಕೆಳಭಾಗಕ್ಕೆ ಅಂಟಿದ ರಸನೆಯು ಮೇಲೆಯೇ ಏಳುತ್ತಿಲ್ಲವಲ್ಲ! ಆಹಾ! ಭಯಕ್ಕಿಂತ ಗೋಂದು ಉಂಟೇ ಜಗದಲ್ಲಿ?

"ಏನೋ ಸಮಚಾರ? ಎಲ್ಲಿ ಬಡ್ಡಿ?" ಅಬ್ಬರಿಸಿದ ರಾಮ. ಕಬ್ಬಿಣದ ತುಂಡಿನಂತಹ ಕೈ ಮುಂಚಾಚಿತು.

ನನ್ನಲ್ಲೇನಾದರೂ ಇದ್ದರಲ್ಲವೆ ಕೊಡಲು!

"ಅದೂ... ಅದೂ..."

"ತೆಗೆಯೋ ದುಡ್ಡೂ! ಇಲ್ದೇಯಿದ್ರೆ ನೋಡಿಲ್ಲೀ..."

ನೋಡಿದೆ. ಆಗಷ್ಟೇ ಸಾಣೆಯ ಚಕ್ರಕ್ಕೆ ಒಡ್ಡಲ್ಪಟ್ಟು ಹರಿತತೆಯನ್ನು ಪಡೆದ ಚಾಕು! ಅದರ ಅಂಗುಲ ಅಂಗುಲವೂ ನನ್ನ ರಕ್ತಕ್ಕಾಗಿ ತಹತಹಿಸುತ್ತಿರುವಂತೆ ಅನಿಸಿತು.

"ರಾಮಣ್ಣ, ನೀನು ಚಾಕು ಹಾಕುವುದಾದರೆ ನನ್ನ ಹೊಟ್ಟೆಯ ಬಲಭಾಗಕ್ಕೆ ಹಾಕಿಬಿಡು" ನಡುಗುತ್ತಲೇ ಕೊಂಚ ನಗೆಯನ್ನೂ ತುಳುಕಿಸಿ ಒದರಿಬಿಟ್ಟೆ. ಇಂದಿಗೂ ನಾನು ಹಾಗೆ ಹೇಳಲು ಅದು ಹೇಗೆ ಸಾಧ್ಯವಾಯಿತೆಂಬುದೇ ವಿಸ್ಮಯ.

"ಎಡಗಡೆಗೇ ಯಾಕೆ?"

ಇಷ್ಟು ಹೊತ್ತಿಗೆ ಕೊಂಚ ಧೈರ್ಯ ಬಂದಿತ್ತು. "ನನಗೆ ಅಪೆಂಡಿಸೈಟಿಸ್ ಇದೆ. ಆಪರೇಷನ್ ಆಗಬೇಕು. ನೀನು ಬಲಭಾಗಕ್ಕೆ ಚಾಕು ಹಾಕಿದರೆ ಆಪರೇಷನ್ ಖರ್ಚು ಉಳಿಯುತ್ತದೆ. ಹೊಲಿಗೆಯ ಖರ್ಚಷ್ಟೇ ಬೀಳುತ್ತದೆ. ಉಳಿದ ಆಪರೇಷನ್ ಹಣದಲ್ಲಿ ನಿನ್ನ ಸಾಲತೀರಿಸಿಬಿಡುತ್ತೇನೆ" ಎಂದೆ. ಎದೆ ನಗಾರಿಯಂತೆ ಹೊಡೆದುಕೊಳ್ಳುತ್ತಿದ್ದರೂ ಮುಖದಲ್ಲಿ ಅದರ ಛಾಪು ಕಾಣದಂತೆ ಮುಗುಳ್ನಕ್ಕೆ.

ಮಾಂಸಪರ್ವತದ ಮುಖದಲ್ಲಿ ಅಚ್ಚರಿಯ ಮಹಾಪೂರ!

"ಲೇಯ್! ನಾನು ಚಾಕು ಹಿಡಿದು ನಿಂತರೆ ದಾದಾಗಳೂ ಹೆದರ್ತಾರೆ. ನೀನೇನೋ ಹೀಗಂತೀಯಾ?" ವಿಸ್ಮಯದಲ್ಲಿಯೂ ಅವನದು ಮೇಘನಾದ.

"ದುಡ್ಡಿಲ್ಲ ರಾಮಣ್ಣ. ಬ್ಯಾಂಕಿಂದ ಸಾಲ ಪಡೆಯಕ್ಕೆ ಹದಿನೈದು ದಿನ ಬೇಕು" ಎಂದೆ.

"ಹದಿನೈದು ದಿನಾನಾ? ಆಗಲ್ಲ. ಎರಡು ದಿನದಲ್ಲಿ ಕೊಡದೇಹೋದರೆ ಚಾಕು ಹಾಕೋದೇ" ಎಂದನವ.

"ಚಾಕು ಹಾಕೋದೇ ಆದರೆ ಈಗಲೇ ಹಾಕಿಬಿಡು ರಾಮಣ್ಣ. ಡೆತ್ ಸರ್ಟಿಫಿಕೇಟಲ್ಲಿ ಯಾವ ಡೇಟ್ ಇದ್ದರೇನು! ನಡೆದೇಬಿಡಲಿ ನಿನ್ನ ರೌದ್ರ" ಎಂದೆ. ಅಂತಹ ಅಸಹಾಯ ಸ್ಥಿತಿಯನ್ನು ತಲುಪಿದ್ದೆನಲ್ಲ.

"ಸರಿ! ಹದಿನೈದು ದಿನ; ಹದಿನಾರನೆಯ ದಿನ ಚಾಕು ಹಾಕೋದೇ."

"ಬ್ಯಾಂಕಿನ ವ್ಯವಹಾರ. ಒಂದೆರಡು ದಿನ ಹೆಚ್ಚು ಕಡಿಮೆ ಆಗಬಹುದು. ಚಾಕು ಹಾಕೋದಾದರೆ ಈಗಲೇ..." ಪ್ರವರ ಮುಂದುವರಿಸಿದೆ.

"ತಿಕ್ಕಲ ಕಣೋ ನೀನು! ನನ್ನ ಮುಂದೆ ನಿಂತು ಚಾಕು ಹಾಕು ಅಂದೋವ್ನು ಇವತ್ತಿನವರೆಗೂ ಒಬ್ಬನೂ ಇರಲಿಲ್ಲ. ಹೋಗು, ಆದಾಗ ತಂದುಕೊಡು" ಎಂದನವ.

ಭೀಮಣ್ಣನಿಗೆ ಇವಿಷ್ಟನ್ನೂ ಒದರಿದೆ.

"ಹೇಳೋವ್ನು ಹೊಡೆಯಲ್ಲಾರೀ, ಹೊಡೆಯೋವ್ನು ಹೇಳಲ್ಲ. ಸರಿ. ಇದು ನಿಮಗೊಂದು ಪಾಠವಾಗಲಿ. ಧೈರ್ಯಗೆಡಬೇಡಿ, ಹೆದರಿ ಸುಳ್ಳು ಹೇಳಬೇಡಿ."

ಅಂದಿನಿಂದ ಇಂದಿನವರೆಗೆ ಅದೆಷ್ಟೋ ಗಂಭೀರ ಪರಿಸ್ಥಿತಿಗಳು ಎದುರಾಗಿವೆ. ಗುಂಡಿಗೆಯು ಒಳಗೊಮ್ಮೆ ಪತರಗುಟ್ಟಿದರೂ, ನನ್ನ ತಾತನವರು ಹೇಳುತ್ತಿದ್ದ 'ಧೈರ್ಯಂ ಸರ್ವತ್ರ ಸಾಧನಂ' ಅನ್ನೂ, ಈ ಪ್ರಸಂಗವನ್ನೂ ನೆನೆದು ಮುಂದಡಿ ಇಟ್ಟಿದ್ದೇನೆ.

ಆದರೆ "ಹಾಕೋದಾದ್ರೆ ಬಲಭಾಗಕ್ಕೆ ಚಾಕು ಹಾಕು ರಾಮಣ್ಣ" ಎಂದ ಕ್ಷಣವೇ ನನ್ನ ಜೀವನದ ಮೋಸ್ಟ್ ಮ್ಯಾಜಿಕಲ್ ಮೊಮೆಂಟ್!

■

# ಹೃದಯ ತುಂಬಿದ ಹಾರೈಕೆ

ಜಿ. ವಿ. ಅರುಣ

ಜನವರಿ 26, 2001; ಬೆಳಿಗ್ಗೆ 8.45ರ ಸಮಯ. ಎಲ್ಲ ಶಾಲೆಗಳಲ್ಲೂ ವಿದ್ಯಾರ್ಥಿಗಳು, ಅಧ್ಯಾಪಕರು ರಾಷ್ಟ್ರ ಧ್ವಜಾರೋಹಣಕ್ಕೆ ಸೇರಿದ್ದ ಸಮಯ. ಗುಜರಾತಿನ ಕಚ್ಛ್‌ಜಿಲ್ಲೆಯ ಅಂಜಾರ್‌ನ ಶಾಲೆಯಲ್ಲಿ ಎಲ್ಲರೂ ಧ್ವಜಾರೋಹಣಕ್ಕೆ ನೆರೆದಿದ್ದರು. ಇದ್ದಕ್ಕಿದ್ದಂತೆ ಭೂಮಿ ನಡುಗಿತು, ಸುಮಾರು ಒಂದುವರೆ ನಿಮಿಷಗಳ ಕಾಲ! ಶಾಲೆಯ ಆವರಣದ ನೆಲ ಕುಸಿಯಿತು. ಸುಮಾರು 180 ಮಕ್ಕಳು, 20 ಅಧ್ಯಾಪಕರು ನೆಲದೊಳಗೆ ಆಳದಲ್ಲಿ ಹುದುಗಿ ಮರೆಯಾಗಿ ಹೋದರು.

ಅದಕ್ಕಿಂತ ಹೆಚ್ಚಾಗಿ ಕುಡಿಯುವ ನೀರಿಗೆ ತೊಂದರೆಯಾಯಿತು. ಅನೇಕ ಪ್ರದೇಶಗಳಲ್ಲಿ ಬಾವಿಯಲ್ಲಿ ಮೇಲಿದ್ದ ನೀರು ಪಾತಾಳಕ್ಕೆ ಹೋಗಿತ್ತು. ಅಲ್ಲಿ ಕುಡಿಯುವ ನೀರಿಗೆ ಟ್ಯಾಂಕರ್‌ಗಳನ್ನು ಕಳುಹಿಸುವ ಏರ್ಪಾಟಾಯಿತು. ಅನೇಕ ಹಳ್ಳಿಗಳಲ್ಲಿ ಹೆಂಗಸರು ಐದಾರು ಕಿಲೋ ಮೀಟರ್‌ಗಳು ನಡೆದು ಹೋಗಿ ಬಿಂದಿಗೆಗಳಲ್ಲಿ ಪ್ರತಿದಿನ ನೀರನ್ನು ಹೊತ್ತುತರುವಂತಾಗಿತ್ತು. ಅದಕ್ಕಿಂತ ದೊಡ್ಡ ಸಮಸ್ಯೆ ದೇಶದ ರಕ್ಷಣೆಗೆ ಸಂಬಂಧಿಸಿದ್ದು. ಪಾಕಿಸ್ತಾನದೊಡನೆ ಇರುವ ನಮ್ಮ ಗಡಿಯನ್ನು ಕಾಯುವ ಸೈನಿಕರಿಗೆ ಸುಲಭವಾಗಿ ಸಿಕ್ಕುತ್ತಿದ್ದ ನೀರು ಈಗ ಇಲ್ಲವಾಗಿತ್ತು. ಸಾಲು ಸಾಲಾಗಿ ಹೋಗುತ್ತಿದ್ದ ನೀರಿನ ಟ್ಯಾಂಕರ್‌ಗಳಿಂದ ನಮ್ಮ ಸೈನಿಕರಿರುವ ಸ್ಥಳವು ನುಸುಳುಕೋರರಿಗೆ ತಿಳಿಯುವ ಸಂಭವವಿತ್ತು. ಹಾಗಾಗಿ ಗುಜರಾತ್ ಸರ್ಕಾರವು ನರ್ಮದಾ ಕಣಿವೆ ಯೋಜನೆಯ ಅಡಿಯಲ್ಲಿ ಕಚ್ಛ್ ದೇಶಕ್ಕೆ ತುರ್ತಾಗಿ ನೀರನ್ನು ಒದಗಿಸುವ ಕಾರ್ಯಕ್ಕೆ ಆದ್ಯತೆಯನ್ನು ಕೊಟ್ಟಿತು. ಇದಕ್ಕೆ ಪೂರಕವಾಗಿ ಭೂಕಂಪ ಪೀಡಿತ ಪ್ರದೇಶಗಳ ಅಭಿವೃದ್ಧಿಗೆ ಏಷ್ಯಾ ಡೆವಲಪ್ಮೆಂಟ್‌ಬ್ಯಾಂಕ್ಹಾಗೂ ವಿಶ್ವ ಬ್ಯಾಂಕ್‌ಗಳು ಹಣದ ನೆರವನ್ನು ಮಂಜೂರು ಮಾಡಿದ್ದವು. ಜೊತೆಗೆ ಅದು ಸರಿಯಾಗಿ ಕಾರ್ಯಗತವಾಗುವುದರ ಮೇಲ್ವಿಚಾರಣೆಯ ಕೆಲಸವನ್ನು ನಾನು ಕೆಲಸ ಮಾಡುತ್ತಿದ್ದ ಸಂಸ್ಥೆಗೆ ವಹಿಸಿತು.

ಆ ಮೇಲ್ವಿಚಾರಣೆಗೆ ನಾನು ಎಂಬತ್ತಕ್ಕೂ ಹೆಚ್ಚು ಇಂಜಿನಿಯರ್‌ಗಳ ದೊಡ್ಡ ತಂಡದೊಡನೆ ನಿಯೋಜಿತನಾದೆ. ಗುಜರಾತಿ, ಕಚ್ಛಿ ಮತ್ತು ಹಿಂದಿ ಭಾಷೆಗಳು ಬರುತ್ತಿದ್ದ ಒಬ್ಬ ವಾಹನ ಚಾಲಕನನ್ನು ನಾನು ಸಹಾಯಕ್ಕೆ ನೇಮಿಸಿಕೊಂಡೆ. ಒಮ್ಮೆ ಕೆಲಸವು ತಡವಾಗುತ್ತಿದ್ದ ಪ್ರದೇಶದ ಪರಿವೀಕ್ಷಣೆಗೆ ಹೋಗಬೇಕಾಯಿತು. ದಾರಿಯಲ್ಲಿ ಲಗಾನ್ ಹಿಂದಿ ಸಿನಿಮಾವನ್ನು ಚಿತ್ರೀಕರಿಸಿದ್ದ ಪ್ರದೇಶವೂ ಸಿಕ್ಕಿತು. ಆಚಿತ್ರವನ್ನು ವೀಕ್ಷಿಸಿರುವವರಿಗೆ ಮರಳುಗಾಡಿನಂಥ ಆ ಪ್ರದೇಶದ ನೆನಪಾಗಬಹುದು. ಅಲ್ಲಿಂದ ಸಮಸ್ಯೆಯಾಗಿದ್ದ ಪ್ರದೇಶಕ್ಕೆ ಹೋಗಿ, ಸೂಕ್ತ ಪರಿಹಾರಗಳನ್ನು ನಿರ್ಧರಿಸಿ ಹಿಂದಿರುಗಲು ಸಿದ್ಧನಾದೆ. ಆವೇಳೆಗೆ ಮೋಟರ್ ಸೈಕಲ್‌ನಲ್ಲಿ ಇಬ್ಬರು ಬಂದು, ನನ್ನ ಕಡೆನೋಡುತ್ತಾ ನಿಂತುಕೊಂಡರು. ನನ್ನ ವಾಹನ ಚಾಲಕನು ಅವರೊಡನೆ ಮಾತನಾಡಿ, 'ಅವರ ಊರಿನ ಮುಖ್ಯಸ್ಥನು ನೀರಿನ ವಿಚಾರವಾಗಿ ಮಾತನಾಡಲು ನನಗೆ ಬರಲು ಕೇಳಿಕೊಂಡಿದ್ದಾನೆ' ಎಂದುತಿಳಿಸಿದ.

ಆ ಹಳ್ಳಿಯ ಮುಖ್ಯಸ್ಥನನ್ನು ಭೇಟಿಯಾದಾಗ ಅವನ ಮುಖದಲ್ಲಿ ಮಾಗಿದ ವಯಸ್ಸು ಕಾಣುತ್ತಿತ್ತು. ತಲೆಗೆ ದಪ್ಪನೆಯ ಬಿಳಿಯ ಪೇಟವನ್ನುಸುತ್ತಿದ್ದ; ಬಿಳಿಯ ಮೀಸೆಯೂ ಭರ್ಜರಿಯಾಗಿತ್ತು; ಬಿಳಿಯ ಧೋತಿಯನ್ನು ಉಟ್ಟಿದ್ದ. ಆತನನ್ನು ನೋಡಿದೊಡನೆ ಗೌರವವನ್ನು ಸೂಚಿಸುವ ಮನಸ್ಸಾಗುತ್ತಿತ್ತು. ಆತ ನನಗೆ ಕುಳಿತುಕೊಳ್ಳಲು ಒಂದು

ಕುರ್ಚಿಯನ್ನು ಹಾಕಿಸಿದ. ನಾನು ಆತನ ಕೈಹಿಡಿದು ಜಿಗುಲಿಯ ಮೇಲೆ ಕೂರಿಸಿ ಆತನ ಪಕ್ಕದಲ್ಲಿ ಕುಳಿತು ಕೊಂಡೆ. ಆ ಹಿರಿಯ ಕಚ್ಛಿಭಾಷೆಯಲ್ಲಿ ಮಾತನ್ನುಪ್ರಾರಂಭಿಸಿದ. ನನ್ನ ಚಾಲಕ ನಮ್ಮ ಮಾತುಕತೆಗೆ ದುಭಾಷಿಯಾಗಿ ಕಾರ್ಯನಿರ್ವಹಿಸಿದ.

ಮುಖ್ಯಸ್ಥನ ಮಾತಿನ ಸಾರಾಂಶವಿಷ್ಟು: ಹಳ್ಳಿಯ ಹತ್ತಿರದಲ್ಲಿದ್ದ ಬಾವಿಯಲ್ಲಿ ನೀರು ಮಾಯವಾಗಿತ್ತು. ಹಳ್ಳಿಯ ಹೆಂಗಸರು ಸುಮಾರು ಒಂದು ಗಂಟೆಗಳ ದೂರದಲ್ಲಿದ್ದ ಬಾವಿಯಿಂದ ನೀರನ್ನು ಹೊತ್ತು ತರುತ್ತಿದ್ದರು. ನೆರಳಿಲ್ಲದ ಮರುಭೂಮಿಯಂಥ ಮಣ್ಣಿನ ಮೇಲೆ ಬಿಸಿಲು, ಚಳಿ, ಮಳೆ, ಗಾಳಿಗಳನ್ನು ಲೆಕ್ಕಿಸದೆ ಪ್ರತಿದಿನ ತಲೆಯ ಮೇಲೆ ಒಂದು, ಕಂಕುಳಲ್ಲಿ ಮತ್ತೊಂದು ಬಿಂದಿಗೆಗಳಲ್ಲಿ ನೀರನ್ನು ತರುತ್ತಿದ್ದರು. ಇದು ಆ ಹಳ್ಳಿಯ ಹೆಂಗಸರ ನಿತ್ಯದ ಗೋಳಾದರೆ ಯುವಕರ ಗೋಳು ಮತ್ತೊಂದು ರೀತಿಯದಾಗಿತ್ತು. ಆ ಹಳ್ಳಿಯಲ್ಲಿ ಮದುವೆಗೆ ಸಿದ್ದರಾಗಿದ್ದ ನಾಲ್ಕೈದು ಯುವಕರಿಗೆ ಸುತ್ತಮುತ್ತಲ ಹಳ್ಳಿಗಳಿಂದ ಯಾರೂ ಹೆಣ್ಣನ್ನು ಕೊಡಲು ಸಿದ್ಧವಿರಲಿಲ್ಲ. ಈ ಊರಿಗೆ ಮದುವೆಯಗಿ ಹೋಗುವ ಹೆಣ್ಣು ಪ್ರತಿದಿನ ನೀರನ್ನು ತರಲು ಹೋಗುವುದು ಯಾವ ತಂದೆ ತಾಯಿಯರಿಗೆ ಸಹ್ಯವಾಗುತ್ತದೆ? ಆ ಯುವಕರು ಹಳ್ಳಿಯನ್ನು ಬಿಟ್ಟು ದೊಡ್ಡ ಪಟ್ಟಣದಲ್ಲಿ ಜೀವನವನ್ನು ಕಂಡುಕೊಳ್ಳಲು ಆಲೋಚಿಸುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿ ತನ್ನ ಕುಲಬಂಧುಗಳನ್ನು ಒಟ್ಟಿಗೆ ಉಳಿಸಿಕೊಳ್ಳುವ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಆ ಮುಖ್ಯಸ್ಥ ಸಿಕ್ಕಿ ಹಾಕಿಕೊಂಡಿದ್ದ.

ಸರ್ಕಾರವು ಈ ಹಳ್ಳಿಗೆ ನೀರನ್ನು ಕೊಡುವ ಬಗ್ಗೆ ಅವರಿಗೆ ಯಾವುದೇ ಸುಳಿವು ಸಿಕ್ಕಿರಲಿಲ್ಲ. ಈಚೆಗೆ ಎಡಿಬಿಯಿಂದ ಹಳ್ಳಿಗಳಿಗೆ ನೀರು ಸರಬರಾಜಿಗೆ ಹೆಚ್ಚಿನ ಅನುದಾನ ಬಂದಿದ್ದು, ಹೊಸದಾಗಿ ಊರುಗಳನ್ನು ಸೇರಿಸಿ, ಪಟ್ಟಿಯನ್ನು ವಿಸ್ತರಿಸುತ್ತಿದ್ದ ವಿಚಾರನನ್ನ ಅರಿವಿಗೆ ಬಂದಿತ್ತು. ಆತನ ಹಳ್ಳಿಗೆ ನೀರು ಸರಬರಾಜು ಮಾಡುವಂತೆ ಒಂದು ಮನವಿ ಪತ್ರವನ್ನು ಕೊಡಲು ಆ ಮುಖ್ಯಸ್ಥನಿಗೆ ಹೇಳಿದೆ. ನನ್ನಿಂದಲೇ ಒಕ್ಕಣೆಯನ್ನು ಕೇಳಿ, ಆತ ಪತ್ರವನ್ನು ಬರೆಸಿ, ಸಹಿ ಮಾಡಿ ನನಗೆ ಕೊಟ್ಟ. ಅದನ್ನು ಸೂಕ್ತ ವ್ಯಕ್ತಿಗಳಿಗೆ ನಾನು ತಲುಪಿಸಿದೆ. ಆ ಹಳ್ಳಿಯ ಹೆಸರು ಪಟ್ಟಿಯಲ್ಲಿ ಸೇರ್ಪಡೆಯಾಯಿತು. ನಿರಂತರ, ಶ್ರಮದಾಯಕ ಕೆಲಸದ ಅನಂತರ ಕಚ್ಛ್ ದೇಶಕ್ಕೆ ನರ್ಮದೆಯ ನೀರು ಕೊಳವೆಗಳಲ್ಲಿ ಹರಿಯಿತು. ನನ್ನ ಕೆಲಸ ಮುಗಿಯುತ್ತಾ ಬಂದಿತ್ತು. ಕೊನೆಯ ಪರಿಶೀಲನೆಗೆ ನಾನು ಅನೇಕ ಪ್ರದೇಶಗಳಿಗೆ ಭೇಟಿ ನೀಡಿದಾಗ ಆ ಹಳ್ಳಿಗೂ ಹೋದೆ. ಅಂದು ಅಲ್ಲಿನ ಇಬ್ಬರು ಯುವಕರ ಮದುವೆಯ ನಿಶ್ಚಿತಾರ್ಥ. ಊರಿನವರೆಲ್ಲ ನನ್ನನ್ನು ಸಂತೋಷದಿಂದ ಮುಖ್ಯಸ್ಥನ ಮನೆಗೆ ಕರೆದುಕೊಂಡು ಹೋದರು. ನನ್ನನ್ನು ನೋಡಿದ ತಕ್ಷಣ ಆ ಆಜಾನುಬಾಹು ಮುದುಕ ಬಿಗಿಯಾಗಿ ಅಪ್ಪಿಕೊಂಡ. ನಮಸ್ಕರಿಸುವಂತೆ ತನ್ನ ಕೈಗಳಿಂದ ನನ್ನ ಕೈಗಳನ್ನು ಹಿಡಿದ. ಆತನ ಕಣ್ಣುಗಳಿಂದ ಆನಂದ ಭಾಷ್ಪ ಧಾರಾಕಾರವಾಗಿ ಹರಿಯುತ್ತಿತ್ತು. ಆತನ ಕಂಠದಿಂದ ತಡೆದು ತಡೆದು ಹಾರೈಕೆಯ ಮಾತುಗಳು ಬರುತ್ತಿದ್ದವು.

“ನೀನು ಮಾಡಿರುವ ಈ ಕೆಲಸದಿಂದ ಛಿದ್ರಛಿದ್ರವಾಗುತ್ತಿದ್ದ ನಮ್ಮ ಕುಲವನ್ನು ಕಾಪಾಡಿ ಬಿಟ್ಟೆ! ನನ್ನ ಮೇಲೆ ಬರಬಹುದಾಗಿದ್ದ ಆರೋಪದಿಂದ ನನ್ನನ್ನು ಪಾರು ಮಾಡಿದೆ. ನೀನು ನನಗಿಂತ ಚಿಕ್ಕವನು, ನಿನಗೆ ನಮಸ್ಕಾರ ಮಾಡುವುದು ಶ್ರೇಯಸ್ಕರವಲ್ಲ. ಆದರೆ ನಿನ್ನ ಹಿಂದಿನ ಏಳು ತಲೆಮಾರಿನವರಿಗೆ, ನಿನ್ನ ಹಾಗೂ ನಿನ್ನ ಮುಂದಿನ ಏಳು ತಲೆಮಾರಿನವರಿಗೆ ಪುನರ್ಜನ್ಮ ಇರುವುದಿಲ್ಲ! ಇದು ಈ ಊರಿನ, ನಮ್ಮೆಲ್ಲರ ಹೃದಯದ ಆಳದಿಂದ ಬಂದಿರುವ ಶುಭ ಹಾರೈಕೆ” ಎಂದು ಹೇಳಿದ.

ಒಂದು ಸಾರ್ಥಕ ಕೆಲಸ ಮಾಡಿದ ಸಂತೃಪ್ತಭಾವದೊಂದಿಗೆ ನಾನು ಹಿಂದಿರುಗಿದೆ.

■

# ಜಗತ್ಪ್ರಸಿದ್ಧ ಜೋಗ್ ಜಲಪಾತ ಮೌನ ತಳೆಯಿತೇಕೆ?

**ಗಾಯತ್ರಿ ಮೂರ್ತಿ**

ಇದೇನು ಭೋರ್ಗರೆಯುತ್ತಾ ಕಿಲೋಮೀಟರ್ ದೂರದಿಂದಲೇ ಅಸ್ತಿತ್ವ ಸಾರುವ ಜಲಪಾತ ಮೌನವಾಗುವುದೆಂದರೇನರ್ಥ? ಇವರಿಗೇನು ಭ್ರಮೆಯೇ ಎಂದು ನೀವು ಯೋಚಿಸುತ್ತಿದ್ದೀರೆಂದು ಭಾವಿಸುತ್ತೇನೆ. ಆದರೆ, ಇದು ನಾ ಕಂಡ ಸತ್ಯ. ನಾನು ಸತ್ಯವನ್ನೇ ಹೇಳುತ್ತಿದ್ದೇನೆ, ನಾನು ಹೇಳುತ್ತಿರುವುದೆಲ್ಲಾ, ಅಲ್ಲ ಬರೆಯುತ್ತಿರುವುದೆಲ್ಲಾ ಸತ್ಯ.

900 ಅಡಿ ಎತ್ತರದಿಂದ ನೀರು ಭೋರ್ಗರೆಯುತ್ತಾ ಧುಮ್ಮಿಕ್ಕುವ ಜೋಗ ಜಲಪಾತದ ಸಿರಿಯನ್ನು ಕಂಡು ಮೈ ರೋಮಾಂಚನಗೊಳ್ಳುವುದಂತೂ ನಿಜ. 'ಸಾಯೋದ್ರೊಳಗೆ ಒಮ್ಮೆ ನೋಡು ಜೋಗಾದ ಗುಂಡಿ' ಎಂದು ನೀವು ಜೋಗ ಜಲಪಾತದ ಬಗ್ಗೆ ಇರುವ ಜಾನಪದ ಗೀತೆ ಸಹ ಕೇಳಿರಬಹುದು. ನಾನು ಸಹ ಒಂದೆರಡು ಬಾರಿ.ಜೋಗ ಜಲಪಾತದ ಸಂಭ್ರಮದ ಸಿರಿಯನ್ನು ಕಂಡು ಸಂತಸಗೊಂಡವಳು. ಆದರೆ ಕಳೆದ ಸಾರಿ ನೋಡಿದ ಜೋಗದ ಅನುಭವವೇ ರೋಮಾಂಚಕ! ನಂಬಲಸಾಧ್ಯ!

ಜಲಪಾತದ ಭೋರ್ಗರೆತದ ಧ್ವನಿಯಲ್ಲಿ ಪಕ್ಕ ನಿಂತವರು ಮಾತಾಡಿದರೂ ಕೇಳುವುದಿಲ್ಲ. ಅಲ್ಲಿ ಮಾತು ಮಾನವಾಗುತ್ತದೆ. ಮೌನವೇ ಆಭರಣವೆಂಬಂತೆ, ಮೂಕರಾಗಿ ಆ ಅದ್ಭುತ ಜಲರಾಶೀಯ ಸೊಬಗನ್ನು ಆಸ್ವಾದಿಸುವುದರಲ್ಲಿ ಸಮಯ ಕಳೆದದ್ದೇ ತಿಳಿಯುವುದಿಲ್ಲ.

ಇರಲಿ, ಆ ವರ್ಷ ಬಿದ್ದ ಭರ್ಜರಿ ಮಳೆಯಿಂದಾಗಿ ಜೋಗ ಜಲಪಾಲದ ರಾಜಾ, ರೋರ್, ರಾಕೆಟ್, ರಾಣಿ ಎಂದು ಕರೆಯಲಾಗುವ ನಾಲ್ಕು ವಿಭಾಗಗಳು ಒಟ್ಟಿಗೆ ಮೇಳೈಸಿ, ಐಕ್ಯತೆಯ ಮಂತ್ರ ಸಾರುತ್ತಿವೆಯೇನೋ ಎಂಬಂತೆ ಅಪರಿಮಿತ ಜಲರಾಶಿಯಿಂದ ಕೂಡಿದ್ದನ್ನು ಟಿವಿಯಲ್ಲಿ ನೋಡಿ ಖುಷಿ ಪಟ್ಟಿದ್ದೆವು. ಆ ಸಮಯಕ್ಕೆ ಸರಿಯಾಗಿ ನಾನು, ನನ್ನ ಪತಿ ಹಾಗೂ ನನ್ನ ನಾದಿನಿ ತೀರ್ಥಹಳ್ಳಿಯಲ್ಲಿದ್ದ ನನ್ನ ಪತಿಯ ಸೋದರತ್ತೆಯ ಮನೆಗೆ ಹೋಗಿದ್ದೆವು. ಸರಿ ಅಲ್ಲಿಂದ ಜೋಗ ಜಲಪಾತ ನೋಡೋಣವೆಂದು ನಾವು, ಅಲ್ಲಿಂದ ನಾವು ಹಾಗೂ ಸೋದರತ್ತೆ ಮನೆಯವರೆಲ್ಲರೂ ಹೊರೆಟೆವು.

ಸರಿ ಜೋಗ ತಲುಪಿ, ಜಲಪಾತದ ವೀಕ್ಷಣಾ ತಾಣಕ್ಕೆ ಹೋದೆವು. ಅಲ್ಲಿ ಜಲಪಾತದ ಸುಳಿವಾಗಲೀ, ನೀರಿನ ಭೋರ್ಗರೆತವಾಗಲೀ ಕಂಡುಬರಲಿಲ್ಲ. ಬಹುಶಃ ಜಲಪಾತ ಬೇರೆಡೆ ಇರಬೇಕು, ನಾವು ತಪ್ಪು ಜಾಗಕ್ಕೆ ಬಂದಿದ್ದೇವೆಯೇ ಎಂದುಕೊಂಡರೆ, ಅಲ್ಲಿ ನಮ್ಮಂತೆ ಗೊಂದಲಕ್ಕೊಳಗಾಗಿ ನಿಂತ ನೂರಾರು ಜನರ ಗುಂಪು ಕಂಡು ಒಂದೆರಡು ನಿಮಿಷ ಅಲ್ಲಿಯೇ ನಿಂತೆವು. ಎದುರಿಗೆ ಜಲಪಾತದ 900 ಅಡಿ ಉದ್ದಕ್ಕೂ ಇಡೀ ಗುಂಡಿಯನ್ನು ದಟ್ಟವಾದ ಬಿಳಿಯ ಮೋಡ ಆವರಿಸಿತ್ತು! ಸ್ವಲ್ಪಹೊತ್ತು ಕಳೆದಿರಬಹುದು. ಜನರ ನಿರಾಶೆ ಕಳೆಯಲೆಂದೋ ಏನೋ ಸೂರ್ಯದೇವ ಮೋಡಗಳಿಂದ ತುಸುವೇ ಹೊರಬಂದು ಎಳೆ ಬಿಸಿಲಿನ ಸುಂದರ ಅನುಭವ ನೀಡಿದ. ಆಹಾ, ಒಂದೆರಡು ಕ್ಷಣಗಳಲ್ಲೇ ಜೋಗದ ಗುಂಡಿಯನ್ನಾವರಿಸಿ ಜನರನ್ನು ಮರುಳು ಮಾಡಿದ್ದ ಮೋಡಗಳು ಕರಗಿ ನೀರಾದವು. ಕ್ಷಣಮಾತ್ರದಲ್ಲಿ ಮೋಡಗಳ ಹಿಂದೆ ಅವಿತು ಕೊಂಡಿದ್ದ ಜಲಪಾತದ ಅಪರಿಮಿತ ಜಲರಾಶಿ ಗೋಚರಿಸುತ್ತಿದ್ದಂತೆಯೇ ಅದು ಧುಮ್ಮಿಕ್ಕುವ ಭೋರ್ಗರೆತದ ಧ್ವನಿಯನ್ನು ಕೇಳಿ ರೋಮಾಂಚನವಾಯಿತು.

ಜಲಪಾತ ಮೌನವಾಗಿರಲಿಲ್ಲ! ಅದು ತನ್ನಂತೆ ಇತ್ತು. ಆದರೆ ದಟ್ಟವಾದ ಮೋಡಗಳು

ಅದರ ಸಂದರ್ಯವನ್ನು ಮರೆಮಾಚಿ, ಜೊತೆಗೆ ಭೋರ್ಗರೆತದ ಧ್ವನಿಯನ್ನು ಕೂಡ ನುಂಗಿತ್ತು!!! ಪ್ರಕೃತಿಯ/ವಿಜ್ಞಾನದ ಈ ಪರಿಯನ್ನು ಕಂಡು ಅಚ್ಚರಿ ಪಡುವ, ಸಂಭ್ರಮ ಪಡುವ ಭಾಗ್ಯ ನಮ್ಮದಾಗಿತ್ತು.

*********

**ತೂಕರಹಿತ ಸ್ಥಿತಿ**

90ರ ದಶಕದಲ್ಲಿನ ನನ್ನ ಅಪೂರ್ವ ಅನುಭವವಿದು. ನಮ್ಮ ಕಾಲೇಜಿನಲ್ಲಿ ಪ್ರತಿವರ್ಷ ಅಧ್ಯಾಪಕ/ಕಿ ಯರನ್ನು ಒಂದು ಪ್ರವಾಸಕ್ಕೆ ಕರೆದೊಯ್ಯುವ ಪರಿಪಾಠವಿತ್ತು. ಆ ವರ್ಷ ಕಾಳಿನದಿ ರಿಸಾರ್ಟ್‌ನಲ್ಲಿ ನಮ್ಮ ವಾಸ್ತವ್ಯ ಏರ್ಪಡಿಸಿದ್ದರು. ದಟ್ಟ ಕಾಡಿನ ಮಧ್ಯೆ ಸುಂದರವಾದ ರಿಸಾರ್ಟ್. ಅಲ್ಲಿಂದ ನಾವು ದಾಂಡೇಲಿ ಕಾಡಿನ ಸುತ್ತ ಇರುವ ಕೆಲವು ಅತ್ಯಂತ ಪ್ರೇಕ್ಷಣಿಯ ಸ್ಥಳಗಳಿಗೆ ಭೇಟಿ ನೀಡಿದೆವು. ಅವುಗಳಲ್ಲೆಲ್ಲ ನಮ್ಮೆಲ್ಲರಿಗೆ ಅತ್ಯಪೂರ್ವ ಅನುಭವನೀಡಿದ್ದೆಂದರೆ ಕಾಳೀನದಿಯಲ್ಲಿ 'ವೈಟ್ ವಾಟರ್ ರಾಫ್ಟಿಂಗ್'. ಹಾಗೆಂದರೇನೆಂದು, ನನಗಂತೂ ಅಲ್ಲಿನ ಅನುಭವ ಹೇಗಿರುತ್ತದೆನ್ನುವ ಬಗ್ಗೆ ಕಿಂಚಿತ್ತೂ ನಿರೀಕ್ಷೆಯಿರಲಿಲ್ಲ.

ದೋಣಿಯಲ್ಲಿ ಕೂರುವ ಮುನ್ನ ನಮಗೆ ಲೈಫ್ ಜ್ಯಾಕೆಟ್ ಕೊಟ್ಟರು. ಮೊದಲ ಬಾರಿಗೆ ಅದನ್ನು ಧರಿಸಿದ್ದು. ನಾವು ಸುಮಾರು ಮೂವತ್ತೈದು ಜನರಿದ್ದೆವು. ಒಂದು ದೋಣಿಯಲ್ಲಿ ಏಳೆಂಟು ಜನರು ಕುಳಿತೆವು. ದೋಣಿಯನ್ನು ನಡೆಸುವವರು ನಾವೇ. ಜೊತೆಗೆ ಒಬ್ಬ ಗೈಡ್ ಇದ್ದನೆನ್ನಿ. ನನ್ನ ಜೊತೆಗಿದ್ದ ಯುವ ಅಧ್ಯಾಪಕ/ಕಿಯರು, ಮೇಡಂ, ನೀವು ಆರಾಮವಾಗಿ ಮಧ್ಯ ಕುಳಿತುಕೊಳ್ಳಿ. ನಾವು ದೋಣಿ ನಡೆಸುತ್ತೇವೆ ಎಂದರು. ಅವರು ಹೇಳಿದ್ದೇ ತಡ, ನಾನು ಆರಾಮವಾಗಿ ದೋಣಿಯ ಮಧ್ಯೆ ಕುಳಿತೆ. ಎಲ್ಲರೂ ಹಾಡುತ್ತ ದೋಣಿ ವಿಹಾರ ಮಾಡುತ್ತ ಮುಂದೆ ಸಾಗಿದೆವು.

ಒಂದು ಜಾಗದಲ್ಲಿ ನಮ್ಮ ಜೊತೆಗಿದ್ದ ಗೈಡ್, ಎಲ್ಲರೂ ನಿಮ್ಮ ಹುಟ್ಟುಗೋಲನ್ನು ಕೆಳಗೆ ಇಟ್ಟು, ಭದ್ರವಾಗಿ ದೋಣಿಯ ನೆಲದ ಮೇಲೆ ಕುಳಿತುಕೊಳ್ಳಿ,'ಎಂದನು. ಅಂತೆಯೇ ಎಲ್ಲರೂ ಹಾಗೇ ಮಾಡಿದರು. ಒಂದೆರಡು ನಿಮಿಷ ಹಾಗೇ ಕಳೆದಿರಬಹುದು. ಇದ್ದಕ್ಕಿದ್ದಂತೆ ದೋಣಿ ಮೇಲಿನಿಂದ ಕೆಳಗೆ ಧುಮುಕಿತು.ಫ್ರೀಫಾಲ್ ಅಂತಾರಲ್ಲಾಅಂತಹ ಅನುಭವ. ಆ ಕ್ಷಣದಲ್ಲಿ ನಮ್ಮೆಲ್ಲರಿಗೂ ತೂಕರಹಿತ ಅನುಭವವಾಗಿತ್ತು. ನಮ್ಮ ಅಸ್ತಿತ್ವವೇ ಇಲ್ಲವೇನೋ ಎಂಬಂತಹ ವಿಚಿತ್ರ ಅನುಭವ! ಎಲ್ಲರೂ ಗಾಬರಿಯೋ, ಅಚ್ಚರಿಯೋ, ಜೀವಭಯದಿಂದಲೋ ಒಟ್ಟಿಗೆ ಹೋ ಎಂದು ಕೂಗಿದೆವು. ಕಣ್ಣು ಬಿಡುವಷ್ಟರಲ್ಲಿ ನಮ್ಮ ದೋಣಿ ಹತ್ತು ಅಡಿ ಮೇಲಿಂದ ಕೆಳಗೆ ಧುಮುಕಿತ್ತು! ಅಬ್ಬಾ, ಅದೆಂತಹಾ ಅನಿರ್ವಚನೀಯ ಅನುಭವ! ಇಂದಿಗೂ ನೆನೆಸಿಕೊಂಡರೆ ಮೈಜುಮ್ ಎನ್ನುತ್ತದೆ.

ನಂತರ ನಮ್ಮ ಗ್ರಹಚಾರಕ್ಕೆ ದೋಣಿ ಎರಡು ಬಂಡೆಗಳ ಮಧ್ಯೆ ಸಿಲುಕಿಕೊಂಡಿತು. ನೀರು ಹೆಚ್ಚು ಆಳ ಇರಲಿಲ್ಲ. ಒಂದಿಬ್ಬರು ದೋಣಿಯಿಂದ ಇಳಿದು ತಳ್ಳಲು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಆಗ ನಮ್ಮ ನೆರವಿಗೆ ಬಂದಿದ್ದು ಮತ್ತೊಂದು ದೋಣಿಯಲ್ಲಿ ನಮ್ಮನ್ನು ಹಿಂಬಾಲಿಸಿದ ನಮ್ಮಿತರ ಅಧ್ಯಾಪಕ ವೃಂದದವರು. ಅವರು 'ನೀವೆಲ್ಲರೂ ಕಳಗಿಳಿಯಬೇಕು' ಎಂದಾಗ ಹೆದದರುತ್ತಲೇ ನಾವುಕೆಳಗಿಳಿದು ನೀರಿನಲ್ಲಿ ನಿಂತೆವು. ಅವರು ದೋಣಿಯನ್ನು ತಳ್ಳಿ ಬಂಡೆಗಳ ಹಿಡಿತದಿಂದ ಬಿಡಿಸಿದರು. ಮತ್ತೆ ನಾವೆಲ್ಲ ದೋಣಿಯನ್ನೇರಿ ಮುಂದೆ ಸಾಗಿದೆವು. ಸ್ವಲ್ಪ ದೂರದ ನಂತರ ಮತ್ತೊಮ್ಮೆಇದೇ ರೀತಿ ಸುಮಾರು ಮೂರಡಿ ಮೇಲಿಂದ ದೋಣಿ ನೀರಿನ ಮೈಲ್ಮೆ ಮೇಲೆ ಕೆಳಗೆ ಜಿಗಿಯಿತು. ಆದರೆ, ಈ ಬಾರಿ ಹತ್ತು ಅಡಿ ಮೇಲಿಂದ ಜಿಗಿದ ಅದ್ಭುತ ಅನುಭವ ಉಂಟಾಗಲಿಲ್ಲವೆನ್ನಿ.

■

# ಜಯವರ್ಮನು ಆಳಿದ ನಾಡಿನ ಅಪ್ಸರೆಯರೊಂದಿಗೆ ಒಂದು ಸಂಜೆ:– ಕಾಂಬೋಡಿಯದ ಅಪ್ಸರ ನೃತ್ಯ

✍ಶ್ರೀಧರ ಬಾಣಾವರ

ನಾವು ಕೈಗೊಳ್ಳುವ ಹೆಚ್ಚಿನ ಪ್ರವಾಸಿಗಳಲ್ಲಿ ಸಮಯದ ಅಭಾವದಿಂದ ಆ ದೇಶ ಪ್ರದೇಶದ ಸಾಂಸ್ಕೃತಿಕ ವೈವಿಧ್ಯಗಳನ್ನು ಕಾಣಲು ಸಾಧ್ಯವಾಗುವುದಿಲ್ಲ. ಹಲವೊಮ್ಮೆ ಇಂತಹ ಅವಕಾಶಗಳು ಆಕಸ್ಮಿಕವಾಗಿ ದಕ್ಕಿ, ಒಂದು ಮರೆಯಲಾಗದ ಮ್ಯಾಜಿಕಲ್ ಅನುಭವವನ್ನು ಒದಗಿಸಿಬಿಡುತ್ತವೆ. ಹೀಗೊಂದು ಮ್ಯಾಜಿಕಲ್ ಅನುಭವ ನಮಗೆ ದಕ್ಕಿದ್ದು, ನಮ್ಮ ಹಲವು ವರ್ಷಗಳ ಹಿಂದಿನ ಕಾಂಬೋಡಿಯಾ, ವಿಯೆಟ್ನಾಂ ಪ್ರವಾಸದಲ್ಲಿ. ಕಾಂಬೋಡಿಯಾದ ಸಿಯಾಮ್ ರೀಫ್‌ನಲ್ಲಿನ ಅಂಕರ್‌ವಾಟ್ ದೇವಾಲಯದ ಸಂಕೀರ್ಣದಲ್ಲಿ ಇನ್ನೂ ಹಾಳಾಗದೆ ಉಳಿದ ವಿಗ್ರಹಗಳ ಜೊತೆಯಲ್ಲಿ ಅನೇಕ ಅಪ್ಸರೆಯರ ಶಿಲ್ಪಕೃತಿಗಳು ಕಂಡುಬಂದವು. ನಿರ್ಜೀವ ವಿಗ್ರಹಗಳೇ ಅಲ್ಲದೆ ಆ ಸಮುಚ್ಚಯದಲ್ಲಿ ಅಪ್ಸರೆಯರ ವೇಷ ದರಿಸಿದ ಬಾಲೆಯರ ಜೊತೆ ನಮ್ಮ ಹೆಣ್ಣು – ಸಹಪ್ರವಾಸಿಗರು, ಚಿತ್ರ ತೆಗೆಸಿಕೊಳ್ಳುವ ಅವಕಾಶ ಸಹ ಗಿಟ್ಟಿಸಿಕೊಂಡರು. ನಂತರ ನಮಗೆ ದೊರೆತ ಮಾಹಿತಿಯ ಪ್ರಕಾರ ಕಾಂಬೋಡಿಯಾ ನಾಡಿನಲ್ಲಿ ಇಂದಿಗೂ ಅಪ್ಸರ ನೃತ್ಯವೆಂಬ ಕಲಾಪ್ರಕಾರ ಪ್ರಚಲಿತವಿರುವುದು ತಿಳಿಯಿತು.

ಏಳನೇ ಶತಮಾನದಿಂದ ಆರಂಭಿಸಿ ಸುಮಾರು ಆರು ನೂರು ವರ್ಷಗಳ ಕಾಲ ಹಿಂದೂ ದೊರೆಗಳ ಆಡಳಿತದಲ್ಲಿದ್ದು, ಹಿಂದೂ ಸಂಸ್ಕೃತಿ ತನ್ನ ಉಚ್ಛ್ರಾಯ ಸ್ಥಿತಿಯಲ್ಲಿ ಅಲ್ಲಿದ್ದ ಪರಿಣಾಮವಾಗಿ ದೇವಾಲಯ ಸಮುಚ್ಚಯಗಳು, ಕಲಾಪ್ರಕಾರಗಳು ಅಲ್ಲಿ ಮೇಳೈಸಿದ್ದವು. ಹಿಂದೂ ದೇವತೆಗಳ ಜೊತೆ ಯಕ್ಷ ಕಿನ್ನರರು, ಗಂಧರ್ವರು ಅಪ್ಸರೆಯರು ಮುಂತಾದ ಕಲ್ಪನೆಗಳು ಅಲ್ಲಿನ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆಳೆದಿದ್ದವು, ಈ ಸಂಸ್ಕೃತಿಯ ಒಂದು ಭಾಗವಾಗಿ ಹುಟ್ಟಿಕೊಂಡದ್ದೇ ಅಪ್ಸರ ನೃತ್ಯ.

ಕಾಂಬೋಡಿಯ ದೇಶ, ನಂತರದಲ್ಲಿ ಹಿಂದೂರಾಜರ ಆಳ್ವಿಕೆ ಕೊನೆಗೊಳ್ಳುವುದನ್ನು ಕಂಡು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಅನೇಕ ಏರುಪೇರುಗಳನ್ನು ಅನುಭವಿಸಿತ್ತು. ಈ ಎಲ್ಲಾ ವಿಪ್ಲವಗಳ ನಡುವೆಯೂ ಅಪ್ಸರ ನೃತ್ಯ ಪ್ರಕಾರ ಏಳುಬೀಳುಗಳನ್ನು ಕಂಡು ಇಂದಿಗೂ ಜೀವಂತವಾಗಿ ಉಳಿದಿರುವುದು ನಮ್ಮ ಪುಣ್ಯ. ನಮ್ಮ ಪ್ರವಾಸದ ಪಟ್ಟಿಯಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ವೀಕ್ಷಿಸಲು ಅವಕಾಶವಿರಲಿಲ್ಲ. ಆದರೆ ನಾವಿದ್ದ ವಸತಿಯ ಪಕ್ಕದಲ್ಲೇ ಪ್ರತಿ ಸಂಜೆ ಈ ನೃತ್ಯ ಕಾರ್ಯಕ್ರಮವಿರುವುದನ್ನು ಗುರುತಿಸಿದ ಮೇಲೆ ಅದರ ಅನುಭವವನ್ನು ಪಡೆಯಲು ತೀರ್ಮಾನಿಸಿದೆವು. ಪ್ರವಾಸದ ಆಯೋಜಕ ನಮ್ಮ ಕೋರಿಕೆಯ ಮೇಲೆ ಇದಕ್ಕೆ ಅನುವು ಮಾಡಿಕೊಟ್ಟ. ಅಲ್ಲಿ ಅಂದು ನಾವು ಕಂಡ ಸುಮಾರು ಎರಡು ಗಂಟೆಗಳ ಪ್ರದರ್ಶನ ನಮ್ಮನ್ನು ಒಂದು ರೀತಿಯ ಮಾಯಾಲೋಕಕ್ಕೆ ಕೊಂಡೊಯ್ದಿತ್ತು.

ಈ ನೃತ್ಯದ ವೇಷಭೂಷಣಗಳು, ಮುಖ್ಯವಾಗಿ ಅಂಕರ್‌ವಾಟ್‌ನ ದೇವಸ್ಥಾನದಲ್ಲಿರುವ ಮಾದರಿಗಳನ್ನು ಅನುಸರಿಸಿದೆ. ತಲೆಯ ಮೇಲಿನ ಕಿರೀಟಗಳು, ಉಡುಗೆ ತೊಡುಗೆಗಳು, ಆಭರಣಗಳು ರಂಗದ ಬೆಳಕಿನಲ್ಲಿ ಪ್ರಜ್ವಲಿಸಿ ನೋಡುಗನಿಗೆ ಒಂದು ವೈಭವೋಪೇತ ವಾತಾವರಣವನ್ನು ಸೃಷ್ಟಿಸುತ್ತವೆ. ಕೊರಳು, ಕಿವಿ, ಮುಂಗೈ, ತೋಳು, ಪಾದ, ಕಾಲು, ಸೊಂಟ ಎಲ್ಲ ಕಡೆ ಸಾಂಪ್ರದಾಯಿಕ ಆಭರಣಗಳು ಕಂಡುಬಂದವು. ಚಿನ್ನದ ಹೂಗಳು, ಮಣಿಗಳು, ರೇಷ್ಮೆ ವಸ್ತ್ರಗಳು ಅತ್ಯಂತ ಆಕರ್ಷಕ ರೀತಿಯಲ್ಲಿ ಗೋಚರವಾಗುತ್ತಿದ್ದವು.

ನೃತ್ಯ ಪ್ರದರ್ಶನದಲ್ಲಿನ ಹೆಚ್ಚಿನ ಪಾತ್ರಗಳು ಹಿಂದೂ ಹಾಗೂ ಬೌದ್ಧ ಮೈಥಾಲಜಿಯಲ್ಲಿನವೇ ಆಗಿದ್ದು, ದೇವತೆಗಳು, ರಾಕ್ಷಸರು, ಕೋತಿ ಮೊದಲಾದ ಪ್ರಾಣಿಗಳು, ಅಪ್ಸರೆಯರು, ರಾಜರಾಣಿಯರು ಎಲ್ಲರೂ ನೃತ್ಯದ ಭಾಗವಾಗಿರುತ್ತಾರೆ. ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಮುಂತಾದ ವಿಷಯಗಳನ್ನು ಆಧರಿಸಿದ ನೃತ್ಯಗಳು ಬಿಡಿ ಬಿಡಿಯಾಗಿ ನಮ್ಮ ಮುಂದೆ ಬಿಚ್ಚಿಕೊಳ್ಳುತ್ತವೆ. ಹಿನ್ನಲೆ ಸಂಗೀತಕ್ಕಾಗಿ ಬೊಂಬಿನಲ್ಲಿ ಮಾಡಿದ ಝ್ಯಲೋಫೋನ್ ಮಾದರಿಯ ವಾದ್ಯವನ್ನು ಹೆಚ್ಚಾಗಿ ಬಳಸಲಾಗುತ್ತದೆ. ಹಾಡುಗಳು, ಮಾತುಗಳು ಕನಿಷ್ಠ ಮಟ್ಟದಲ್ಲಿರುತ್ತವೆ. ಹಿನ್ನೆಲೆಯಲ್ಲಿ ಕಾಡು, ದೇವಾಲಯಗಳು ಆಂಕರ್‌ವಾಟ್‌ನ ಪ್ರಮುಖ ಶಿಲ್ಪಗಳಾದ ಬೃಹದಾಕಾರದ ಮಾನವ ಮುಖಗಳು ಕಂಡುಬರುತ್ತವೆ. ನಟರ ಮುಖಭಾವ ಹೆಚ್ಚಾಗಿ ಪ್ರದರ್ಶಿತವಾಗುವುದು ನಮಗೆ ಕಂಡುಬರಲಿಲ್ಲ. ಹಸ್ತಮುದ್ರೆಗಳು ನಮ್ಮ ದೇಶದ ನೃತ್ಯಪ್ರಕಾರಗಳಂತೆಯೇ ಪ್ರಮುಖ ಪಾತ್ರವಹಿಸುತ್ತವೆ. ನಿರ್ದಿಷ್ಟ ಅರ್ಥ ರೂಪಿಸುವ ಮುದ್ರೆಗಳು ಬಳಸಲ್ಪಡುತ್ತವೆ. ಸೊಂಟ ಮತ್ತು ಕೆಳಗಿನ ಭಾಗದ ವಿವಿಧ ರೀತಿಯ ಬಾಗುವಿಕೆಯಿಂದ ವಿಶಿಷ್ಟವಾದ ಭಂಗಿಗಳು ರೂಪುಗೊಂಡಿದ್ದು ಮನಮೋಹಕವಾಗಿತ್ತು, ನಮ್ಮ ಭರತನಾಟ್ಯ, ಕೂಚುಪುಡಿಗೆ ಹೋಲಿಸಿದರೆ ಈ ಪ್ರಕಾರ ಸ್ವಲ್ಪ ನಿಧಾನ ಗತಿಯದು ಎನಿಸಿತು. ಸಣ್ಣ ಸಣ್ಣ ಗುಂಪುಗಳ ನೃತ್ಯಗಳೇ ಇದ್ದು ಏಕವ್ಯಕ್ತಿ ಪ್ರದರ್ಶನಕ್ಕೆ ಅವಕಾಶ ಕಂಡುಬರಲಿಲ್ಲ. ಅಂದಿನ ಪ್ರದರ್ಶನದಲ್ಲಿ ಸಾಂಪ್ರದಾಯಿಕ ವಿಷಯಾಧಾರಿತ, ಅಪ್ಸರ ಕೇಂದ್ರಿತ ನೃತ್ಯಗಳ ಜೊತೆಗೆ, ಹಿಂದಿನ ಹಾಗೂ ಈಗಿನ ಜೀವನಕ್ರಮವನ್ನು ಪ್ರತಿನಿಧಿಸುವ ಹಲವು ಭಾಗಗಳು, ಉದಾಹರಣೆಗೆ, ಮೀನುಗಾರ ಹಾಗೂ ಅವನ ಪ್ರಿಯೆಯೊಡನೆ ಜರುಗುವ ಪ್ರೇಮ, ಅಲ್ಲಿನ ವ್ಯವಸಾಯ, ನಾಗರಿಕ ಜೀವನದ ಭಾಗಗಳಿದ್ದು, ಅದೊಂದು ಅವಿಸ್ಮರಣೀಯ ಮ್ಯಾಜಿಕಲ್ ಅನುಭವವಾಗಿ ನಮ್ಮ ಮನದಲ್ಲುಳಿದಿದೆ. ■

